॥ ಶ್ರೀಃ ॥

# ಪಂಚಾಂಗದ ಮೂಲಭೂತ ಅಂಶಗಳು

## ಪಂಚಾಂಗದಿಂದ ಫಲಗಳು

ತಿಥೇಶ್ಚ ಶ್ರಿಯಮಾಪ್ನೋತಿ ವಾರಾತ್ ಆಯುಷ್ಯವರ್ಧನಂ
ನಕ್ಷತ್ರಾತ್ ಹರತೇ ಪಾಪಂ ಯೋಗಾತ್ ರೋಗನಿವಾರಣಂ
ಕರಣಾತ್ ಕಾರ್ಯಸಿದ್ಧಿಃಸ್ಯಾತ್ ಪಂಚಾಂಗಂ ಫಲಮುತ್ತಮಮ್ ॥

ಪಂಚಾಂಗದ ಅಂಗಗಳನ್ನು ತಿಳಿದುಕೊಳ್ಳುವುದರಿಂದ ದೊರಕುವ ಫಲಗಳು ಹತ್ತಾರು: ತಿಥಿಯ ತಿಳುವಳಿಕೆಯಿಂದ ಸಂಪತ್ತು ಪ್ರಾಪ್ತಿ, ವಾರದಿಂದ ಆಯುಷ್ಯಾಭಿವೃದ್ಧಿ, ನಕ್ಷತ್ರದಿಂದ ಪಾಪಹರಣ, ಯೋಗದಿಂದ ರೋಗನಿವಾರಣೆ ಮತ್ತು ಕರಣದಿಂದ ಕೆಲಸದಲ್ಲಿ ಜಯ.

## ಪಂಚಾಂಗ

ಎಲ್ಲಾ ಸಮಯಕ್ಕೂ ಆ ಸಮಯದ ವಿಶೇಷವನ್ನು ಸೂಚಿಸುವ ವಾರ, ತಿಥಿ, ನಕ್ಷತ್ರ, ಯೋಗ ಮತ್ತು ಕರಣ ಎಂಬ ಐದು ಅಂಶಗಳು ಇರುವುವು. ವರ್ಷದ ಎಲ್ಲಾ ದಿನಗಳಿಗೂ ಈ ಐದು ಅಂಶಗಳನ್ನು ನಮೂದಿಸಿರುವ ದಿನಸೂಚಿಯೇ ಪಂಚಾಂಗ. ಈ ಅಂಶಗಳನ್ನು ಅಂಗಗಳೆಂದು ಪರಿಗಣಿಸಿ, ಐದು ಅಂಗಗಳನ್ನು ಸೂಚಿಸುವುದರಿಂದ ಪಂಚಾಂಗ ಎಂಬ ಹೆಸರು ಬಂದಿದೆ.

ಈ ಅಂಶಗಳನ್ನು ಸೂರ್ಯ ಮತ್ತು ಚಂದ್ರರ ಸ್ಥಾನಗಳಿಂದ ಪಡೆಯಲಾಗುವುದು. ಈ ಅಂಶಗಳನ್ನು, ಮಾಡುವ ಕಾರ್ಯಗಳ ಸಂಕಲ್ಪ ಮಾಡಲಿಕ್ಕೆ, ವ್ರತಗಳು ಹಾಗೂ ಶ್ರಾದ್ಧ ತಿಥಿಗಳನ್ನು ತಿಳಿಯಲು, ಶುಭ ಕಾರ್ಯಗಳಿಗೆ ದಿನ ನೋಡಲು ಉಪಯೋಗಿಸುತ್ತಾರೆ.

ಪಂಚಾಂಗದಲ್ಲಿ ಸೂರ್ಯ, ಚಂದ್ರ ಮತ್ತು ಇತರ ಗ್ರಹಗಳ ಸ್ಥಾನಗಳನ್ನೂ ನಮೂದಿಸಿರುತ್ತಾರೆ. ಈ ವಿಷಯಗಳನ್ನು ಶುಭ ಮುಹೂರ್ತಗಳನ್ನು ನಿಷ್ಕರ್ಶಿಸಲು, ಜಾತಕ ಬರೆಯಲಿಕ್ಕೆ ಮತ್ತು ಇತರ ಜ್ಯೋತಿಷ್ಯ ವಿಚಾರಗಳಿಗೆ ಉಪಯೋಗಿಸುತ್ತಾರೆ.

## ಗ್ರಹಗಳು

ಭಾರತೀಯ ಜ್ಯೋತಿಷ್ಯ ಪದ್ಧತಿಯು ಏಳು ಗ್ರಹಗಳನ್ನು ಮತ್ತು ಎರಡು ಛಾಯಾ ಗ್ರಹಗಳನ್ನು ಗಣನೆಗೆ ತೆಗೆದುಕೊಂಡಿದೆ. ಇವುಗಳು:

| ಕ್ರ. ಗ್ರಹಗಳು ಮತ್ತು ಛಾಯಾ ಗ್ರಹಗಳು | ಅಂತರ್ಯಾಮಿ ರೂಪ |
|---|---|
| 1. ಸೂರ್ಯ ಅಥವಾ ರವಿ ಅಥವಾ ಆದಿತ್ಯ | ರಾಮ |
| 2. ಚಂದ್ರ ಅಥವಾ ಸೋಮ | ಕೃಷ್ಣ |
| 3. ಕುಜ ಅಥವಾ ಮಂಗಳ ಅಥವಾ ಅಂಗಾರಕ ಅಥವಾ ಭೌಮ | ನರಸಿಂಹ |
| 4. ಬುಧ ಅಥವಾ ಸೌಮ್ಯ | ಬೌದ್ಧ |
| 5. ಗುರು ಅಥವಾ ಬೃಹಸ್ಪತಿ | ವಾಮನ |
| 6. ಶುಕ್ರ ಅಥವಾ ಭಾರ್ಗವ | ಪರಶುರಾಮ |
| 7. ಶನಿ ಅಥವಾ ಮಂದ | ಕೂರ್ಮ |
| 1. ಛಾಯಾ ಗ್ರಹ: ರಾಹು | ವರಾಹ |
| 2. ಛಾಯಾ ಗ್ರಹ: ಕೇತು ಅಥವಾ ಶಿಖಿ | ಮತ್ಸ್ಯ |

ರಾಹು ಮತ್ತು ಕೇತು ಗ್ರಹಗಳೇ ಅಲ್ಲ. ಅವು ಸೂರ್ಯ ಮತ್ತು ಚಂದ್ರರ ಪಥಗಳ ಸೇರುವಿಕೆಯ ಚುಕ್ಕೆಗಳು. ಇವುಗಳು ಯಾವಾಗಲೂ ಎದುರು ಬದುರಾಗಿ ಇರುತ್ತವೆ. ಇವುಗಳನ್ನು ಛಾಯಾಗ್ರಹಗಳೆಂದು ಕರೆಯುವುದೂ ಉಂಟು.

ಪಾಶ್ಚಿಮಾತ್ಯ ಖಗೋಳ ಶಾಸ್ತ್ರದಪ್ರಕಾರ, ಗ್ರಹಗಳಿಂದ ಬೆಳಕು ಮತ್ತು ಶಾಖ ಬರುವುದಿಲ್ಲ. ಹಾಗಾಗಿ ಅವರ ಪ್ರಕಾರ ಸೂರ್ಯ ಗ್ರಹ ಅಲ್ಲ. ನಮ್ಮ ಪದ್ಧತಿಯಲ್ಲಿ ಗ್ರಹವೆಂದೇ ಪರಿಗಣಿಸಿದೆ.

**ಗ್ರಹಗಳ ಚಲನೆಗಾಗುವ ಸಮಯ**

ಭಾರತೀಯ ಜ್ಯೋತಿಷ್ಯ ಪದ್ಧತಿಯಲ್ಲಿಯ, ಸೂರ್ಯನು ಭೂಮಿಯ ಸುತ್ತಲೂ ಸುತ್ತುತ್ತಾನೆ ಮತ್ತು ಭೂಮಿಯ ಸುತ್ತಲೂ ಗ್ರಹಗಳು ಇವೆ ಎಂಬ ಭಾವನೆಯನ್ನು **ಜಿಯೋ ಸೆಂಟ್ರಿಕ್** ಎಂದು ಕರೆಯುತ್ತಾರೆ. ಇದು ಪಂಚಾಂಗದ ವಿಷಯವನ್ನು ಸುಲಭವಾಗಿ ಗ್ರಹಿಸಲು ಬೇಕಾದ ಭಾವನೆ. ಭೂಮಿ ಮತ್ತು ಇತರ ಗ್ರಹಗಳು ಸೂರ್ಯನ ಸುತ್ತಲೂ ಸುತ್ತುತ್ತಿವೆ ಎಂಬ ಭಾವನೆಯನ್ನು **ಹೀಲಿಯೋ ಸೆಂಟ್ರಿಕ್** ಎನ್ನುತ್ತಾರೆ.

ಎಲ್ಲಾ ಗ್ರಹಗಳೂ (ಛಾಯಾ ಗ್ರಹಗಳನ್ನು ಹೊರತು) ಮುಂದಕ್ಕೆ ಚಲಿಸುತ್ತವೆ. ಛಾಯಾಗ್ರಹಗಳು ಇದಕ್ಕೆ ಪ್ರತಿಯಾಗಿ ಹಿಂದಕ್ಕೆ ಚಲಿಸುತ್ತವೆ. ಚಲನೆಯನ್ನು ಒಂದು ಕಾಗದದ ಮೇಲೆ ನಮೂದಿಸಿದಾಗ, ಮುಂದಕ್ಕೆ ಎನ್ನುವುದು ಗಡಿಯಾರದ ಕೈಗಳ ಚಲನೆಯಂತೆಯೂ (ಪ್ರದಕ್ಷಿಣಾಕಾರವಾಗಿ), ಹಿಂದಕ್ಕೆ ಎನ್ನುವುದು ಅದಕ್ಕೆ ವಿರುದ್ಧವಾಗಿಯೂ ಕಾಣುವುದು. ಹಿಂದಕ್ಕೆ ಎನ್ನುವುದನ್ನು **ವಕ್ರ**ಚಲನೆ (ರೆಟ್ರೋಗ್ರೆಶನ್) ಎಂದೂ ಕರೆಯುತ್ತಾರೆ.

ಭೂಮಿ ಸೂರ್ಯನನ್ನು ಒಂದು ಸುತ್ತು ಸುತ್ತಲು 365.256374 ದಿನಗಳಾಗುತ್ತವೆ. [ಭೂಮಿ ತನ್ನ ಅಕ್ಷದ ಮೇಲೆ ತಾನೇ ಒಂದು ಸುತ್ತು ತಿರುಗಲು (ಹಗಲು –ರಾತ್ರಿಗಳಾಗಲು) ಸುಮಾರು 23 ಘಂಟೆ 56 ನಿಮಿಷ ಆಗುತ್ತದೆ]. ಚಂದ್ರ ಭೂಮಿಯ ಸುತ್ತಲೂ ಒಂದು ಬಾರಿ ಬರಲು 27.32966 ದಿನಗಳಾಗುತ್ತವೆ. ಮಿಕ್ಕ ಗ್ರಹಗಳ ಸೂರ್ಯನ ಸುತ್ತಲಿನ ಒಂದು ಸುತ್ತಿಗೆ ಆಗುವ ಸಮಯ: ಬುಧ 87.969 ದಿನಗಳು, ಶುಕ್ರ 224.7 ದಿನಗಳು, ಮಂಗಳ 686.98 ದಿನಗಳು, ಗುರು 4332.585 ದಿನಗಳು ಮತ್ತು ಶನಿ 10759.22 ದಿನಗಳು. ಶನಿ ಎಲ್ಲಾ ಗ್ರಹಗಳಿಗಿಂತಲೂ ನಿಧಾನವಾಗಿ ಚಲಿಸುತ್ತದೆ. ಹಾಗಾಗಿ ಶನಿಗೆ **ಮಂದ** (ಬಹಳ ನಿಧಾನ) ಮತ್ತು **ಸ್ಥಿರ** (ನಿಂತಲ್ಲೇ ಇರುವವನು) ಎಂಬ ಅನ್ವರ್ಥ ನಾಮಗಳೂ ಉಂಟು.

ರಾಹು ಮತ್ತು ಕೇತು ವಕ್ರಚಲನೆಯಲ್ಲಿ ಭೂಮಿಯ ಸುತ್ತಲೂ ಒಂದು ಬಾರಿ ಬರಲು 6793.394774 ದಿನಗಳಾಗುತ್ತವೆ.

ಅಳತೆಯ ಪ್ರಕಾರ ಅಲ್ಲ




ಗ್ರಹಗಳ ಪಥಗಳು

## ಕೋಣಮಾಪನದಲ್ಲಿ ಗ್ರಹಗಳ ಸ್ಥಾನಗಳು

ಗ್ರಹಗಳ ಪಥಗಳ ಚಿತ್ರದಿಂದ ಗ್ರಹಗಳು ಸೂರ್ಯನಿಂದ ಬೇರೆಬೇರೆ ದೂರಗಳಲ್ಲಿರುವುದೂ, ಅವುಗಳ ಪಥಗಳು ಒಂದಕ್ಕಿಂತ ಒಂದು ಬೇರೆಯಾಗಿರುವುದೂ, ಭೂಮಿಯ ಸುತ್ತಲೂ ಬೇರೆಬೇರೆ ಸ್ಥಾನಗಳಲ್ಲಿ ಗ್ರಹಗಳು ಚಲಿಸುತ್ತಾ ಇರುವ ಸಾಧ್ಯತೆಯೂ ಗೋಚರವಾಗುತ್ತದೆ. ಗ್ರಹಗಳ ಪಥಗಳು ಸುಲಭವಾಗಿ ಹೇಳುವುದಾದರೆ ಅಂಡಾಕಾರದ್ದು (ಎಲಿಪ್ಸ್ ಅಥವಾ ಓವಲ್) ಆಗಿರುತ್ತದೆ.

ಪಂಚಾಂಗಕ್ಕಾಗಿ ಎಲ್ಲಾ ಗ್ರಹಗಳ ಸ್ಥಾನಗಳನ್ನು ಭೂಮಿಯನ್ನು ಮಧ್ಯವಾಗಿಟ್ಟು ನೋಡಿದರೆ ಕಾಣುವ ಕೋಣಮಾಪನದಲ್ಲಿ ಪ್ರತಿದಿನಕ್ಕೆ ಲೆಖ್ಖಹಾಕುತ್ತಾರೆ. ಗ್ರಹಗಳ ಕೋಣಮಾಪಿ ವೇಗ (ಆಂಗ್ಯುಲರ್ ಸ್ಪೀಡ್) ದಿನೇದಿನೇ ವ್ಯತ್ಯಾಸವಾಗುತ್ತಿರುತ್ತದೆ. ಈ ಲೆಖ್ಖಾಚಾರಗಳು ಕಠಿಣವಾದವು. ಸ್ಥಾನಗಳನ್ನು ಕೋಣಮಾಪನದಲ್ಲಿ ಡಿಗ್ರೀಸ್, ಮಿನಿಟ್ಸ್, ಸೆಕಂಡ್ಸ್ ಎಂದು ಸೂಚಿಸಲಾಗುತ್ತದೆ.

## ಎರಡು ಬಗೆಯ ಲೆಖ್ಖಾಚಾರಗಳು

ಸೂರ್ಯ ಸಿಧ್ಧಾಂತ ಮತ್ತು ದೃಗ್ಗಣಿತ ಎಂದು ಎರಡು ಬಗೆಯ ಲೆಖ್ಖಾಚಾರಗಳು ಗ್ರಹಗಳ ಸ್ಥಾನವನ್ನು ಗುಣಿಸಲು ಪ್ರಚಲಿತದಲ್ಲಿದೆ.

## ಸೂರ್ಯಸಿಧ್ಧಾಂತ

ಸೂರ್ಯಸಿಧ್ಧಾಂತ ಪದ್ಧತಿಯಲ್ಲಿ ಸೂರ್ಯ ಮತ್ತು ಚಂದ್ರರ ಸ್ಥಾನಗಳನ್ನು ಮಾತ್ರ ಗುಣಿಸಬಹುದು. ಪಂಚಾಂಗದ ಎಲ್ಲಾ ಅವಶ್ಯತೆಗಳನ್ನೂ ಈ ಪದ್ಧತಿಯಲ್ಲಿ ಪೂರೈಸಬಹುದು. ಈ ಪದ್ಧತಿಯಲ್ಲಿ ಗುಣಿಸಿದ ಪಂಚಾಂಗವನ್ನು ಎಲ್ಲಾ ಶಾಸ್ತ್ರೀಯ ಕಾರ್ಯಕ್ರಮಗಳಿಗೆ ಉಪಯೋಗಿಸಬಹುದು. (ಸೌರಮಾನಕ್ಕೂ ಸೂರ್ಯಸಿಧ್ಧಾಂತಕ್ಕೂ ಸಂಬಂಧವಿಲ್ಲ)

## ದೃಗ್ಗಣಿತ

ದೃಗ್ಗಣಿತ ಪದ್ಧತಿಯು ಕರಾರುವಾಕ್ಕಾದ ಫಲಿತಾಂಶ ಕೊಡುತ್ತದೆ. ಒಮ್ಮೆ ಲೆಖ್ಖಾಚಾರವನ್ನು ಮಾಡಿ, ಬಂದ ಫಲಿತಾಂಶಕ್ಕೆ ಬೇರೆಬೇರೆ ವಿಧದ ಸಂಸ್ಕಾರ ಎನ್ನುವ ಸೂಕ್ಷ್ಮ ಲೆಖ್ಖಾಚಾರಗಳನ್ನು ಹಲವು ಬಾರಿ ಮಾಡಿ ಫಲಿತಾಂಶವನ್ನು ಪಡೆಯಲಾಗುವುದು. ಈ ಪದ್ಧತಿಯಲ್ಲಿ ಎಲ್ಲಾ ಗ್ರಹಗಳ ಸ್ಥಾನಗಳನ್ನೂ (ಸೂರ್ಯ ಮತ್ತು ಚಂದ್ರರನ್ನೂ ಸೇರಿ) ಗುಣಿಸಲಾಗುವುದು. ಪಂಚಾಂಗದಲ್ಲಿ ಎಲ್ಲಾ ಗ್ರಹಗಳ ಸ್ಥಾನಗಳನ್ನೂ ನಮೂದಿಸಲಾಗುವುದು. ಜ್ಯೋತಿಷ್ಕರು ಈ ಪದ್ಧತಿಯ ಪಂಚಾಂಗದಿಂದ ಜಾತಕಗಳನ್ನು ಬರೆಯಲು, ಶುಭ ಮುಹೂರ್ತಗಳನ್ನು ನಿಷ್ಕರ್ಶೆ ಮಾಡಲು, ಜ್ಯೋತಿಷ್ಯ ನೋಡಲು ಉಪಯೋಗಿಸುತ್ತಾರೆ.

## ಝೋಡಿಯಾಕ್

ಭೂಮಿಯಿಂದ ನೋಡಿದಾಗ ಗ್ರಹಗಳೆಲ್ಲವೂ (ಸೂರ್ಯನ ಹೊರತು) ಭೂಮಧ್ಯರೇಖೆ (ಈಕ್ವೇಟರ್) ಇಂದ ಉತ್ತರಕ್ಕೆ 8 ಡಿಗ್ರೀ ಮತ್ತು ದಕ್ಷಿಣಕ್ಕೆ 8 ಡಿಗ್ರೀ ಕೋಣಮಾಪನದಲ್ಲಿ ಹರಡಿರುತ್ತವೆ (ಒಟ್ಟಿನಲ್ಲಿ 16 ಡಿಗ್ರೀ ಕೋಣಮಾಪನದೊಳಗೆ)– ಅಂದರೆ ಎಲ್ಲ ಗ್ರಹಗಳೂ ಒಂದೇ ಮಟ್ಟದಲ್ಲಿರುವುದಿಲ್ಲ. ಮಟ್ಟವನ್ನು ಗ್ರಹದ **ಪಾತ** (ಡೆಕ್ಲಿನೇಷನ್) ಎನ್ನುತ್ತಾರೆ. ಪಾತವೂ ದಿನೇದಿನೇ ಬದಲಾಯಿಸುತ್ತಿರುತ್ತದೆ.

ಭೂಮಿಯ ಸುತ್ತಲೂ ಹರಡಿರುವ ಗ್ರಹಗಳ ಪಥಗಳು ಒಂದು ಬೃಹತ್ ಅಂಡಾಕಾರದ (ಎಲಿಪ್ಸ್) 16 ಡಿಗ್ರೀ ಕೋಣಮಾಪನ ಅಗಲದ ಪಟ್ಟಿಯಲ್ಲಿ ಅಡಕವಾಗಿದೆ ಎನ್ನಬಹುದು. ಈ ಪಟ್ಟಿಗೆ ಝೋಡಿಯಾಕ್ ಎನ್ನುತ್ತಾರೆ. ಈ ಪಟ್ಟಿಯಲ್ಲೇ ನಕ್ಷತ್ರ ಮಂಡಲಗಳೂ ಇರುತ್ತವೆ. ಸೂರ್ಯನು ಈ ಪಟ್ಟಿಯಿಂದ ಹೊರಗೂ ಚಲಿಸುತ್ತಾನೆ



ಝೋಡಿಯಾಕ್ ಪಟ್ಟಿ




ಗ್ರಹಗಳು ಝೋಡಿಯಾಕ್ ಪಟ್ಟಿಯಲ್ಲಿ ಬೇರೆಬೇರೆ ಮಟ್ಟದಲ್ಲಿರುವುದು
ಅಳತೆಯ ಪ್ರಕಾರ ಅಲ್ಲ

## ರಾಶಿ ಮತ್ತು ಝೋಡಿಯಾಕ್

ಝೋಡಿಯಾಕ್ ಅಂಡಾಕಾರವಾಗಿದೆ, ಅದರ ಮಧ್ಯದಲ್ಲಿ ಭೂಮಿಯಿದೆ ಎಂದು ಕಾಗದದ ಮೇಲೆ ಚಿತ್ರಿಸಿದಾಗ (ಝೋಡಿಯಾಕ್ ನ ಅಗಲವನ್ನು ನಿರ್ಲಕ್ಷಿಸಿ) ಗ್ರಹಗಳ ಸ್ಥಾನಗಳನ್ನು ಭೂಮಿಗೆ ಸಂಬಂಧಿಸಿದಂತೆ ಕೋಣಮಾಪನದಲ್ಲಿ ಸೂಚಿಸಬಹುದು. ಝೋಡಿಯಾಕ್ ಅನ್ನು 12 ರಾಶಿಗಳನ್ನು ಸೂಚಿಸಲಿಕ್ಕಾಗಿ ಕೋಣಮಾಪನದಲ್ಲಿ 12 ಸಮನಾದ ಭಾಗಮಾಡಿ ಅವುಗಳನ್ನು ರಾಶಿ ಎಂದು ಕರೆದು ಪ್ರತ್ಯೇಕ ಹೆಸರುಗಳನ್ನು ಕೊಟ್ಟಿದ್ದಾರೆ.



ಭೂಮಿಯಿಂದ ನೋಡಿದಾಗ ಕಾಣುವಹಾಗೆ
ಝೋಡಿಯಾಕ್ ಪಟ್ಟಿ ಗ್ರಹಗಳ ಸಮೂಹಗಳ
ಅಳತೆಯ ಪ್ರಕಾರ ಅಲ್ಲ

ಜೋಡಿಯಾಕ್‌ನಲ್ಲಿನ 12 ರಾಶಿಗಳು:

| ಕ್ರ.ರಾಶಿ | ಇಂಗ್ಲಿಷ್ | ಚಿನ್ಹೆ | ಕ್ರ. ರಾಶಿ | ಇಂಗ್ಲಿಷ್ | ಚಿನ್ಹೆ |
|---|---|---|---|---|---|
| 1 ಮೇಷ | ಏರಿಸ್ | ಟಗರು | 7 ತುಲಾ | ಲಿಬ್ರ | ತಕ್ಕಡಿ ಹಿಡಿದವನು |
| 2 ವೃಷಭ | ಟೌರಸ್ | ಎತ್ತು | 8 ವೃಶ್ಚಿಕ | ಸ್ಕಾರ್ಪಿಯೋ | ಚೇಳು |
| 3 ಮಿಥುನ | ಜೆಮಿನಿ | ಸ್ತ್ರೀ–ಪುರುಷ ಜೋಡಿ[1] | 9 ಧನುಸ್ | ಸಗಿಟಾರಿಯಸ್ | ಬಿಲ್ಲುಹಿಡಿದವನು[3] |
| 4 ಕರ್ಕಾಟಕ | ಕ್ಯಾನ್ಸರ್ | ಏಡಿ | 10 ಮಕರ | ಕ್ಯಾಪ್ರಿಕಾರ್ನ್ | ಜಿಂಕೆ ಮುಖದ ಮೊಸಳೆ |
| 5 ಸಿಂಹ | ಲಿಯೋ | ಸಿಂಹ | 11 ಕುಂಭ | ಅಕ್ವೇರಿಯಸ್ | ಕುಂಭ ಹಿಡಿದಿರುವವ |
| 6 ಕನ್ಯಾ | ವಿರ್ಗೋ | ದೋಣಿಯಲ್ಲಿ ಕನ್ಯೆ[2] | 12 ಮೀನ | ಪಿಸಸ್ | ಎರಡು ಮೀನುಗಳು |

1. ಮಿಥುನ – ಸ್ತ್ರೀ ವೀಣೆ ಹಿಡಿದಿರುವಳು, ಪುರುಷ ಗದಾಧಾರಿ
2. ಕನ್ಯಾ – ದೋಣಿಯಲ್ಲಿ ಕುಳಿತಿರುವ ಕನ್ಯೆ – ಬೆಂಕಿ ಮತ್ತು ಸಸ್ಯಗಳನ್ನು ಹಿಡಿದಿರುವಳು
3. ಧನುಸ್ – ಬಿಲ್ಲು ಹಿಡಿದವನ ಪಾದಗಳು ಕುದುರೆಯ ಗೊರಸಿನಹಾಗೆ ಇವೆ.

## ಝೋಡಿಯಾಕ್ ನಲ್ಲಿ ಗ್ರಹಗಳ ಸ್ಥಾನಗಳು

ಗ್ರಹಗಳ ಸ್ಥಾನಗಳನ್ನು (ಕೋಣಮಾಪನದಲ್ಲಿ) ಭಾರತೀಯ ಪದ್ಧತಿಯಲ್ಲಿ ರಾಶಿ (1 ರಾಶಿ = 30 ಡಿಗ್ರೀ), ಭಾಗ (1 ಬಾಗ = 1 ಡಿಗ್ರೀ), ಕಲಾ (1 ಕಲಾ = 1 ಮಿನಿಟ್), ವಿಕಲಾ (1 ವಿಕಲಾ = 1 ಸೆಕಂಡ್) ಮತ್ತು ತರ್ಪರ (1 ತರ್ಪರ = 1/60 ಸೆಕಂಡ್) ಎಂದೂ ಸೂಚಿಸಲಾಗುತ್ತದೆ. ಇವನ್ನು ಕುಂಡಲಿಯಲ್ಲಿ ನಮೂದಿಸುತ್ತಾರೆ.

## ಕುಂಡಲಿ / ಜಾತಕ

ಒಂದು ಸಮಯದಲ್ಲಿನ ಗ್ರಹಗಳ ಸ್ಥಾನವನ್ನು ರಾಶಿಗಳಲ್ಲಿ ತೋರಿಸುವ ಚಿತ್ರಕ್ಕೆ ಕುಂಡಲಿ ಎನ್ನುತ್ತಾರೆ. ಚಿತ್ರವು ಈ ಕೆಳಕಂಡಂತೆ ಚೌಕಾಕೃತಿಯಲ್ಲಿ 4 ಸಾಲು ಮತ್ತು 4 ಕಾಲಂಗಳುಳ್ಳದ್ದು. ಮಧ್ಯದ 4 ಸಣ್ಣ ಚೌಕಗಳನ್ನು ಬಿಟ್ಟು 12 ಸಣ್ಣ ಚೌಕಗಳನ್ನು (ಮನೆ) ಹೊಂದಿರುವುದು. ಮೇಲಿನ ಸಾಲಿನ ಎರಡನೇ ಮನೆಯನ್ನು ಮೊದಲನೇ ರಾಶಿ (ಮೇಷ) ಎಂದು ಪರಿಗಣಿಸಿ, ಗಡಿಯಾರದ ಪ್ರಕಾರ (ಪ್ರದಕ್ಷಿಣಾಕಾರದಲ್ಲಿ) ಲೆಖ್ಖಹಾಕುವುದು ಪದ್ಧತಿ.

| | | | |
|---|---|---|---|
| ಮೀನ 12 | ಮೇಷ 1 | ವೃಷಭ 2 | ಮಿಥುನ 3 |
| ಕುಂಭ 11 | | | ಕರ್ಕಾಟಕ 4 |
| ಮಕರ 10 | | | ಸಿಂಹ 5 |
| ಧನುಸ್ 9 | ವೃಶ್ಚಿಕ 8 | ತುಲಾ 7 | ಕನ್ಯಾ 6 |

ದಕ್ಷಿಣ ಭಾರತದಲ್ಲಿನ ಪದ್ಧತಿ

ಜಾತಕವು ಒಂದು ಸ್ಥಳದಲ್ಲಿನ ಒಂದು ನಿಗದಿತ ಸಮಯದಲ್ಲಿನ ಗ್ರಹಗಳ ಸ್ಥಾನ ಚಿತ್ರ. ಕುಂಡಲಿಯಲ್ಲಿ, ಆ ಸ್ಥಳವನ್ನು (ಭೂಮಿಯ ಸುತ್ತುವಿಕೆಗನುಗುಣವಾಗಿ) ನಮೂದಿಸಲಿಕ್ಕಾಗಿ ಲಗ್ನ (ಅಸೆಂಡೆಂಟ್) ಎನ್ನುವುದನ್ನು ಸೇರಿಸಲಾಗುವುದು. ಸಾಮಾನ್ಯ ಬಳಕೆಯಲ್ಲಿ ಕುಂಡಲಿ ಮತ್ತು ಜಾತಕ ಪದಗಳನ್ನು ಪರ್ಯಾಯವಾಗಿ ಉಪಯೋಗಿಸುತ್ತಾರೆ.

ಮೇಲೆ ನಮೂದಿಸಿರುವುದು ದಕ್ಷಿಣ ಭಾರತದಲ್ಲಿನ ಪದ್ಧತಿ. ಭಾರತದ ಮಿಕ್ಕ ಪ್ರದೇಶಗಳಲ್ಲಿ ಕೆಳಗೆ ನಮೂದಿಸಿರುವ ಮಾದರಿಯಲ್ಲಿ ಕುಂಡಲಿಯನ್ನು ಬರೆಯುತ್ತಾರೆ ಮತ್ತು ಇದರಲ್ಲಿ ಮನೆಗಳ ಸಂಖ್ಯೆಯನ್ನು ಪರಿಗಣಿಸುವುದರಲ್ಲಿ ಹಲವು ವಿಧಗಳಿವೆ. ಇಲ್ಲಿ ಗಣನೆ ಅಪ್ರದಕ್ಷಿಣಾಕಾರದಲ್ಲಿ.



ಭಾರತದ ಮಿಕ್ಕ
ಪ್ರದೇಶಗಳ
ಪದ್ಧತಿ

ಜಾತಕಕ್ಕೆ ಸಾಮಾನ್ಯವಾಗಿ ಎರಡು ಕುಂಡಲಿಯನ್ನು ಕೊಟ್ಟಿರುತ್ತಾರೆ – ರಾಶಿ ಕುಂಡಲಿ: ಗ್ರಹಗಳ ಸ್ಥಾನಗಳನ್ನು ಸೂಚಿಸುತ್ತವೆ. ನವಾಂಶ (ಅಂಶ) ಕುಂಡಲಿ: ಅಂದರೆ ಒಂಬತ್ತನೇ ಒಂದು ಭಾಗ – ಜ್ಯೋತಿಷ್ಕರಿಗೆ ಉಪಯೋಗವಾಗುವಹಾಗೆ ರಾಶಿಕುಂಡಲಿಯಲ್ಲಿನ ಸ್ಥಾನಮಾನಗಳನ್ನು ಸೂಕ್ಷ್ಮದೃಷ್ಟಿಯಿಂದ ನೋಡಿ ತಯಾರಿಸಿರುವುದು. ಆದ್ದರಿಂದ ಕುಂಡಲಿಯಲ್ಲಿ ರಾಶಿ / ನವಾಂಶ ಎಂದೂ ಬರೆದಿರುತ್ತಾರೆ.

**ಎರಡು ಬಗೆಯ ದಿನಗಣನೆ**

ಸೌರಮಾನ ಮತ್ತು ಚಾಂದ್ರಮಾನ ಎಂದು ಎರಡು ಬಗೆಯ ದಿನಗಣನೆ ಬಳಕೆಯಲ್ಲಿದೆ.

**ಸಂಕ್ರಮಣ (ಸಂಕ್ರಾಂತಿ)**

ಸೂರ್ಯ ಒಂದು ರಾಶಿಯನ್ನು ಬಿಟ್ಟು ಮುಂದಿನ ರಾಶಿಯನ್ನು ಪ್ರವೇಶಿಸುವ ಸಮಯವನ್ನು ಸಂಕ್ರಮಣ (ಸಂಕ್ರಾಂತಿ) ಎನ್ನುತ್ತಾರೆ. ಸಂಕ್ರಮಣವು ಸೌರಮಾನದ ಮೈಲಿಗಲ್ಲು. ಸೌರಮಾನ ಎಂದರೆ ಸೂರ್ಯನ ಚಲನೆಗೆ ಸಂಬಂಧಿಸಿದ್ದು. ಸಂಕ್ರಮಣದಿಂದ ಸೌರಮಾಸ ಪ್ರಾರಂಭವಾಗುತ್ತದೆ.

**ವಾಕ್ಯ ಸಂಕ್ರಮಣ**

ಒಂದು ವಾಕ್ಯದಲ್ಲಿ, ವರ್ಷದಲ್ಲಿನ ಎಲ್ಲಾ ಸಂಕ್ರಮಣಗಳ ಅಂತರದ ಕಾಲಾವಧಿಯನ್ನು ನಿಗದಿತವಾಗಿ ಋಷಿ ಮುನಿಗಳು ಕೊಟ್ಟಿದ್ದಾರೆ. ಆ **ವಾಕ್ಯ**ವನ್ನು ಉಪಯೋಗಿಸಿ ನಿರ್ಣಯಿಸುವ ಸಂಕ್ರಮಣಕ್ಕೆ ವಾಕ್ಯ ಸಂಕ್ರಮಣ ಎನ್ನುತ್ತಾರೆ. ಮುಂದಿನ ಪುಟದಲ್ಲಿ ವಿವರಗಳನ್ನು ಕೊಟ್ಟಿದೆ.

ಸೂರ್ಯಸಿದ್ಧಾಂತ ಮತ್ತು ದೃಗ್ಗಣಿತ ಸಂಕ್ರಮಣಗಳನ್ನು, ಸೂರ್ಯನ ಚಲನೆಯನ್ನು ಗುಣಿಸಿ ನಿರ್ಣಯಿಸಲಾಗುತ್ತದೆ.

**ಬೇರೆಬೇರೆ ಸಂಕ್ರಮಣವೇಕೆ?**

ಸಂಕ್ರಮಣವು ಹಗಲು, ರಾತ್ರಿ ಯಾವಾಗಲಾದರೂ ಆಗಬಹುದು. ಸಂಜೆ ಹಾಗೂ ರಾತ್ರಿ ವೇಳೆಯಲ್ಲಿ ಆದರೆ ತರ್ಪಣಾದಿ ಆಚರಣೆ ಕಷ್ಟವಾಗುತ್ತದೆ. ವಾಕ್ಯ, ಸೂರ್ಯಸಿದ್ಧಾಂತ

ಮತ್ತು ದೃಗ್ಗಣಿತ ಸಂಕ್ರಮಣಗಳಲ್ಲಿ ಯಾವುದಾದರೂ ಒಂದು ಆಚರಣೆಗೆ ಅನುಕೂಲವಾದ ಕಾಲದಲ್ಲಿರಬಹುದು, ಅದಕ್ಕೇ ಮೂರೂ ಸಂಕ್ರಮಣವನ್ನು ಒಂದೇ ಪಂಚಾಂಗದಲ್ಲಿ ನಮೂದಿಸುವುದು ಎನ್ನುವುದು ಒಂದು ಅಭಿಪ್ರಾಯ.

### ಸೌರ ಮಾಸ

ಎರಡು ಪಕ್ಕಪಕ್ಕದ ಸಂಕ್ರಮಣಗಳ ನಡುವಿನ ಕಾಲವೇ ಒಂದು ಸೌರ ಮಾಸ. ಅಂದರೆ ಸೂರ್ಯ ಒಂದು ರಾಶಿಯಲ್ಲಿರುವಷ್ಟು ಕಾಲ. ಸೌರ ಮಾಸದ ಹೆಸರು ಸೂರ್ಯನಿರುವ ರಾಶಿಯದ್ದೇ ಹೆಸರು. ಸಂಕ್ರಾಂತಿಯ ಹೆಸರು ಯಾವ ರಾಶಿಯನ್ನು ಸೂರ್ಯ ಪ್ರವೇಶಿಸುತ್ತಾನೋ ಆ ರಾಶಿಯದು.

ಅಳತೆಯ ಪ್ರಕಾರ ಇಲ್ಲ

ಸಂಕ್ರಮಣ | ಸಂಕ್ರಮಣ

| ಸೌರ ತೇದಿ | 30 | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 | 22 | 23 | 24 | 25 | 26 | 27 | 28 | 29 | 30 | 1 | 2 |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| ಸೌರ ಮಾಸ | | **ಮೇಷ ಮಾಸ** | | | | | | | | | | | | | | | | | | | | | | | | | | | | | | | |

ಮೇಷ ಸಂಕ್ರಮಣ | ವೃಷಭ ಸಂಕ್ರಮಣ

ಸೂರ್ಯನ ಚಲನೆಯ ವೇಗದಲ್ಲಿ (ಗತಿ) ದಿನೇದಿನೇ ವ್ಯತ್ಯಾಸವಿರುವುದರಿಂದ ಎಲ್ಲಾ ಸೌರ ಮಾಸಗಳ ಕಾಲಾವಧಿ ಒಂದೇ ಆಗಿರುವುದಿಲ್ಲ. ವರ್ಷದ 12 ಸೌರ ಮಾಸಗಳ ಹೆಸರು, ಆ ಮಾಸಗಳ ಅತಿ ಸಾಮಾನ್ಯ ಕಾಲಾವಧಿಯನ್ನು ಮೂರೂ ಪದ್ಧತಿಗಳ ಪ್ರಕಾರ ಕೆಳಗೆ ಕೊಟ್ಟಿದೆ. ಬೇರೆಬೇರೆ ಪದ್ಧತಿಗಳಲ್ಲಿ ಮಾಸಮಾಸಕ್ಕೂ ವ್ಯತ್ಯಾಸ ಕಂಡರೂ ವರ್ಷಕ್ಕೆ ಎಲ್ಲಾ ಸಮವಾಗಿರುವುದನ್ನು ಗಮನಿಸಬಹುದು.

| ಮಾಸದ ಹೆಸರು | | | | ಮಾಸದ ಕಾಲಾವಧಿ | | | | | | | | |
|---|---|---|---|---|---|---|---|---|---|---|---|---|
| | | | | ಸೂರ್ಯ ಸಿದ್ಧಾಂತ | | | ದೃಗ್ಗಣಿತ | | | ವಾಕ್ಯ[2] | | |
| ಕ್ರಮ ಸಂಖ್ಯೆ | ಸಂಸ್ಕೃತ ಕನ್ನಡ[1] | ತಮಿಳು | ತುಳು | ದಿನಗಳು | ಘಟಿಗಳು | ವಿಘಟಿಗಳು | ದಿನಗಳು | ಘಟಿಗಳು | ವಿಘಟಿಗಳು | ದಿನಗಳು | ಘಟಿಗಳು | ವಿಘಟಿಗಳು |
| 1 | ಮೇಷ | ಚಿತ್ತಿರೈ | ಪಗ್ಗು | 30 | 21 | 36 | 30 | 21 | 23 | 30 | 55 | 32 |
| 2 | ವೃಷಭ | ವೈಕಾಸಿ | ಬೇಶ | 30 | 36 | 22 | 30 | 52 | 21 | 31 | 9 | 12 |
| 3 | ಮಿಥುನ | ಆಣಿ | ಕಾರ್ತೆಲ್ | 31 | 45 | 23 | 31 | 16 | 41 | 31 | 51 | 38 |
| 4 | ಕರ್ಕಾಟಕ | ಆಡಿ | ಆಟಿ | 32 | 38 | 49 | 31 | 27 | 22 | 31 | 28 | 12 |
| 5 | ಸಿಂಹ | ಆವಣಿ | ಸೋಣ | 31 | 28 | 22 | 31 | 21 | 12 | 31 | 2 | 10 |
| 6 | ಕನ್ಯಾ | ಪುರಟ್ಟಾಸಿ | ನಿರ್ನಾಲ | 31 | 0 | 53 | 30 | 59 | 52 | 30 | 27 | 22 |
| 7 | ತುಲಾ | ಐಪಸಿ | ಬೊಂತೆಲ್ | 30 | 26 | 8 | 30 | 29 | 57 | 29 | 54 | 7 |
| 8 | ವೃಶ್ಚಿಕ | ಕಾರ್ತಿಕೈ | ಜಾರ್ದೆ | 29 | 53 | 12 | 29 | 59 | 21 | 29 | 30 | 24 |
| 9 | ಧನುಸ್ | ಮಾರ್ಗಳಿ | ಪೆರಾರ್ದೆ | 28 | 29 | 24 | 29 | 36 | 24 | 29 | 20 | 53 |
| 10 | ಮಕರ | ತೈ | ಪುಯಿಂತೆಲ್ | 29 | 18 | 57 | 29 | 26 | 41 | 29 | 27 | 16 |
| 11 | ಕುಂಭ | ಮಾಸಿ | ಮಾಯಿ | 29 | 26 | 59 | 29 | 32 | 14 | 29 | 48 | 24 |
| 12 | ಮೀನ | ಪಂಗುಣಿ | ಸುಗ್ಗಿ | 29 | 49 | 30 | 29 | 52 | 6 | 30 | 20 | 21 |
| | | | **ಮೊತ್ತ** | 365 | 15 | 35 | 365 | 15 | 34 | 365 | 15 | 31 |

**1.ರಾಶಿಯ ಹೆಸರೇ, 2 ವಾಕ್ಯ ಪದ್ಧತಿಯ ಮಾಸದ ಕಾಲಾವಧಿ ನಿಖರವಾದದ್ದು(ಕಾನ್ಸ್ಟಂಟ್)**

ಸೂರ್ಯ ಸಿದ್ಧಾಂತದ ಫಲಿತಾಂಶಕ್ಕೂ ಇಂದಿನ ವೈಜ್ಞಾನಿಕ ಲೆಖ್ಖಾಚಾರದ ಫಲಿತಾಂಶಕ್ಕೂ ಬಹಳ ಸಾಮೀಪ್ಯ ಇದೆ ಎನ್ನುವುದನ್ನು ಕೆಳಗೆ ಕೊಟ್ಟಿರುವ ಮಾಹಿತಿಯಿಂದ ಕಾಣಬಹುದು.

| | **ಸೂರ್ಯ ಸಿದ್ಧಾಂತ** | **ವೈಜ್ಞಾನಿಕ** |
|---|---|---|
| ಸೌರ ಮಾಸ (ಸೈಡೀರಿಯಲ್ ವರ್ಷದ 1/12 ಭಾಗ) | 30.438229707 | 30.438030 |
| ಚಾಂದ್ರಮಾನ ಮಾಸ | 29.530587946 | 29.530588 |
| ಚಾಂದ್ರಮಾನ ವರ್ಷ (12 ತಿಂಗಳುಗಳು) | 354.367055350 | 354.367056 |

**ಸೌರಮಾನ ದಿನಾಂಕಗಳು**

ಸೌರಮಾನ ದಿನಾಂಕಗಳು ಸಂಕ್ರಮಣದಿಂದ ಮುಂದಿನ ಸಂಕ್ರಮಣದವರೆಗೆ ಕ್ರಮವಾಗಿ 1, 2, 3, ... ಎಂದು ಪರಿಗಣಿಸಲಾಗುವುದು. ಮಾಸ ಪ್ರಾರಂಭದ ಮೊದಲನೇ ದಿನಾಂಕ ನಿರ್ಣಯ ಮಾಡಲು ಬೇರೆಬೇರೆ ವಿಧಗಳು ಪ್ರಚಲಿತವಾಗಿವೆ: 1. ಸೂರ್ಯೋದಯದಿಂದ 45 ಘಟಿಯೊಳಗೆ ಸಂಕ್ರಮಣವಾದಲ್ಲಿ ಅಂದಿನ ದಿನವೇ ಮೊದಲ ದಿನಾಂಕ, 45 ಘಟಿಯ ನಂತರವಾದಲ್ಲಿ ಮುಂದಿನ (ಮಾರನೇ) ದಿನವು, 2. ಯಾವಾಗಲೂ ಸಂಕ್ರಮಣದ ಮರುದಿನವೇ, 3. ವಾಕ್ಯ ಸಂಕ್ರಮಣ ಉಪಯೋಗಿಸಿ ಮೇಲೆ ಹೇಳಿದ ಎರಡರಲ್ಲಿ ಒಂದು ವಿಧ.

**ದಕ್ಷಿಣಾಯನ ಮತ್ತು ಉತ್ತರಾಯಣ ಪುಣ್ಯಕಾಲಗಳು**

ಕರ್ಕಾಟಕ ಸಂಕ್ರಮಣವನ್ನು ದಕ್ಷಿಣಾಯನ ಪುಣ್ಯಕಾಲ ಎನ್ನುತ್ತಾರೆ. ಇದು ಮೇಷ ಸಂಕ್ರಮಣದಿಂದ 3 ತಿಂಗಳ ನಂತರದ ಸಂಕ್ರಮಣ. ಈ ಸಮಯದಲ್ಲಿ ಸೂರ್ಯನು ಸಮಭಾಜಕದಿಂದ ಉತ್ತರದ $23\ 1/2^0$ ಅಕ್ಷಾಂಶದ (**ಕರ್ಕಾಟಕ ಸಂಕ್ರಾಂತಿ ವೃತ್ತ**– ಭಾರತದ ಮಧ್ಯಭಾಗದಲ್ಲಿ [ಅಹಮದಾಬಾದ್, ಭೋಪಾಲ್, ದುರ್ಗಾಪುರ್ ಮಾರ್ಗವಾಗಿ] ಹಾದುಹೋಗುತ್ತದೆ) ಮೇಲೆ ಸರಿಯಾಗಿ ಬಂದು, ಆ ಸಮಯದಿಂದ ದಕ್ಷಿಣ ಪಥದಲ್ಲಿ ಹೋಗುತ್ತಾನೆ. ಸಾಮಾನ್ಯವಾಗಿ ಇದು ಜುಲೈ 16 ಆಗಿರುತ್ತದೆ.




ದಕ್ಷಿಣಾಯನ ಪುಣ್ಯಕಾಲ ಮತ್ತು ಉತ್ತರಾಯಣ ಪುಣ್ಯಕಾಲಗಳಲ್ಲಿ ಸೂರ್ಯನ ಸ್ಥಾನ

ಅಳತೆಯ ಪ್ರಕಾರ ಅಲ್ಲ – ಭೂಮಿಯನ್ನು ಅತಿ ದೊಡ್ಡದಾಗಿ ತೋರಿಸಿದೆ.

ಮಕರ ಸಂಕ್ರಮಣವನ್ನು ಉತ್ತರಾಯಣ ಪುಣ್ಯಕಾಲ ಎನ್ನುತ್ತಾರೆ. ಇದು ಕರ್ಕಾಟಕ ಸಂಕ್ರಮಣದಿಂದ 6 ತಿಂಗಳ ನಂತರದ ಸಂಕ್ರಮಣ. ಈ ಸಮಯದಲ್ಲಿ ಸೂರ್ಯನು ದಕ್ಷಿಣದ 23 1/2$^0$ ಅಕ್ಷಾಂಶದ (**ಮಕರ ಸಂಕ್ರಾಂತಿ ವೃತ್ತ** – ಆಸ್ಟ್ರೇಲಿಯಾ ಖಂಡದಮೇಲೆ) ಮೇಲೆ ಸರಿಯಾಗಿ ಬಂದು, ಆ ಸಮಯದಿಂದ ಉತ್ತರ ಪಥದಲ್ಲಿ ಹೋಗುತ್ತಾನೆ. ಸಾಮಾನ್ಯವಾಗಿ ಇದು ಜನವರಿ 14 ಆಗಿರುತ್ತದೆ.

ಕರ್ಕಾಟಕ ಸಂಕ್ರಮಣದ ಹತ್ತಿರದ ಸಮಯ ಜೂನ್ 21 ಕ್ಕೆ **ಸಮ್ಮರ್ ಸೋಲ್‌ಸ್ಟೈಸ್** (ಅತಿ ಹೆಚ್ಚಿನ ಹಗಲು [ದಿನಮಾನ] ಉಳ್ಳ ದಿನ) ಎನ್ನುತ್ತಾರೆ. ಮಕರ ಸಂಕ್ರಮಣದ ಹತ್ತಿರದ ಸಮಯ ಡಿಸೆಂಬರ್ 22 ಕ್ಕೆ **ವಿಂಟರ್ ಸೋಲ್‌ಸ್ಟೈಸ್** (ಅತಿ ಕಡಿಮೆ ದಿನಮಾನ ಉಳ್ಳ ದಿನ) ಎನ್ನುತ್ತಾರೆ. ಈ ದಿನಾಂಕಗಳ ಮಧ್ಯಕಾಲಗಳಾದ ಮಾರ್ಚ್ 21 ನ್ನು **ವರ್ನಲ್ (ಸ್ಪ್ರಿಂಗ್) ಈಕ್ವಿನಾಕ್ಸ್** ಎಂತಲೂ ಮತ್ತು ಸೆಪ್ಟೆಂಬರ್ 23 ನ್ನು **ಆಟಂನಲ್ ಈಕ್ವಿನಾಕ್ಸ್** ಎಂದೂ ಕರೆಯುತ್ತಾರೆ. ಈ ದಿನಗಳಲ್ಲಿ ಹಗಲು, ರಾತ್ರಿ [ದಿನಮಾನವು ರಾತ್ರಿಮಾನಕ್ಕೆ] ಸಮನಾಗಿರುತ್ತದೆ. ಇವೆಲ್ಲಾ ಭೂಗೋಳದ ಉತ್ತರಾರ್ಧ (ಭಾರತ ಇರುವ ಭಾಗ) ಕ್ಕೆ ಅನ್ವಯಿಸುವುದು.

**ಅಯನ**

ಒಂದು ವರ್ಷಕ್ಕೆ ಎರಡು ಅಯನಗಳು – ದಕ್ಷಿಣಾಯನ ಮತ್ತು ಉತ್ತರಾಯಣ. ಪ್ರತಿ ಅಯನವೂ 6 ಸೌರ ಮಾಸ ಕಾಲದ್ದು. ಪುಣ್ಯಕಾಲವು ಅಯನದ ಪ್ರಾರಂಭವನ್ನು ಸೂಚಿಸುತ್ತದೆ. ಅಯನದ ಹೆಸರು ಸೂರ್ಯನ ಪಥದ ಮಾರ್ಗವನ್ನು ಸೂಚಿಸುತ್ತದೆ. ದಕ್ಷಿಣಾಯನದಲ್ಲಿ ಸೂರ್ಯನ ಪಥವು ಭೂಗೋಳದ ದಕ್ಷಿಣ ಭಾಗಕ್ಕೂ ಮತ್ತು ಉತ್ತರಾಯಣದಲ್ಲಿ ಉತ್ತರ ಭಾಗಕ್ಕೂ ತಿರುಗುತ್ತದೆ.

[ದಕ್ಷಿಣಾಯನ / ಉತ್ತರಾಯಣಗಳು ಈಗ ಜೂನ್ 21 ಮತ್ತು ಡಿಸೆಂಬರ್ 22 ರಂದೇ ಪ್ರಾರಂಭವಾಗುತ್ತಿದೆ – ಕರ್ಕಾಟಕ/ಮಕರ ಸಂಕ್ರಮಣ ಕಾಲದಲ್ಲಲ್ಲ – ಮತ್ತು ದಕ್ಷಿಣಾಯನ / ಉತ್ತರಾಯಣ ಪುಣ್ಯಕಾಲಗಳು ಆಯಾ ಅಯನಗಳಲ್ಲಿನ ಪ್ರಥಮ ಸಂಕ್ರಮಣಗಳು. ಹಾಗೂ ಅಯನ ಪ್ರಾರಂಭಕಾಲವು ಪ್ರತಿ 72 ವರ್ಷಕ್ಕೆ ಒಂದು ದಿನ ಹಿಂದೆ ಸರಿಯುತ್ತಿದೆ ಎಂದೂ ಹೇಳುತ್ತಾರೆ.]

ಜೂನ್ 21 ಮತ್ತು ಡಿಸೆಂಬರ್ 22 ರ ಸಮಯದಲ್ಲೇ **ಕರ್ಕಾಯನ** ಮತ್ತು **ಮಕರಾಯನ** – ಸಾಯನರೀತ್ಯಾ ಸಂಕ್ರಮಣಗಳು ಬರುತ್ತವೆ. ಅಯನಾಂಶದ ಮೌಲ್ಯ ಈಗ ಸುಮಾರು 22 1/2$^0$ ಆಗಿರುವುದರಿಂದ, ಸಾಯನ ಸಂಕ್ರಮಣಗಳು ನಿರಯನಕ್ಕಿಂತ ಸುಮಾರು 23 ದಿನ ಮೊದಲೇ ಬರುತ್ತಿವೆ. ಇವುಗಳು ಅಯನಾಂಶ ಹೆಚ್ಚಿದಂತೆ, ಸುಮಾರು 70 ವರ್ಷಕ್ಕೆ ಒಂದು ದಿನದಂತೆ ಹಿಂದೆ ಸರಿಯುತ್ತವೆ. (ಅಯನಾಂಶ ಮತ್ತು ನಿರಯನ/ ಸಾಯನಗಳ ವಿವರಣೆ ಮುಂದೆ ಕೊಟ್ಟಿದೆ.)

**ಇತರ ಪುಣ್ಯಕಾಲಗಳು**

**ವಿಷುವತ್** ಪುಣ್ಯಕಾಲ: ಮೇಷ ಮತ್ತು ತುಲಾ ಸಂಕ್ರಮಣಗಳು.

**ವಿಷ್ಣುಪದ** ಪುಣ್ಯಕಾಲ: ವೃಷಭ, ಸಿಂಹ, ವೃಶ್ಚಿಕ ಮತ್ತು ಕುಂಭ ಸಂಕ್ರಮಣಗಳು.

**ಷಡಶೀತಿ** ಪುಣ್ಯಕಾಲ: ಮಿಥುನ, ಕನ್ಯಾ, ಧನುಸ್ ಮತ್ತು ಮೀನ ಸಂಕ್ರಮಣಗಳು.

**ಪುಣ್ಯಕಾಲ / ಪರ್ವಕಾಲ ವರ್ಜ್ಯ**

ಪುಣ್ಯಕಾಲವನ್ನು ಪರ್ವಕಾಲವೆಂದೂ ಕರೆಯುವುದುಂಟು. ಸಾಮಾನ್ಯವಾಗಿ ಪುಣ್ಯಕಾಲದ ಮೊದಲಿನ ಮತ್ತು ನಂತರದ 16 ಘಟಿಗಳ ಕಾಲದಲ್ಲಿ ಶುಭ ಕಾರ್ಯಗಳನ್ನು ಮಾಡಬಾರದು. 1 ಘಟಿ ಎಂದರೆ 24 ನಿಮಿಷಗಳು, ಹಾಗಾಗಿ 16 ಘಟಿಗಳಿಗೆ 6 1/2 ಘಂಟೆಗಳಾಗುತ್ತವೆ.

ದಕ್ಷಿಣಾಯನ, ಉತ್ತರಾಯಣ ಮತ್ತು ವಿಷುವತ್ ಪುಣ್ಯಕಾಲಗಳಲ್ಲಿ ವರ್ಜ್ಯಕಾಲ **ಪಕ್ಷಿಣಿ.** ಪಕ್ಷಿಣಿ ಎಂದರೆ ಎರಡು ರಾತ್ರಿ ಮತ್ತು ಒಂದು ಹಗಲು ಅಥವಾ ಎರಡು ಹಗಲು ಮತ್ತು ಒಂದು ರಾತ್ರಿ – ಪುಣ್ಯಕಾಲ ಹಗಲಲ್ಲಿ ಅಥವಾ ರಾತ್ರಿಯಲ್ಲಿ ಸಂಭವಿಸಿತು ಎನ್ನುವುದನ್ನು ಅವಲಂಬಿಸಿ. (ವರ್ಜ್ಯಕಾಲದ ಮಧ್ಯದಲ್ಲಿ ಪುಣ್ಯಕಾಲವಿರಬೇಕು.)

## ಚಾಂದ್ರಮಾನ ಮಾಸ

ಎರಡು ಅಮಾವಾಸ್ಯೆಗಳ ಅಥವಾ ಪೌರ್ಣಮೀಗಳ ನಡುವಿನ ಕಾಲಕ್ಕೆ ಚಾಂದ್ರಮಾನ ಮಾಸ ಎಂದು ಹೆಸರು. ಅಮಾವಾಸ್ಯೆ/ಪೌರ್ಣಮೀಯು ಮುಗಿಯುತ್ತಲೂ ಮಾಸವೂ ಮುಗಿಯುತ್ತದೆ. ಅಮಾವಾಸ್ಯೆಗಳನ್ನು ಗಣನೆಗೆ ತೆಗೆದುಕೊಂಡರೆ **ಅಮಾಂತ** (ಕೃಷ್ಣ ಮಾಸ) ಎಂತಲೂ, ಪೌರ್ಣಮೀಗಳನ್ನು ಗಣನೆಗೆ ತೆಗೆದುಕೊಂಡರೆ **ಪೌರ್ಣಿಮಾಂತ** (ಶುಕ್ಲ ಮಾಸ) ಎಂತಲೂ ಹೆಸರು. ದಕ್ಷಿಣ ಭಾರತದಲ್ಲಿ ಅಮಾಂತವೂ, ಉತ್ತರ ಭಾರತದಲ್ಲಿ ಪೌರ್ಣಿಮಾಂತವೂ ಸಾಮಾನ್ಯ ಬಳಕೆಯಲ್ಲಿದೆ.

| | | ಅಮಾವಾಸ್ಯೆಯ ಅಂತ್ಯ | | | | | | | | | | | | | | | | | | | | | | | | | | | | ಅಮಾವಾಸ್ಯೆಯ ಅಂತ್ಯ | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| **ತಿಥಿಗಳು:** | 30 | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 30 | 1 | 2 |
| **ಪಕ್ಷ:** | | **ಶುಕ್ಲ** | | | | | | | | | | | | | | | **ಕೃಷ್ಣ** | | | | | | | | | | | | | | | | |
| | | **ಚಾಂದ್ರಮಾನ ಮಾಸ – ಅಮಾಂತ ಮಾಸ** | | | | | | | | | | | | | | | | | | | | | | | | | | | | | | | |

| | | ಪೌರ್ಣಮೀಯ ಅಂತ್ಯ | | | | | | | | | | | | | | | | | | | | | | | | | | | | ಪೌರ್ಣಮೀಯ ಅಂತ್ಯ | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| **ತಿಥಿಗಳು:** | 15 | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 30 | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 1 | 2 |
| **ಪಕ್ಷ:** | | **ಕೃಷ್ಣ** | | | | | | | | | | | | | | | **ಶುಕ್ಲ** | | | | | | | | | | | | | | | | |
| | | **ಚಾಂದ್ರಮಾನ ಮಾಸ – ಪೌರ್ಣಿಮಾಂತ ಮಾಸ** | | | | | | | | | | | | | | | | | | | | | | | | | | | | | | | |

ಪೌರ್ಣಮೀಯಂದು ಇರುವ ನಕ್ಷತ್ರದ ಹೆಸರನ್ನು ಮಾಸಕ್ಕೆ ಹೆಸರಾಗಿ ಕೊಟ್ಟಿದೆ. ವರ್ಷದಲ್ಲಿ 12 ಚಾಂದ್ರಮಾನ ಮಾಸಗಳಿರುತ್ತವೆ. ಅವುಗಳನ್ನು, ಆಯಾ ಮಾಸದ ಪೌರ್ಣಮೀಯಂದು ಇರುವ ನಕ್ಷತ್ರ, ಹಾಗೂ ಮಾಸದ ಅಭಿಮಾನಿ ದೇವತೆಯೊಂದಿಗೆ ಕೆಳಗಿನ ಕೋಷ್ಟಕದಲ್ಲಿ ನಮೂದಿಸಿದೆ.

| ಕ್ರ. | ಮಾಸ | ಪೌರ್ಣಮೀಯಂದಿನ ನಕ್ಷತ್ರ | ಅಭಿಮಾನಿ ದೇವತೆ |
|---|---|---|---|
| 1 | ಚೈತ್ರ | ಚಿತ್ರಾ | ವಿಷ್ಣು |
| 2 | ವೈಶಾಖ | ವಿಶಾಖಾ | ಮಧುಸೂಧನ |
| 3 | ಜ್ಯೇಷ್ಠ | ಜ್ಯೇಷ್ಠಾ | ತ್ರಿವಿಕ್ರಮ |
| 4 | ಆಷಾಢ | ಪೂರ್ವಾಷಾಢಾ/ಉತ್ತರಾಷಾಢಾ | ವಾಮನ |
| 5 | ಶ್ರಾವಣ | ಶ್ರವಣಾ | ಶ್ರೀಧರ |
| 6 | ಭಾದ್ರಪದ | ಪೂರ್ವಾಭಾದ್ರಾ/ಉತ್ತರಾಭಾದ್ರಾ | ಹೃಷೀಕೇಶ |
| 7 | ಆಶ್ವಿನ (ಆಶ್ವಯುಜ) | ಅಶ್ವಿನೀ | ಪದ್ಮನಾಭ |
| 8 | ಕಾರ್ತೀಕ | ಕೃತ್ತಿಕಾ | ದಾಮೋದರ |
| 9 | ಮಾರ್ಗಶೀರ್ಷ (ಮಾರ್ಗಶಿರ) | ಮೃಗಶಿರಾ | ಕೇಶವ |
| 10 | ಪೌಷ (ಪುಷ್ಯಾ) | ಪುಷ್ಯಾ | ನಾರಾಯಣ |
| 11 | ಮಾಘ | ಮಖಾ | ಮಾಧವ |
| 12 | ಫಾಲ್ಗುನ (ಫಾಲ್ಗುಣ) | ಪುಬ್ಬ/ಉತ್ತರ (ಪೂರ್ವ/ಉತ್ತರಾಫಲ್ಗುನೀ) | ಗೋವಿಂದ |
| 13 | ಅಧಿಕ ಮಾಸ | | ಪುರುಷೋತ್ತಮ |

ಭಾರತ ದೇಶದ ಬಹುಪಾಲು ಶಾಸ್ತ್ರೀಯ ಕಾರ್ಯ ಕಲಾಪಗಳಿಗೆ ಚಾಂದ್ರಮಾನ ಮಾಸ/ತಿಥಿ/ನಕ್ಷತ್ರ/ಯೋಗ ವನ್ನು ಶಾಸ್ತ್ರಕಾರರು ನಿರ್ದೇಶಿಸಿದ್ದಾರೆ. ಕೆಲವು ಶಾಸ್ತ್ರೀಯ ಕಾರ್ಯ ಕಲಾಪಗಳಿಗೆ ಸೌರಮಾನ ಮಾಸ/ತಿಥಿ/ನಕ್ಷತ್ರ ವನ್ನು ನಿರ್ದೇಶಿಸಿದ್ದಾರೆ.

ಸಾಮಾನ್ಯ ದಿನಾಂಕ ಬಳಕೆಗೂ ಚಾಂದ್ರಮಾನ ದಿನಾಂಕಗಳನ್ನು (ಸಂವತ್ಸರ – ಮಾಸ – ಪಕ್ಷ – ತಿಥಿ) ಉಪಯೋಗಿಸುತ್ತಾರೆ. ತಮಿಳುನಾಡಿನಲ್ಲಿ, ಕೇರಳದಲ್ಲಿ ಹಾಗೂ ತುಳು ಮಾತನಾಡುವವರು ಸೌರಮಾನ ದಿನಾಂಕವನ್ನು (ಸಂವತ್ಸರ – ಮಾಸ – ದಿನಾಂಕ [ತೇದಿ]) ಸಾಮಾನ್ಯ ದಿನಾಂಕ ಬಳಕೆಗೆ ಉಪಯೋಗಿಸುತ್ತಾರೆ.

ಉತ್ತರಭಾರತದಲ್ಲಿ ಬೈ(ವೈ)ಶಾಖ ಮೊದಲನೇ ದಿನ ಅಂದರೆ ಅದು ದಕ್ಷಿಣದ ಚೈತ್ರ ಕೃಷ್ಣ ಪ್ರಥಮಾ ಆಗಿರುತ್ತದೆ. ಉತ್ತರ ಭಾರತದಲ್ಲಿ ಬೈಶಾಖದಿಂದ ವರ್ಷಾರಂಭ.

**ಪಕ್ಷ**

ಅಮಾವಾಸ್ಯೆಯ ಅಂತ್ಯದಿಂದ ಪೌರ್ಣಮೀಯ ಅಂತ್ಯದವರೆಗಿನ ಕಾಲಾವಧಿಗೆ **ಶುಕ್ಲ ಪಕ್ಷ** (ಶುದ್ಧ) ಎಂದೂ, ಪೌರ್ಣಮೀಯ ಅಂತ್ಯದಿಂದ ಅಮಾವಾಸ್ಯೆಯ ಅಂತ್ಯಕ್ಕೆ **ಕೃಷ್ಣ ಪಕ್ಷ** (ಬಹುಳ) ಎಂದೂ ಹೆಸರು. ಶುಕ್ಲ ಪಕ್ಷದಲ್ಲಿ ಚಂದ್ರನ ಪ್ರಭೆಯು ದಿನೇದಿನೇ ವೃದ್ಧಿಯಾಗುವುದು. ಕೃಷ್ಣ ಪಕ್ಷದಲ್ಲಿ ಚಂದ್ರನ ಪ್ರಭೆಯು ದಿನೇದಿನೇ ಕ್ಷೀಣಿಸುವುದು. ಒಂದು ಚಾಂದ್ರಮಾನ ಮಾಸದಲ್ಲಿ ಈ ಎರಡೂ ಪಕ್ಷಗಳಿರುತ್ತವೆ. ಪ್ರತಿ ಪಕ್ಷದಲ್ಲಿ 15 ತಿಥಿಗಳು ಇರುತ್ತವೆ.

**ತಿಥಿ**

ಭೂಮಿಯಿಂದ ಸೂರ್ಯ ಚಂದ್ರರನ್ನು ನೋಡಿದರೆ, ಅಮಾವಾಸ್ಯೆಯ ಅಂತ್ಯದಲ್ಲಿ ಸೂರ್ಯ ಮತ್ತು ಚಂದ್ರರು ಒಂದೇ ಕೋಣಮಾಪನದಲ್ಲಿ (ಸೇಂ ಆಂಗಲ್) ಇರುತ್ತಾರೆ. ಒಂದು ತಿಥಿಯ ಕಾಲಾವಧಿಯು ಚಂದ್ರನು ಸೂರ್ಯನಿಂದ ಪೂರ್ವಕ್ಕೆ ಚಲಿಸುತ್ತಾ $12^0$ ಕೋಣಮಾಪನ ದೂರ ಹೋಗುವಷ್ಟು ಸಮಯ. ಹಾಗಂದರೆ, ಶುಕ್ಲ ಪಕ್ಷದ ಪ್ರಥಮಾ (ಪ್ರತಿಪತ್) ತಿಥಿಯ ಅಂತ್ಯದವೇಳೆಗೆ ಸೂರ್ಯನಿಂದ ಚಂದ್ರನು $12^0$ ದೂರದಲ್ಲಿ, ದ್ವಿತೀಯಾಗೆ $24^0$, ತೃತೀಯಾಗೆ $36^0$, . . ಪೌರ್ಣಮೀಗೆ $180^0$ ಇರುತ್ತಾನೆ. ಹಾಗೆಯೇ ಚಂದ್ರನು ಮುಂದುವರಿದು ಕೃಷ್ಣ ಪಕ್ಷದ ಪ್ರಥಮಾ ತಿಥಿಯ ಅಂತ್ಯದವೇಳೆಗೆ ಸೂರ್ಯನಿಂದ ಚಂದ್ರನು $192^0$ ದೂರದಲ್ಲಿ, ದ್ವಿತೀಯಾಗೆ $204^0$, ತೃತೀಯಾಗೆ $216^0$, . . ಅಮಾವಾಸ್ಯೆಗೆ $360^0$ ದೂರದಲ್ಲಿ ಇರುತ್ತಾನೆ [ಅಥವಾ ಒಂದೇ ಕೋಣಮಾಪನದಲ್ಲಿ (ಸೇಂ ಆಂಗಲ್)].

ಚಂದ್ರನ ಈ ಒಂದು ಮಾಸದ ಚಲನೆಯ ಸಮಯದಲ್ಲಿ ಸೂರ್ಯನೂ ಚಲಿಸುತ್ತಲೇ ಇರುತ್ತಾನೆ. ಸೂರ್ಯ ಚಂದ್ರರ ಚಲನೆಯ ಗತಿಯು ಯಾವಾಗಲೂ ಬದಲಾಯಿಸುತ್ತಾ ಇರುವುದರಿಂದ, ತಿಥಿಗಳ ಕಾಲಾವಧಿಯೂ ಬದಲಾಯಿಸುತ್ತಾ ಇರುತ್ತದೆ. ತಿಥಿಯ ಕನಿಷ್ಠ, ಗರಿಷ್ಠ ಮತ್ತು ಅತಿ ಸಾಮಾನ್ಯ (ಅತಿ ಹೆಚ್ಚು ಸಲ ಸಂಭವಿಸುವ – ಇಂಗ್ಲಿಷ್‌ನಲ್ಲಿ ಮೀನ್ ಎನ್ನುತ್ತಾರೆ) ಕಾಲಾವಧಿಯನ್ನು ಕೆಳಗೆ ಕೊಟ್ಟಿದೆ.

| ತಿಥಿಯ ಕಾಲಾವಧಿ | ಘಟಿ | ಪಲ | ವಿಪಲ | ಘಂಟೆ | ನಿಮಿಷ | ಸೆಕಂಡ್ |
|---|---|---|---|---|---|---|
| ಗರಿಷ್ಠ | 65 | 16 | 0 | 26 | 6 | 24 |
| ಅತಿ ಸಾಮಾನ್ಯ | 59 | 3 | 40.23 | 23 | 37 | 28.092 |
| ಕನಿಷ್ಠ | 53 | 56 | 0 | 21 | 34 | 24 |

ತಿಥಿಗಳು ಮತ್ತು ಅವುಗಳ ಅಭಿಮಾನಿ ದೇವತೆಗಳ ಪಟ್ಟಿಯನ್ನು ಕೆಳಗೆ ಕೊಟ್ಟಿದೆ.

| ಕ್ರ. | ತಿಥಿ | ಅಭಿಮಾನಿ ದೇವತೆ | ಕ್ರ. | ತಿಥಿ | ಅಭಿಮಾನಿ ದೇವತೆ |
|---|---|---|---|---|---|
| 1 | ಪ್ರಥಮಾ (ಪಾಡ್ಯ) | ಅಗ್ನಿ | 10 | ದಶಮೀ | ಆದಿಶೇಷ |
| 2 | ದ್ವಿತೀಯಾ (ಬಿದಿಗೆ) | ಬ್ರಹ್ಮಾ | 11 | ಏಕಾದಶೀ | ಧರ್ಮ |
| 3 | ತೃತೀಯಾ (ತದಿಗೆ) | ಗೌರೀ | 12 | ದ್ವಾದಶೀ | ಹರಿ |
| 4 | ಚತುರ್ಥೀ (ಚೌತಿ) | ವಿನಾಯಕ | 13 | ತ್ರಯೋದಶೀ | ಕಾಮ |
| 5 | ಪಂಚಮೀ | ಸರ್ಪಗಳು | 14 | ಚತುರ್ದಶೀ | ಕಲಿ |
| 6 | ಷಷ್ಠೀ | ಸ್ಕಂದ | 15 | ಪೌರ್ಣಮೀ (ಹುಣ್ಣಿಮೆ) (ಪೂರ್ಣಿಮಾ) [ಶುಕ್ಲ ಪಕ್ಷದಲ್ಲಿ] | ಚಂದ್ರ |
| 7 | ಸಪ್ತಮೀ | ರವಿ | | | |
| 8 | ಅಷ್ಟಮೀ | ಸದ್ಯೋಜಾತ | 30 | ಅಮಾವಾಸ್ಯಾ(ಸ್ಯೆ) [ಕೃಷ್ಣ ಪಕ್ಷದಲ್ಲಿ] | ಪಿತೃಗಳು |
| 9 | ನವಮೀ | ದುರ್ಗಾ | | | |

**ಪಂಚಾಂಗದಲ್ಲಿ ದಿನ**

ಪಂಚಾಂಗದಲ್ಲಿ, ಸೂರ್ಯೋದಯದಿಂದ ಮರುದಿನದ ಸೂರ್ಯೋದಯದವರೆಗಿನ ಕಾಲಾವಧಿಗೆ ಒಂದು ದಿನ ಎಂದು ಪರಿಗಣಿಸುತ್ತದೆ. ದಿನದಿನಕ್ಕೂ ಸೂರ್ಯೋದಯದ ಸಮಯ ಸಣ್ಣ ಪರಿಮಾಣದಲ್ಲಿ ಬದಲಾಯಿಸುವುದರಿಂದ, ಈ ಒಂದು ದಿನದ ಕಾಲಾವಧಿ 24 ಘಂಟೆಗಿಂತ (60 ಘಟಿಗಿಂತ) ಸ್ವಲ್ಪ (ಸೂರ್ಯೋದಯದ ಬದಲಾವಣೆಯಷ್ಟು) ಹೆಚ್ಚುಕಡಿಮೆ ಆಗಿರುತ್ತದೆ.

**ತಿಥಿಗಳ ಆದಿ/ಅಂತ್ಯ**

ತಿಥಿಗಳ ಕಾಲಾವಧಿಯು ದಿನದಿನಕ್ಕೂ ಬೇರೆಬೇರೆಯಾದದ್ದರಿಂದ, ಅವುಗಳ ಆದಿ/ಅಂತ್ಯಗಳು ದಿನದ ಬೇರೆಬೇರೆ ಸಮಯಗಳಲ್ಲಿ ಆಗುತ್ತವೆ. ಸಾಮಾನ್ಯವಾಗಿ ಒಂದು ತಿಥಿಯ ಆದಿಯು ಒಂದು ದಿನವೂ, ಅಂತ್ಯವು ಮರುದಿನವೂ ಆಗುತ್ತದೆ. ಅಂದರೆ, ಪ್ರತಿ ದಿನವೂ ಒಂದು ತಿಥಿಯ ಅಂತ್ಯವೂ, ಅದೇ ಸಮಯದಲ್ಲಿ ಮುಂದಿನ ತಿಥಿಯ ಆದಿಯೂ ಆಗುತ್ತದೆ. ಆದರೆ, ತಿಥಿಯ ಕಾಲಾವಧಿ 59 ಘಟಿಯಿಂದ 65 ಘಟಿಯವರೆಗೆ ಇರುವ ಸಾಧ್ಯತೆಯಿಂದಾಗಿ, ಕೆಲವು ದಿನಗಳಲ್ಲಿ ಒಂದೇ ತಿಥಿಯ ಆದಿ ಮತ್ತು ಅಂತ್ಯವೂ (ಅಂದರೆ, ಆ ದಿನದಲ್ಲಿ ಎರಡು ತಿಥಿಗಳ ಅಂತ್ಯ ಆದಂತಾಯಿತು), ಕೆಲವು ದಿನಗಳಲ್ಲಿ ಯಾವ ತಿಥಿಯ ಆದಿ/ಅಂತ್ಯ ಎರಡೂ ಇಲ್ಲದಿರುವುದೂ ಆಗುತ್ತವೆ.

ಯಾವಯಾವ ದಿನಗಳಲ್ಲಿ ಎರಡು ತಿಥಿಗಳ ಅಂತ್ಯವಾಗುತ್ತದೋ ಅಥವಾ ತಿಥಿಯ ಅಂತ್ಯವೇ ಆಗುವುದಿಲ್ಲವೋ, ಆ ದಿನಗಳು ಶುಭಕಾರ್ಯಗಳಿಗೆ ವರ್ಜ್ಯ.

**ದಿನದ ತಿಥಿ – ಸಂಕಲ್ಪ ಮತ್ತು ದಿನಾಂಕ**

ಸೂರ್ಯೋದಯದ ಸಮಯದಲ್ಲಿರುವ ತಿಥಿಯನ್ನೇ ಆ ದಿನದ ತಿಥಿಯೆಂದು ದಿನಾಂಕ ಗಣನೆಗೆ ಮತ್ತು ಅಂದಿನ ಶಾಸ್ತ್ರೀಯ ಕಾರ್ಯಕಲಾಪಗಳ ಸಂಕಲ್ಪಕ್ಕೆ ಉಪಯೋಗಿಸುತ್ತಾರೆ. ಅದೇ ರೀತಿ ಸೂರ್ಯೋದಯದ ಸಮಯದಲ್ಲಿರುವ ವಾರ, ನಕ್ಷತ್ರ, ಯೋಗ ಮತ್ತು ಕರಣಗಳನ್ನೂ ಸಂಕಲ್ಪಕ್ಕೆ ಉಪಯೋಗಿಸುತ್ತಾರೆ.

**ತಿಥಿಗಳ ಐದು ಸಮೂಹ**

| ಸಮೂಹ | ತಿಥಿಗಳು | ಫಲ |
|---|---|---|
| ನಂದ | ಪ್ರಥಮಾ, ಷಷ್ಠೀ, ಏಕಾದಶೀ | ಆನಂದ |
| ಭದ್ರ | ದ್ವಿತೀಯಾ, ಸಪ್ತಮೀ, ದ್ವಾದಶೀ | ಆರೋಗ್ಯ – ಮಂಗಳ |
| ಜಯ | ತೃತೀಯಾ, ಅಷ್ಟಮೀ, ತ್ರಯೋದಶೀ | ಜಯ |
| ರಿಕ್ತ | ಚತುರ್ಥೀ, ನವಮೀ, ಚತುರ್ದಶೀ | ನಷ್ಟ |
| ಪೂರ್ಣ | ಪಂಚಮೀ, ದಶಮೀ, ಪೌರ್ಣಮೀ/ಅಮಾವಾಸ್ಯೆ | ಸಂಪೂರ್ಣ |

**ಎರಡು ಬಗೆಯ ತಿಥಿಗಳು**

ಸೂರ್ಯೋದಯದಿಂದ 60 ಘಟಿಗಳ ಅಥವಾ ಮೇಲ್ಪಟ್ಟು ಕಾಲಾವಧಿಯುಳ್ಳ ತಿಥಿಗಳಿಗೆ **ಪೂರ್ಣ**ತಿಥಿಯೆಂದೂ, ಮಿಕ್ಕವಕ್ಕೆ **ಸಖಂಡ**ತಿಥಿಯೆಂದೂ ಹೆಸರು.

**ಸಖಂಡ ತಿಥಿಗಳಲ್ಲಿ ವಿಧಗಳು**

**ಶುದ್ಧ** ಮತ್ತು **ವಿದ್ಧ** ಎಂದು ಎರಡು ವಿಧ. ಶುದ್ಧ ತಿಥಿಯು ಒಂದೇ ದಿನದ ಸೂರ್ಯೋದಯ ಮತ್ತು ಸೂರ್ಯಾಸ್ತದಲ್ಲಿ ಇರುತ್ತದೆ. (ಶಿವರಾತ್ರಿಯಂದು ಮಧ್ಯರಾತ್ರಿಯಲ್ಲೂ ಇರಬೇಕು.) ವಿದ್ಧ ತಿಥಿಯು ಒಂದೇ ದಿನದ ಸೂರ್ಯೋದಯ ಅಥವಾ ಸೂರ್ಯಾಸ್ತ, ಎರಡರಲ್ಲಿ ಒಂದರಲ್ಲಿ ಮಾತ್ರ ಇರುತ್ತದೆ. ವಿದ್ಧ ತಿಥಿ ಅಂದರೆ, ವೇಧ (ಸಂಬಂಧ) ಇದೆ ಎಂದು ಅರ್ಥ.

ಒಂದೇ ದಿನದ ಸೂರ್ಯೋದಯ ಮತ್ತು ಸೂರ್ಯಾಸ್ತದ ನಡುವಿನ ಕಾಲದಲ್ಲಿ ಅಂತ್ಯ/ಆದಿಯಾಗಿರುವ ತಿಥಿಗಳಲ್ಲಿ ಸಾಮಾನ್ಯವಾಗಿ, **ಪೂರ್ವವಿದ್ಧ** ಎಂದರೆ ಹಿಂದಿನ ತಿಥಿಯ ಸಂಬಂಧ. **ಪರವಿದ್ಧ** ಎಂದರೆ ಮುಂದೆ ಬರುವ ತಿಥಿಯ ಸಂಬಂಧ.

ಪೂರ್ವವಿದ್ಧ ಮತ್ತು ಪರವಿದ್ಧಗಳು ಕೆಲವು ವ್ರತಗಳ ನಿಷ್ಕರ್ಷೆಯಲ್ಲಿ ಮುಖ್ಯವಾದವು.

**ತಿಥಿಗಳ ವೇಧಗಳು**

ಸೂರ್ಯೋದಯದ ನಂತರ ಸುಮಾರು 6 ಘಟಿ ಸಮಯದಲ್ಲಿ ಪ್ರಾರಂಭವಾಗುವ ತಿಥಿಗಳಿಗೆ **ಪ್ರಾತರ್ವೇಧ**ವಿದೆ ಎನ್ನುತ್ತಾರೆ. ಅದೇರೀತಿ, ಸೂರ್ಯಾಸ್ತದ ಮೊದಲು ಸುಮಾರು 6 ಘಟಿ ಸಮಯದಲ್ಲಿ ಪ್ರಾರಂಭವಾಗುವ ತಿಥಿಗಳಿಗೆ **ಸಾಯಂವೇಧ**ವಿದೆ ಎನ್ನುತ್ತಾರೆ.

**ಅಧಿಕ ಮತ್ತು ಕ್ಷಯ ತಿಥಿಗಳು**

ಒಂದುದಿನದ ಸೂರ್ಯೋದಯಕ್ಕೆ ಮೊದಲೇ ಪ್ರಾರಂಭವಾಗಿದ್ದು ಮರುದಿನದ ಸೂರ್ಯೋದಯದ ನಂತರ ಮುಗಿಯುವ ತಿಥಿಗೆ **ಅಧಿಕ ತಿಥಿ** ಎಂದು ಹೆಸರು. ಅಧಿಕ ತಿಥಿಯ ಕಾಲಾವಧಿಯಲ್ಲಿ ಎರಡು ಸೂರ್ಯೋದಯವಾಗಿರುತ್ತದೆ. ಆ ಎರಡು ಸೂರ್ಯೋದಯದ ದಿನಗಳಲ್ಲೂ ಅದೇ ತಿಥಿಯನ್ನು ದಿನಾಂಕವಾಗಿ ಬಳಸುತ್ತಾರೆ. ಇಲ್ಲಿ ತಿಥಿ ವೃದ್ಧಿಯಾಗಿದೆ ಎಂದೂ ಹೇಳುತ್ತಾರೆ.

ಈ ತಿಥಿಗೆ ಮೂರು ದಿನಗಳ ಸ್ಪರ್ಶವಾಗಿರುವುದರಿಂದ **ತ್ರಿದಿನಸ್ಪೃಕ್** ಎಂದೂ ಕರೆಯುತ್ತಾರೆ (1. ಸೂರ್ಯೋದಯದ ಹಿಂದಿನ ದಿನ, 2. ಸೂರ್ಯೋದಯದ ದಿನ ಮತ್ತು 3. ಎರಡನೇ ಸೂರ್ಯೋದಯದ ದಿನ).

ಅಧಿಕ ತಿಥಿಯಲ್ಲಿ, ಎರಡನೇ ಸೂರ್ಯೋದಯದ ದಿನದಲ್ಲಿನ ಭಾಗಕ್ಕೆ **ಪುಚ್ಛ** ಎಂದೂ

ಕರೆಯುತ್ತಾರೆ.

ಒಂದೇ ದಿನದಲ್ಲಿ ಸೂರ್ಯೋದಯದ ನಂತರ ಪ್ರಾರಂಭಿಸಿ, ಮುಂದಿನ ಸೂರ್ಯೋದಯಕ್ಕೆ ಮೊದಲು ಮುಗಿಯುವ ತಿಥಿಗೆ **ಕ್ಷಯ ತಿಥಿ** ಎಂದು ಹೆಸರು. ಕ್ಷಯ ತಿಥಿಯ ಕಾಲಾವಧಿಯಲ್ಲಿ ಸೂರ್ಯೋದಯವೇ ಆಗುವುದಿಲ್ಲ. ಈ ಕ್ಷಯ ತಿಥಿ ದಿನಾಂಕ ಗಣನೆಗೆ ಬರುವುದೇ ಇಲ್ಲ. ಈ ತಿಥಿ ಕ್ಷಯ (ಹ್ರಾಸ) ವಾಗಿದೆ ಎನ್ನುತ್ತಾರೆ. ಈ ಕ್ಷಯ ತಿಥಿಯನ್ನು **ಅವಮಾಹ** ಎಂದೂ ಕರೆಯುತ್ತಾರೆ. ಈ ತಿಥಿಯನ್ನು ಸಂಬೋಧಿಸುವಾಗ **ಉಪರಿ** ಎಂದು ಸೇರಿಸಿ ಹೇಳುವುದು ರೂಢಿಯಲ್ಲಿದೆ.

ಒಂದು ಚಾಂದ್ರಮಾನ ವರ್ಷದಲ್ಲಿ (12 ಚಾಂದ್ರಮಾನ ಮಾಸಗಳಲ್ಲಿ) ಸರಾಸರಿ 354/355 ದಿನಗಳಿರುತ್ತವೆ. ಆದರೆ 12 ಚಾಂದ್ರಮಾನ ಮಾಸಗಳಿಂದ 360 ತಿಥಿಗಳಿರಬೇಕು. ಈ ಲೆಖ್ಖಾಚಾರ ಸರಿಹೋಗಲೋ ಎನ್ನುವಂತೆ, ಹನ್ನೆರಡು ಚಾಂದ್ರಮಾನ ಮಾಸಗಳಲ್ಲಿ ಸರಾಸರಿಯಾಗಿ 7 ಅಧಿಕ ತಿಥಿಗಳೂ, 13 ಕ್ಷಯ ತಿಥಿಗಳೂ ಇರುತ್ತವೆ.

ಅಧಿಕ ಮತ್ತು ಕ್ಷಯ ತಿಥಿಗಳು ಶುಭ ಕಾರ್ಯಗಳಿಗೆ ವರ್ಜ್ಯ.

## ಏಕಾದಶೀ ವ್ರತ ಮತ್ತು ವಿದ್ಧ ದಶಮೀ

ವೈಷ್ಣವರು ಏಕಾದಶೀ ವ್ರತವನ್ನು ದಶಮಿಯ ವೇಧವಿಲ್ಲದ ಏಕಾದಶೀಯಂದು ಆಚರಿಸಬೇಕು ಎಂಬುದು ನಿಯಮ. ಅಂದರೆ ಯಾವುದೇ ದಿನದ ಅರುಣೋದಯಕ್ಕೆ ಮೊದಲು ಹಿಂದಿನ ದಶಮೀ ತಿಥಿಯು ಅಂತ್ಯವಾಗಿರಬೇಕು. [ಅರುಣೋದಯಕಾಲವು ಒಂದು ದಿನದ ಕೊನೆಯ ಭಾಗವಾಗಿದ್ದರೂ, ಕೆಲವೆಡೆ ಅದನ್ನೇ ಮೊದಲ ಭಾಗದಂತೆ ಉಪಯೋಗಿಸುವುದು ನಿಯಮ – ವಿದ್ಧದಶಮೀ ನಿರ್ಣಯ ಅದರಲ್ಲಿ ಒಂದು.]

ಯಾವುದೇ ದಿನದ ಅರುಣೋದಯಕಾಲದಲ್ಲಿ ಹಿಂದಿನ ದಶಮೀ ತಿಥಿಯು ಅಂತ್ಯವಾದರೆ ಆ ದಿನವನ್ನು (ಉದಾ. ದಿನ 1 – ಸೂರ್ಯೋದಯಕಾಲದಲ್ಲಿ ಏಕಾದಶೀ ವ್ಯಾಪಿಸಿದ್ದು, ಏಕಾದಶೀ ತಿಥಿ ಎಂದೇ ಪರಿಗಣಿಸಿದ್ದರೂ) **ವಿದ್ಧದಶಮೀ** (ಗೊಡ್ಡು ದಶಮೀ) ಎಂದು ಕರೆದು ದಶಮೀಯಂತೆಯೇ ಆಚರಿಸಿ, ಮರುದಿನ (ಉದಾ. ದಿನ 2) ವೈಷ್ಣವರಿಗೆ ಏಕಾದಶೀ ವ್ರತಾಚರಣೆ (ಅಂದಿನ ತಿಥಿ ದ್ವಾದಶೀಯೇ ಆಗಿದ್ದರೂ ಸಹ). ಈ ಸಂದರ್ಭದಲ್ಲಿ, ದ್ವಾದಶೀ ವ್ರತಾಚರಣೆ ಅದಕ್ಕೂ ಮರುದಿನ (ಉದಾ. ದಿನ 3) ಆಗುತ್ತದೆ.

ಅರುಣೋದಯ ಕಾಲವು ಸೂರ್ಯೋದಯದ ಮೊದಲಿನ 4 ಘಟಿಯದು ಅಂದರೆ ಹಿಂದಿನ ಸೂರ್ಯೋದಯದಿಂದ 56 ಘಟಿಗೆ ಪ್ರಾರಂಭಿಸುತ್ತದೆ. ಆದ್ದರಿಂದ, ವಿದ್ಧದಶಮಿಯ ನಿರ್ಣಯಕ್ಕೆ ದಶಮೀಯ ವ್ಯಾಪ್ತಿಯು 55 ಘಟಿ ಮತ್ತು 45 ವಿಘಟಿಯೊಳಗಿರಬೇಕು.

**ಆರ್ಯಮಾನ ಪಂಚಾಂಗ:** ಬಹಳ ಹಿಂದೆ ಆರ್ಯಮಾನ ಪದ್ಧತಿ ಪಂಚಾಂಗ ಗಣನೆಯಲ್ಲಿ ಪ್ರಚಲಿತವಾಗಿತ್ತು ಎಂದು ಕಂಡುಬರುತ್ತದೆ. ಅದನ್ನೇ ಏಕಾದಶೀ ನಿರ್ಣಯಕ್ಕೆ ಬಳಸಬೇಕು ಎಂಬುವ ಹಿನ್ನೆಲೆಯಲ್ಲಿ, ಸನ್ 1619 ರಿಂದ 1631 ರ ವರೆಗೆ ಪೀಠಾರೋಹಣ ಮಾಡಿದ್ದ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದಂಗಳವರು ಸೂರ್ಯಸಿಧ್ಧಾಂತ ರೀತಿಯಲ್ಲಿ ಗುಣಿಸಿದ ಫಲಿತಾಂಶವನ್ನು ಆರ್ಯಮಾನ ಫಲಿತಾಂಶಕ್ಕೆ ವರ್ಗಾಯಿಸಲು ಒಂದು ಸುಲಭ ಕೋಷ್ಟಕ ಕೊಟ್ಟಿರುತ್ತಾರೆ. ಸೂರ್ಯ ಸಿದ್ಧಾಂತರೀತ್ಯಾ ಗುಣಿಸಿದ ಪಂಚಾಂಗದಲ್ಲಿ ಬಹುಪಾಲು ಈಗಲೂ ಈ ಕೋಷ್ಟಕವನ್ನು ಉಪಯೋಗಿಸುತ್ತಿದ್ದಾರೆ.



ಅರ್ಧ ರಾತ್ರಿ
ಸೂರ್ಯೋದಯ
ಸೂರ್ಯಾಸ್ತ
ಅರ್ಧ ರಾತ್ರಿ
ಸೂರ್ಯೋದಯ
ಸೂರ್ಯಾಸ್ತ
ಅರ್ಧ ರಾತ್ರಿ
ಸೂರ್ಯೋದಯ
ಜೂಲಿಯನ್ ದಿನಾಂಕ –
ಅರ್ಧ ರಾತ್ರಿಯಿಂದ ಅರ್ಧ ರಾತ್ರಿಯವರೆಗೆ
2ನೇ ಜನವರಿ 2005
3ನೇ ಜನವರಿ 2005
ಜೂಲಿಯನ್ ದಿನ –
ಅರ್ಧ ರಾತ್ರಿಯಿಂದ ಅರ್ಧ ರಾತ್ರಿಯವರೆಗೆ
ಭಾನುವಾರ
ಸೋಮವಾರ
ಸೌರ / ವಾರದ/ ಸಾವನ ದಿನ –
ಸೂರ್ಯೋದಯದಿಂದ ಸೂರ್ಯೋದಯ
ಭಾನುವಾರ
ಸಾವನ ದಿನ
ದಿನಮಾನ –
ಸೂರ್ಯೋದಯದಿಂದ ಸೂರ್ಯಾಸ್ತ
ದಿನಮಾನ
ದಿನಮಾನ
ರಾತ್ರಿಮಾನ –
ಸೂರ್ಯಾಸ್ತದಿಂದ ಸೂರ್ಯೋದಯ
ರಾತ್ರಿಮಾನ
ರಾತ್ರಿಮಾನ
ತಿಥಿ – ಉದಾಹರಣೆಗೆ
ಸಪ್ತಮೀ
ಪೂರ್ಣ ತಿಥಿ
ಸೂರ್ಯೋದಯದಿಂದ 60 ಘಟಿಗಳ ವ್ಯಾಪ್ತಿ
ಪೂರ್ಣ ತಿಥಿ
ಶುದ್ಧ ತಿಥಿ - ಒಂದೇ ದಿನದ
ಸೂರ್ಯೋದಯದಿಂದ ಸೂರ್ಯಾಸ್ತದವರೆಗೂ ವ್ಯಾಪ್ತಿ
ಶುದ್ಧ ತಿಥಿ
ವಿದ್ಧ ತಿಥಿ – ಒಂದೇ ದಿನದ ಸೂರ್ಯೋದಯ ಅಥವಾ ಸೂರ್ಯಾಸ್ತದಲ್ಲಿ ಮಾತ್ರ ವ್ಯಾಪ್ತಿ (ಎರಡರಲ್ಲೂ ಅಲ್ಲ)
ಪ್ರಾತರ್ವೇಧ –
ಸೂರ್ಯೋದಯದಿಂದ ಸುಮಾರು 6 ಘಟಿಗೆ ಪ್ರಾರಂಭ
ಪ್ರಾತರ್ವೇಧ
ಸಾಯಂವೇಧ –
ಸೂರ್ಯಾಸ್ತದಿಂದ ಸುಮಾರು 6 ಘಟಿ ಮೊದಲು ಪ್ರಾರಂಭ
ಸಾಯಂವೇಧ
ಪೂರ್ವ/ಪರವಿದ್ಧ– ತಿಥಿಯ ಆದಿ / ಅಂತ್ಯ ಸೂರ್ಯೋದಯದಿಂದ ಸೂರ್ಯಾಸ್ತದ ನಡುವೆ (ದಿನಮಾನದಲ್ಲಿ)
ಪೂರ್ವವಿದ್ಧ –
ಹಿಂದಿನ ತಿಥಿಗೆ ಸೇರಿಕೊಂಡಿದೆ
ಷಷ್ಠೀ
ಸಪ್ತಮೀ
ಸಪ್ತಮೀ – ಷಷ್ಠೀ ತಿಥಿಗೆ ಸೇರಿಕೊಂಡಿದೆ
ಪರವಿದ್ಧ –
ಮುಂದಿನ ತಿಥಿಗೆ ಸೇರಿಕೊಂಡಿದೆ
ಸಪ್ತಮೀ
ಅಷ್ಟಮೀ
ಸಪ್ತಮೀ – ಅಷ್ಟಮೀ ತಿಥಿಗೆಸೇರಿಕೊಂಡಿದೆ
ಅಧಿಕ ತಿಥಿ / ತ್ರಿದಿನಸ್ಪೃಕ್
ಈ ತಿಥಿಗೆ ಎರಡು ಸೂರ್ಯೋದಯ ಸ್ಪರ್ಶ
ಅಧಿಕ ತಿಥಿ
ಪುಚ್ಛ – ಅಧಿಕ ತಿಥಿಯ ಎರಡನೇ ಸೂರ್ಯೋದಯದ ನಂತರದ ಭಾಗ
ಕ್ಷಯ ತಿಥಿ / ಅವಮಾಹ / ಉಪರಿ
- ಸೂರ್ಯೋದಯದ ಸ್ಪರ್ಶವೇ ಇಲ್ಲ
ಕ್ಷಯ ತಿಥಿ
ಏಕಾದಶೀ
ದಶಮೀ
ಏಕಾದಶೀ
ದ್ವಾದಶೀ
ಏಕಾದಶೀ ವ್ರತಾಚರಣೆ ಏಕಾದಶೀ ತಿಥಿಯ ದಿನಾಂಕದಂದೇ
ವಿದ್ಧ ದಶಮೀ
ದಶಮೀ
ಏಕಾದಶೀ–(ವಿದ್ಧ ದಶಮೀ)
ದ್ವಾದಶೀ
ವಿದ್ಧ ದಶಮೀಯಿಂದಾಗಿ ದ್ವಾದಶೀ ತಿಥಿಯ ದಿನಾಂಕದಂದು ಏಕಾದಶೀ ವ್ರತಾಚರಣೆ
ಅಲ್ಪ ಏಕಾದಶೀ
ದಶಮೀ
ಏಕಾದಶೀ
ದ್ವಾದಶೀ
ದಶಮೀ ತಿಥಿ ದಿನಾಂಕ
ಏಕಾದಶೀ ತಿಥಿ ದಿನಾಂಕ
ಏಕಾದಶೀ ತಿಥಿ ದಿನಾಂಕದಂದು ತಿಥಿ ಅಲ್ಪವೇ ಇದ್ದಾಗ್ಯೂ, ಅಂದೇ ಏಕಾದಶೀ ವ್ರತಾಚರಣೆ (ಹಿಂದಿನ ದಿನ ದಶಮೀ ತಿಥಿ ದಿನಾಂಕ)
ಅರ್ಧ ರಾತ್ರಿ
ಅರುಣೋದಯ
ಸೂರ್ಯೋದಯ
ಸೂರ್ಯಾಸ್ತ
ಅರ್ಧ ರಾತ್ರಿ
ಅರುಣೋದಯ
ಸೂರ್ಯೋದಯ
ಸೂರ್ಯಾಸ್ತ
ಅರ್ಧ ರಾತ್ರಿ
ಸೂರ್ಯೋದಯ
ಅಳತೆಯ ಪ್ರಕಾರ ಇಲ್ಲ

**ದೃಗ್ಗಣಿತ ಪಂಚಾಂಗ:** ಏಕಾದಶೀಗಾಗಿ ಆರ್ಯಮಾನಕ್ಕೆ ಸೂರ್ಯಸಿದ್ಧಾಂತ ಫಲಿತಾಂಶವನ್ನು ವರ್ಗಾಯಿಸುವುದರ ಬದಲು, ಗ್ರಹಣಕ್ಕೆ ಮುಹೂರ್ತಗಳಿಗೆ ಮತ್ತು ಇತರ ಜ್ಯೋತಿಷ್ಯ ವಿಚಾರಕ್ಕೆ ಉಪಯೋಗಿಸುತ್ತಿರುವ ದೃಗ್ಗಣಿತ ಪಂಚಾಂಗವನ್ನೇ ಎಲ್ಲಾ ಕಾರ್ಯಗಳಿಗೂ ಉಪಯೋಗಿಸಬಹುದು ಎಂದು ಫಲಿಮಾರು ಮಠಾಧೀಶರಾಗಿದ್ದ ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀಪಾದರು (1969 - 2000 A D) ಆದೇಶ ನೀಡಿದ್ದಾರೆ. ಕೆಲವು ವೈಷ್ಣವರು (ಮುಖ್ಯವಾಗಿ ಉಡುಪಿ ಕಡೆಯವರು) ದೃಗ್ಗಣಿತ ಪಂಚಾಂಗವನ್ನು ಉಪಯೋಗಿಸುತ್ತಿದ್ದಾರೆ.

**ಎರಡು ದಿನಗಳಲ್ಲಿ ಏಕಾದಶೀ:** ಭಾರತ ದೇಶದ ಬೇರೆಬೇರೆ ಸ್ಥಳಗಳಿಗೆ ಅಕ್ಷಾಂಶ / ರೇಖಾಂಶಗಳು ಬೇರೆಬೇರೆಯುವಾದದ್ದರಿಂದ, ಸೂರ್ಯೋದಯ ಸಮಯವು ಬೇರೆಬೇರೆಯವಾಗಿರುತ್ತವೆ. ಆದ್ದರಿಂದ, ಕೆಲವೊಮ್ಮೆ ಏಕಾದಶೀ ವ್ರತಾಚರಣೆ ಹಲವು ಸ್ಥಳಗಳಿಗೆ ಒಂದು ದಿನ (ಉದಾ. ದಿನ 1) ಮತ್ತು ಮಿಕ್ಕ ಸ್ಥಳಗಳಿಗೆ ವಿದ್ಧದಶಮಿಯಿಂದಾಗಿ ಮರುದಿನ (ಉದಾ. ದಿನ 2) ಆಗುತ್ತದೆ. ಸಾಮಾನ್ಯವಾಗಿ ಒಂದು ವರ್ಷದಲ್ಲಿ ಅತಿ ಹೆಚ್ಚೆಂದರೆ **3 ಸಲ** ಈ ರೀತಿ ಆಗುತ್ತದೆ. ಅತಿ ಕಮ್ಮಿಯೆಂದರೆ ಈ ರೀತಿ ಆಗುವುದೇ ಇಲ್ಲ. ಈ ತರಹದ ಎರಡು ದಿನದಲ್ಲಿನ (ಬೇರೆಬೇರೆ ಊರುಗಳಲ್ಲಿನ) ಆಚರಣೆ ಬಂದಾಗ ಕೆಲವು ಸಮೂಹ ಮುಖಂಡರು (ಏನೇ ಕಾರಣಕ್ಕಾಗಿಯೂ ದ್ವಾದಶೀಯಂದು ಏಕಾದಶೀ ವ್ರತಾಚರಣೆ ಮಾಡಬಹುದು ಮತ್ತು ದಶಮೀಯಂದು ಏಕಾದಶೀ ವ್ರತಾಚರಣೆ ಮಾಡಬಾರದು ಎಂಬ ನಿಯಮಕ್ಕನುಗುಣವಾಗಿ) ಎಲ್ಲಾ ಸ್ಥಳಗಳಲ್ಲಿಯೂ ಒಂದೇ ಪ್ರಕಾರವಾಗಿ ಎರಡನೇ ದಿನದಂದೇ (ಉದಾ. ದಿನ 2) ಏಕಾದಶೀ ವ್ರತಾಚರಣೆ ಮಾಡಲು ಆದೇಶಿಸುತ್ತಾರೆ.

**ಘಟಿ – ವಿಘಟಿ**

**ಪಂಚಾಂಗದಲ್ಲಿ ಕಾಲಗಣನೆ**ಯು ಘಟಿಗಳಲ್ಲಿ ಮಾಡುತ್ತಾರೆ. ಘಟಿಯನ್ನು ಘಳಿಗೆ ಎಂದೂ ಕರೆಯುವುದುಂಟು. ಒಂದು ದಿನ, ಅಂದರೆ 24 ಘಂಟೆಗೆ 60 ಘಟಿಗಳು ಸಮ. ಇನ್ನೂ ಸಣ್ಣ ಪ್ರಮಾಣದಲ್ಲಿ ಗಣನೆ ಮಾಡಲು 1 ಘಟಿಯನ್ನು 60 ವಿಘಟಿ (ವಿಘಳಿಗೆ ಅಥವಾ ಪಲ) ಯಾಗಿ ವಿಭಾಗಿಸಿದ್ದಾರೆ. ಘಟಿ – ವಿಘಟಿಯನ್ನು ತಮಿಳು ಭಾಷೆಯಲ್ಲಿ ನಾಳಿಗೈ – ವಿನಾಳಿಗೈ ಎನ್ನುತ್ತಾರೆ. 1 ಘಟಿಗೆ 24 ನಿಮಿಷ ಸಮನಾಗುತ್ತದೆ.

**ಮುಹೂರ್ತ** ಎನ್ನುವುದೂ ಕಾಲಗಣನೆಯ ಮಾಪನವೇ. 2 ಘಟಿಗೆ 1 ಮುಹೂರ್ತ.

**ಪಂಚಾಂಗದಲ್ಲಿ ಕಾಲಸೂಚನೆ**

ಪಂಚಾಂಗದಲ್ಲಿ ಒಂದು ದಿನದ ಎಲ್ಲಾ ವಿಷಯಗಳನ್ನೂ ಒಂದು ಸಾಲಿನಲ್ಲಿ ಕೊಡುವುದು ಪದ್ಧತಿ. ಕ್ಯಾಲೆಂಡರ್ ರೂಪದಲ್ಲಿರುವ ಪಂಚಾಂಗದಲ್ಲಿ ಒಂದು ಸಾಲಿನ ಬದಲು, ಒಂದು ಮನೆಯಲ್ಲಿರುತ್ತದೆ. ಒಂದು ದಿನ ಅಂದರೆ ಸೂರ್ಯೋದಯದಿಂದ ಸೂರ್ಯೋದಯದ ವರೆಗೆ.

ಆದ್ದರಿಂದ ಕಾಲ ಸೂಚನೆಯೂ ಸೂರ್ಯೋದಯದಿಂದ ಗಣನೆಯಂತೆ ಕೊಟ್ಟಿರುತ್ತಾರೆ. ಉದಾಹರಣೆಗೆ, ಪ್ರಥಮಾ 23-18, ಅಶ್ವಿನೀ 58-6 ಎಂದರೆ, ಪ್ರಥಮಾ ತಿಥಿಯು ಅಂದಿನ ಸೂರ್ಯೋದಯದಿಂದ 23 ಘಟಿ ಮತ್ತು 18 ವಿಘಟಿಗಳ ಕಾಲ ಇರುತ್ತದೆ. ಹಾಗೆಯೇ ಅಶ್ವಿನೀ ನಕ್ಷತ್ರವು ಸೂರ್ಯೋದಯದಿಂದ 58 ಘಟಿ ಮತ್ತು 6 ವಿಘಟಿಗಳ ಕಾಲ ಇರುತ್ತದೆ.

ಪ್ರಥಮಾ ತಿಥಿಯು ಮುಗಿದ ನಂತರ ಮುಂದಿನ ತಿಥಿಯಾದ ದ್ವಿತೀಯಾ ಬರುತ್ತದೆ ಎಂಬುದನ್ನು ಮುಂದಿನ ಸಾಲು ಅಥವಾ ಮನೆಯನ್ನು ನೋಡಿ ತಿಳಿದುಕೊಳ್ಳಬೇಕು.

### ಉಪರಿ (ಕ್ಷಯ) ತಿಥಿ

ಉಪರಿ ತಿಥಿಗೆ ಸೂರ್ಯೋದಯವೇ ಇಲ್ಲ. ಆದ್ದರಿಂದ, ಅದರ ಸಮಯ ಸೂಚನೆಯನ್ನು ಹಿಂದಿನ ತಿಥಿ ಮುಗಿದ ಸಮಯದಿಂದ ಕೊಟ್ಟಿರುತ್ತದೆ. ನಕ್ಷತ್ರ ಮತ್ತು ಯೋಗಗಳಿಗೂ ತಿಥಿಯಂತೆಯೇ ಉಪರಿ ಅನ್ವಯಿಸುತ್ತದೆ.

### ಉದಾಹರಣೆ: ದಿನ 2 ರ ಪಂಚಾಂಗ

**ಪಂಚಾಂಗದಲ್ಲಿ ದಿನ ಸೂರ್ಯೋದಯದಲ್ಲಿ ಬದಲಾವಣೆಯಾಗುತ್ತದೆ (ಅರ್ಧರಾತ್ರಿ 12.00 ಕ್ಕಲ್ಲ).**

**ಪಕ್ಕದಲ್ಲಿರುವ ಚಿತ್ರೀಕರಣ ನೋಡಿ**

**ಉಪರಿ ತಿಥಿ**

ದಿನ 1 ಭಾನು, ಏಕಾದಶೀ 5-21 {8-39 am},
ದಿನ 2 ಇಂದು, ದ್ವಾದಶೀ 0-34 {6-45 am}
**ಉಪರಿ** ತ್ರಯೋದಶೀ 54-49 {4-41 am},
ದಿನ 3 ಭೌಮ, ಚತುರ್ದಶೀ 49-33 {2-21 am},

*ದಿನ 2– ತ್ರಯೋದಶೀಯು ದಿನ 2ರ ಮತ್ತು ದಿನ 3ರ ಸೂರ್ಯೋದಯವನ್ನು ಸ್ಪರ್ಶಿಸುವುದಿಲ್ಲ.*
*ದಿನ 2 ಮತ್ತು ದಿನ 3 ರ ಸೂರ್ಯೋದಯದಲ್ಲಿ ಮಾತ್ರ ನೋಡಿದರೆ, ಒಂದು ತಿಥಿ ಹಾರಿದ್ದು ತಿಳಿಯುತ್ತದೆ.*

**ಅಧಿಕ ತಿಥಿ**

ದಿನ 1 ಭಾನು, ಪ್ರಥಮಾ 55-59 {4-54 am},
ದಿನ 2 ಇಂದು, ದ್ವಿತೀಯಾ 60-00 {6-31 am},
ದಿನ 3 ಭೌಮ, ದ್ವಿತೀಯಾ 1-20 {7-03 am},

*ದಿನ 2 - ದ್ವಿತೀಯವು ದಿನ 2ರ ಮತ್ತು ದಿನ 3ರ ಸೂರ್ಯೋದಯವನ್ನು ಸ್ಪರ್ಶಿಸುತ್ತದೆ.*
*ದಿನ 3 - ದ್ವಿತೀಯವು ಪುಷ್ಟ ಆಗಿದೆ.*




**ಕರಣ:** ತಿಥಿಯ ಅರ್ಧ ಭಾಗಕ್ಕೆ ಕರಣ ಎನ್ನುತ್ತಾರೆ. ಕರಣಗಳು 11. ಅವುಗಳನ್ನು, ಆಯಾ ಅಭಿಮಾನಿ ದೇವತೆಗಳೊಂದಿಗೆ ಕೆಳಗೆ ಕೊಟ್ಟಿದೆ.

| ಕ್ರ. | ಕರಣ | ಅಭಿಮಾನಿ ದೇವತೆ | ಕ್ರ. | ಕರಣ | ಅಭಿಮಾನಿ ದೇವತೆ |
|---|---|---|---|---|---|
| 1 | ಕಿಂಸ್ತುಘ್ನ | ಶೂಲಿ | 7 | ವಣಿಕ್ | ಶಿವ |
| 2 | ಬವ | ಸದ್ಯೋಜಾತ | 8 | ಭದ್ರಾ | ಪಾರ್ವತೀ ಪತಿ |
| 3 | ಬಾಲವ | ವಾಮದೇವ | 9 | ಶಕುನಿ | ವಿರೂಪಾಕ್ಷ |
| 4 | ಕೌಲವ | ಅಘೋರ | 10 | ಚತುಷ್ಪಾತ್ | ನೀಲಕಂಠ |
| 5 | ತೈತಿಲ | ತತ್ಪುರುಷ | 11 | ನಾಗವಾನ್ | ಉಮಾಪತಿ |
| 6 | ಗರ(ಜ) | ಈಶಾನ | | | |

ಕೆಳಗಿನ ನಾಲ್ಕು ಕರಣಗಳು ಒಂದು ಚಾಂದ್ರಮಾನ ಮಾಸದಲ್ಲಿ ಒಮ್ಮೆ ಮಾತ್ರ ಬರುತ್ತವೆ. ಅವುಗಳು: (ಕ್ರಮಾಂಕ 1) ಕಿಂಸ್ತುಘ್ನ – ಶುಕ್ಲ ಪ್ರಥಮಾ ತಿಥಿಯ ಮೊದಲ ಭಾಗ, (ಕ್ರಮಾಂಕ 9) ಶಕುನಿ – ಕೃಷ್ಣ ಚತುರ್ದಶೀ ತಿಥಿಯ ಎರಡನೇ ಭಾಗ, (ಕ್ರಮಾಂಕ 10) ಚತುಷ್ಪಾತ್ – ಅಮಾವಾಸ್ಯೆ ತಿಥಿಯ ಮೊದಲ ಭಾಗ ಮತ್ತು (ಕ್ರಮಾಂಕ 11) ನಾಗವಾನ್ – ಅಮಾವಾಸ್ಯೆ ತಿಥಿಯ ಎರಡನೇ ಭಾಗ.

ಮಿಕ್ಕ ಏಳು ಕರಣಗಳು (ಕ್ರಮಾಂಕ 2) **ಬವ** ಕರಣದಿಂದ (ಕ್ರಮಾಂಕ 8) **ಭದ್ರ** ಕರಣದವರೆಗೆ ಅದೇ ಕ್ರಮ ಪ್ರಕಾರ ಶುಕ್ಲ ಪ್ರಥಮಾ ತಿಥಿಯ ಎರಡನೇ ಭಾಗದಿಂದ ಕೃಷ್ಣ ಚತುರ್ದಶೀಯ ಮೊದಲ ಭಾಗದವರೆಗೂ ಬರುತ್ತವೆ. ಒಂದು ಚಾಂದ್ರಮಾನ ಮಾಸದಲ್ಲಿ ಈ ಏಳು ಕರಣಗಳು 8 ಬಾರಿ ಬರುತ್ತವೆ.

## ದಿನದಲ್ಲಿನ ಬೇರೆಬೇರೆ ಸಮಯಗಳ ಹೆಸರುಗಳು

**ದಿನಮಾನ** : ಸೂರ್ಯೋದಯದಿಂದ ಸೂರ್ಯಾಸ್ತದವರೆಗಿನ ಸಮಯ. ಇದನ್ನು **ಅಹಃಪ್ರಮಾಣ** ಅಥವಾ **ಅಹಸ್** ಎಂದೂ ಕರೆಯುವುದುಂಟು. ದಿನಮಾನದ ಮಧ್ಯಭಾಗ ಸ್ಥಳೀಯ ಸಮಯದ (ಲೋಕಲ್ ಟೈಂ, ಭಾರತೀಯ ಸ್ಟಾಂಡರ್ಡ್ ಟೈಂ – IST ಅಲ್ಲ) 12 ಘಂಟೆಗೆ (**ಸ್ಥಳೀಯ ಮಧ್ಯಾಹ್ನ**) ಸರಿಯಾಗಿರುತ್ತದೆ. ದಿನಮಾನವು ದಿನದಿನಕ್ಕೆ (ಒಂದೇ ಸ್ಥಳದಲ್ಲಿಯೂ) ಬದಲಾವಣೆಯಾಗುತ್ತದೆ.

ಭಾರತ ದೇಶದ ಬೇರೆಬೇರೆ ಸ್ಥಳಗಳಿಗೆ ಅಕ್ಷಾಂಶ / ರೇಖಾಂಶಗಳು ಬೇರೆಬೇರೆಯವಾದ್ದರಿಂದ, ಸೂರ್ಯೋದಯ/ಸೂರ್ಯಾಸ್ತ ಸಮಯಗಳು ಬೇರೆಬೇರೆ ಸ್ಥಳಗಳಿಗೆ ಬೇರೆಬೇರೆಯವಾಗಿರುತ್ತವೆ. ಹಾಗಾಗಿ, ಸ್ಥಳೀಯ ಮಧ್ಯಾಹ್ನವು ಒಂದೊಂದು ಸ್ಥಳದಲ್ಲಿ ಒಂದೊಂದು ಸಮಯದಲ್ಲಿ ಇರುತ್ತದೆ.

**ದಿನಮಾನ**ವನ್ನು ಐದು ಸಮಭಾಗಗಳನ್ನಾಗಿ ಮಾಡಿ ಅವುಗಳನ್ನು **ಪ್ರಾತಃ, ಸಂಗವ, ಮಧ್ಯಾಹ್ನ, ಅಪರಾಹ್ನ** ಮತ್ತು **ಸಾಯಾಹ್ನ** ಎಂದು ಕರೆಯುತ್ತಾರೆ. ದಿನಮಾನದ ಐದನೇ ಒಂದು ಭಾಗವಾದ ಅಪರಾಹ್ನವನ್ನು **ಶ್ರಾದ್ಧ ಅಪರಾಹ್ನ** ಎಂದೂ ಕರೆಯುವುದುಂಟು.

**ಪ್ರದೋಷ:** ಸೂರ್ಯಾಸ್ತಕ್ಕೆ ಮೊದಲಿನ 2 ಘಟಿ (48 ನಿಮಿಷ) ಮತ್ತು ನಂತರದ 2 ಘಟಿ ಯ ಸಮಯ. ಪ್ರದೋಷ ದಿನಮಾನ ರಾತ್ರಿಮಾನ ಎರಡರಲ್ಲೂ ಹಬ್ಬಿರುತ್ತದೆ.

**ರಾತ್ರಿಮಾನ:** ಸೂರ್ಯಾಸ್ತದಿಂದ ಸೂರ್ಯೋದಯದವರೆಗಿನ ಸಮಯ.

**ನಿಶೀತ:** ರಾತ್ರಿಮಾನದ ಮಧ್ಯ ಸಮಯ.

**ಅರುಣೋದಯ:** ಸೂರ್ಯೋದಯಕ್ಕೆ ಮೊದಲಿನ 2 ಮುಹೂರ್ತ (4 ಘಟಿ) ಸಮಯ. ಇದು ರಾತ್ರಿಮಾನದ ಅಂತ್ಯದಲ್ಲಿನ ಸಮಯ.

**ವ್ರತಗಳಿಗೆ ನಿಯಮಗಳು:** ಪ್ರತಿ ವ್ರತಕ್ಕೂ ಅದರದ್ದೇ ಆದ ಪ್ರತ್ಯೇಕ ನಿಯಮ – ಪಂಚ ಅಂಗಗಳ ಹಲವು ಅಥವಾ ಎಲ್ಲವೂ ದಿನದ ಯಾವಯಾವ ಸಮಯದಲ್ಲಿರಬೇಕು ಎಂದು ಸ್ಪಷ್ಟೀಕರಿಸಿರುತ್ತದೆ. ನಿರ್ಣಯ ಸಿಂಧು ಮತ್ತು ಧರ್ಮ ಸಿಂಧು ಎಂಬ ಗ್ರಂಥಗಳಲ್ಲಿ ಈ ನಿಯಮಗಳು ಹೇಳಲ್ಪಟ್ಟಿವೆ. ಯಾವ ನಿಯಮವೂ ಹೇಳಿಲ್ಲದ ಪಕ್ಷದಲ್ಲಿ, ಸೂರ್ಯೋದಯದ ಸಮಯದಲ್ಲಿರುವ ಪಂಚ ಅಂಗಗಳನ್ನೇ ಉಪಯೋಗಿಸುವುದು ಪದ್ಧತಿ.




ಕೆಲವು ವ್ರತಗಳಿಗೆ ದಿನಮಾನದ ಮೂರು ಸಮ ಭಾಗಗಳಾದ **ಪ್ರಾತಃ, ಮಧ್ಯಾಹ್ನ** ಮತ್ತು **ಅಪರಾಹ್ನ** ಎಂಬುದನ್ನು ನಿರ್ದೇಶಿಸಿರುತ್ತಾರೆ.




## ಶ್ರಾದ್ಧ ತಿಥಿ

ಕಾಲಶ್ರಾದ್ಧವನ್ನು ಶ್ರಾದ್ಧ ಅಪರಾಹ್ನದಲ್ಲಿ ವ್ಯಾಪಿಸಿರುವ ತಿಥಿಯ ಪ್ರಕಾರವೇ ಮಾಡಬೇಕು ಎಂಬುದು ನಿಯಮ. ಇದನ್ನು ನಿರ್ಣಯಿಸುವಾಗ ಗಮನದಲ್ಲಿಡಬೇಕಾದ ನಿಯಮಗಳು:

1. ಶ್ರಾದ್ಧ ಅಪರಾಹ್ನದ ಕಾಲದಲ್ಲಿ ಒಂದೇ ತಿಥಿಯು ವ್ಯಾಪಿಸಿದ್ದಾಗ ಆ ತಿಥಿಯೇ ಅಂದಿನ ಶ್ರಾದ್ಧ ತಿಥಿ.
2. ಕೆಲವು ದಿನಗಳಲ್ಲಿ, ಶ್ರಾದ್ಧ ಅಪರಾಹ್ನ ಸಮಯದಲ್ಲೇ ಒಂದು ತಿಥಿಯ ಅಂತ್ಯವೂ, ಮುಂದಿನ ತಿಥಿಯ ಆದಿಯೂ ಆಗುತ್ತದೆ. ಆ ಸಂದರ್ಭದಲ್ಲಿ:
    3. ಆ ಎರಡು ತಿಥಿಗಳಲ್ಲಿ, ಯಾವ ತಿಥಿಯ ಶ್ರಾದ್ಧ ಅಪರಾಹ್ನದಲ್ಲಿನ ವ್ಯಾಪ್ತಿ ಹೆಚ್ಚೋ ಅದೇ ಅಂದಿನ ಶ್ರಾದ್ಧ ತಿಥಿಯು.
    4. ಒಂದೇ ತಿಥಿಯು ಎರಡು ದಿನಗಳ ಶ್ರಾದ್ಧ ಅಪರಾಹ್ನದಲ್ಲಿ ವ್ಯಾಪಿಸಿದ್ದಾಗ, ಯಾವ ದಿನದಲ್ಲಿ ವ್ಯಾಪ್ತಿ ಹೆಚ್ಚೋ, ಆ ದಿನದಲ್ಲಿಯೇ ಶ್ರಾದ್ಧ ತಿಥಿಯು.
    5. ಕೆಲವೊಮ್ಮೆ, ಒಂದೇ ದಿನದಲ್ಲಿ ಎರಡು ತಿಥಿಗಳ ಶ್ರಾದ್ಧ ಅಪರಾಹ್ನ ವ್ಯಾಪ್ತಿ ಹಿಂದಿನ ಮತ್ತು ಮುಂದಿನ ದಿನಗಳಿಗಿಂತಲೂ ಹೆಚ್ಚಾಗಿರುತ್ತದೆ. ಆಗ ಆ **ಎರಡೂ ಶ್ರಾದ್ಧ ತಿಥಿಗಳು** ಒಂದೇ ದಿನದಲ್ಲಿ ಎಂದು ಪರಿಗಣಿಸಬೇಕು.
    6. ಒಂದೇ ದಿನದ ಶ್ರಾದ್ಧ ಅಪರಾಹ್ನದಲ್ಲಿ ಎರಡು ತಿಥಿಗಳು ವ್ಯಾಪಿಸಿದ್ದಾಗಲೂ, ಅವುಗಳ ಶ್ರಾದ್ಧ ಅಪರಾಹ್ನ ವ್ಯಾಪ್ತಿ ಹಿಂದಿನ ಮತ್ತು ಮುಂದಿನ ದಿನಗಳಿಗಿಂತಲೂ ಕಡಮೆ ಇರುವುದೂ ಉಂಟು. ಆಗ, ಆ ದಿನವನ್ನು **ಶೂನ್ಯ** ಶ್ರಾದ್ಧ ತಿಥಿ ಎಂದು ಪರಿಗಣಿಸಬೇಕು.

| ಉದಾಹರಣೆ: | ದಿನಾಂಕ 1 | ದಿನಾಂಕ 2 | ದಿನಾಂಕ 3 |
|---|---|---|---|
| ತಿಥಿಯ ವ್ಯಾಪ್ತಿ: | ಷಷ್ಠೀ | ಸಪ್ತಮೀ | ಅಷ್ಟಮೀ |
| ಶ್ರಾದ್ಧ ತಿಥಿ: | ಷಷ್ಠೀ | ಸಪ್ತಮೀ | ಅಷ್ಟಮೀ |

ಮೇಲೆ, ಶ್ರಾದ್ಧ ಅಪರಾಹ್ನದಲ್ಲಿ ತಿಥಿಗಳು ವ್ಯಾಪಿಸಿವೆ. ಹಾಗಾಗಿ, ಅವವೇ ಶ್ರಾದ್ಧ ತಿಥಿಯೂ.

| ತಿಥಿಯ ವ್ಯಾಪ್ತಿ: | ಷಷ್ಠೀ | ಸಪ್ತಮೀ | ಅಷ್ಟಮೀ |
|---|---|---|---|
| ಶ್ರಾದ್ಧ ತಿಥಿ: | ಷಷ್ಠೀ | ಸಪ್ತಮೀ ಅಷ್ಟಮೀ | ನವಮೀ |

ಸಪ್ತಮೀ ತಿಥಿಯು ದಿನಾಂಕ 2 ರಂದು ಮಾತ್ರ ಶ್ರಾದ್ಧ ಅಪರಾಹ್ನದಲ್ಲಿ ವ್ಯಾಪಿಸಿದೆ. ಅಷ್ಟಮೀ ತಿಥಿಯು ದಿನಾಂಕ 2 ರ ಶ್ರಾದ್ಧ ಅಪರಾಹ್ನದಲ್ಲಿ ದಿನಾಂಕ 3 ರ ಶ್ರಾದ್ಧ ಅಪರಾಹ್ನಕ್ಕಿಂತ ಹೆಚ್ಚು ವ್ಯಾಪಿಸಿದೆ. ಹಾಗಾಗಿ, ದಿನಾಂಕ 2 ರಂದು ಸಪ್ತಮೀ ಮತ್ತು ಅಷ್ಟಮೀ ಎರಡೂ ಶ್ರಾದ್ಧ ತಿಥಿಗಳು.

| ತಿಥಿಯ ವ್ಯಾಪ್ತಿ: | ಸಪ್ತಮೀ | ಅಷ್ಟಮೀ | |
|---|---|---|---|
| ಶ್ರಾದ್ಧ ತಿಥಿ: | ಸಪ್ತಮೀ | ಶೂನ್ಯ | ಅಷ್ಟಮೀ |

ಈ ಉದಾಹರಣೆಯಲ್ಲಿ, ಸಪ್ತಮೀ ತಿಥಿಯು ದಿನಾಂಕ 1 ರ ಶ್ರಾದ್ಧ ಅಪರಾಹ್ನದಲ್ಲಿ ದಿನಾಂಕ 2 ರ ಶ್ರಾದ್ಧ ಅಪರಾಹ್ನಕ್ಕಿಂತಾ ಹೆಚ್ಚು ವ್ಯಾಪಿಸಿದೆ ಮತ್ತು ಅಷ್ಟಮೀ ತಿಥಿಯು ದಿನಾಂಕ 3 ರ ಶ್ರಾದ್ಧ ಅಪರಾಹ್ನದಲ್ಲಿ ದಿನಾಂಕ 2 ರ ಶ್ರಾದ್ಧ ಅಪರಾಹ್ನಕ್ಕಿಂತ ಹೆಚ್ಚು ವ್ಯಾಪಿಸಿದೆ. ಆದ್ದರಿಂದ, ದಿನಾಂಕ 2 ರಂದು ಯಾವ ಶ್ರಾದ್ಧ ತಿಥಿಯೂ ಇಲ್ಲ. ಅದನ್ನು ಶೂನ್ಯ ಎಂದು ಕರೆಯುತ್ತಾರೆ.

ಈ ಉದಾಹರಣೆಗಳಲ್ಲಿ ಕೊಟ್ಟಿರುವ ಚಿತ್ರದಲ್ಲಿ, ಶ್ರಾದ್ಧ ಅಪರಾಹ್ನವನ್ನು ಬೃಹದಾಕಾರವಾಗಿ ಕೊಟ್ಟಿರುತ್ತದೆ. ಇದರಿಂದಾಗಿ ವ್ಯಾಪ್ತಿಯನ್ನು ಗಮನಿಸಲು ಅನುಕೂಲವಾಗುವುದು ಎನ್ನುವುದೇ ಉದ್ದೇಶ.

## ಯೋಗ

ಯಾವ ಒಂದು ಸಮಯದಲ್ಲೂ ಇರುವ ಅನುಕೂಲ ಪರಿಸ್ಥಿತಿಯನ್ನು ಯೋಗ ಎಂದು ಕರೆಯುತ್ತಾರೆ. ಯೋಗಗಳು 27.

| ಕ್ರ. | ಯೋಗ | ಅಭಿಮಾನಿ ದೇವತೆ | ಕ್ರ. | ಯೋಗ | ಅಭಿಮಾನಿ ದೇವತೆ |
|---|---|---|---|---|---|
| 1 | ವಿಷ್ಕಂಭ | ವಿಶ್ವೇ ದೇವತೆಗಳು | 15 | ವಜ್ರ | ಇಂದ್ರ |
| 2 | ಪ್ರೀತಿ | ಮರುತ್ | 16 | ಸಿದ್ಧಿ | ಹಿರಣ್ಯ |
| 3 | ಆಯುಷ್ಮಾನ್ | ಹಿರಣ್ಯಗರ್ಭ | 17 | ವ್ಯತೀಪಾತ | ವಿಶ್ವೇ ದೇವತೆಗಳು |
| 4 | ಸೌಭಾಗ್ಯ | ದುರ್ಗಾ | 18 | ವರೀಯಾನ್ | ವಾಯು |
| 5 | ಶೋಭನ | ಪೃಥಿವೀ | 19 | ಪರಿಘ | ಪವಮಾನಸೋಮ |
| 6 | ಅತಿಗಂಡ | ಅದಿತಿ | 20 | ಶಿವ | ಪೃಥಿವೀ |
| 7 | ಸುಕರ್ಮನ್ | ಸೂರ್ಯ | 21 | ಸಿದ್ಧ | ಇಂದ್ರ |
| 8 | ಧೃತಿ | ರಾಜ್ಞೀ | 22 | ಸಾಧ್ಯ | ವಿಶ್ವೇ ದೇವತೆಗಳು |
| 9 | ಶೂಲ | ಇಂದ್ರ | 23 | ಶುಭ | ಮರುತ್ |
| 10 | ಗಂಡ | ಮರುತ್ | 24 | ಶುಕ್ಲ | ಇಂದ್ರ |
| 11 | ವೃದ್ಧಿ | ಮರುತ್ | 25 | ಬ್ರಹ್ಮ | ಬ್ರಹ್ಮಾ |
| 12 | ಧ್ರುವ | ಪ್ರಾಜ್ಞೀ | 26 | ಐಂದ್ರ | ಇಂದ್ರ |
| 13 | ವ್ಯಾಘಾತ | ಅಗ್ನಿ | 27 | ವೈಧೃತಿ | ಅಗ್ನಿ |
| 14 | ಹರ್ಷಣ | ಹರಿ | | | |

ಯೋಗ ಸೂರ್ಯ ಚಂದ್ರರ ಸ್ಥಾನಗಳಿಗೆ ಸಂಬಂಧಿಸಿದೆ. ಸೂರ್ಯ ಮತ್ತು ಚಂದ್ರರ ಸ್ಥಾನಗಳ ಕೋನಮಾಪನಗಳನ್ನು ಸೇರಿಸಿದಾಗ (ಮೊತ್ತ) ಬರುವ ಫಲಿತಾಂಶ ಯೋಗವನ್ನು ಸೂಚಿಸುತ್ತದೆ. 27 ಯೋಗಗಳನ್ನು ಒಂದು ವರ್ತುಲ (ಸರ್ಕಲ್) ದಲ್ಲಿ ಚಿತ್ರಿಸಿದಾಗ, 1 ಯೋಗಕ್ಕೆ 13° 20' ಆಗುತ್ತವೆ. [ಈ ಮೊತ್ತವು 360° ಗೆ ಹೆಚ್ಚಾದಾಗ, 360° ನ್ನು ಕಳೆದು ಬಂದ ಫಲಿತಾಂಶವನ್ನು ಉಪಯೋಗಿಸುತ್ತಾರೆ. ಉದಾಹರಣೆ: ಸೂರ್ಯ 270° + ಚಂದ್ರ 200° = 470° - 360° = 110°]

ಕೆಲವು ಯೋಗಗಳು ಅನುಕೂಲಕರವಾದದ್ದಲ್ಲ ಎಂದು ಪರಿಗಣಿಸಿದ್ದಾರೆ. ಅವುಗಳು: ವಿಷ್ಕಂಭ, ಅತಿಗಂಡ, ಶೂಲ, ಗಂಡ, ವ್ಯಾಘಾತ, ವಜ್ರ, ವ್ಯತೀಪಾತ, ಪರಿಘ ಮತ್ತು ವೈಧೃತಿ.

ಕೆಲವು ಪಂಚಾಂಗಗಳಲ್ಲಿ ಯೋಗಗಳೆಂದು ಅಮೃತ, ಸಿದ್ಧ ಮತ್ತು ಮರಣ ಎಂದು ದಿನನಿತ್ಯಕ್ಕೆ ಕೊಟ್ಟಿರುತ್ತಾರೆ. ಅವುಗಳು ವಾರದ ದಿನ ಮತ್ತು ನಕ್ಷತ್ರದ ಸಂಯೋಗದಿಂದಾಗುವ ಫಲಗಳ ಸಾರಾಂಶ. ಯೋಗಗಳು ಎಂದರೆ ಫಲಗಳು ಎಂಬ ದೃಷ್ಟಿಯಿಂದ ಕೊಟ್ಟಿರಬಹುದು. ಅವುಗಳು ಮೇಲೆ ಹೇಳಿದ ಯೋಗಗಳಿಗೆ ಸಂಬಂಧ ಪಟ್ಟವಲ್ಲ.

## ನಕ್ಷತ್ರ ಮಂಡಲ

ಯೋಗಗಳಂತೆಯೇ 27 ನಕ್ಷತ್ರಮಂಡಲಗಳಿರುವುದರಿಂದ, ಸುಲಭವಾಗಿ ಹೇಳುವುದಾದರೆ, ಒಂದು ವರ್ತುಲದಲ್ಲಿ ಪ್ರತಿ 13° 20' ಗೂ ಒಂದು ನಕ್ಷತ್ರಮಂಡಲ. ಪಂಚಾಂಗದಲ್ಲಿ ನಕ್ಷತ್ರ ಎಂದು ಸೂಚಿಸುವುದು ಆ ಸಮಯದಲ್ಲಿನ ಚಂದ್ರನ ಸ್ಥಾನವನ್ನು (ವರ್ತುಲದಲ್ಲಿನ ಜಾಗದ ರೂಪದಲ್ಲಿ). ಪಂಚಾಂಗದಲ್ಲಿ ಗ್ರಹಗಳ ನಕ್ಷತ್ರ ಪ್ರವೇಶ ಎಂದಾಗ ಗ್ರಹಗಳ ಸ್ಥಳವನ್ನು ವರ್ತುಲದಲ್ಲಿನ ಜಾಗದ ರೂಪದಲ್ಲಿ ಹೇಳಿದಂತಾಯಿತು.

ನಕ್ಷತ್ರಮಂಡಲಗಳಿಗೆ ನಕ್ಷತ್ರಗಳಿಂದಲೇ ಆದ ಚಿತ್ರ ಸಂಕೇತಗಳಿವೆ. ಅವುಗಳನ್ನು ಆಕಾಶದಲ್ಲಿ (ನಕ್ಷತ್ರಗಳು ಕಾಣುವ ದಿವಸಗಳಲ್ಲಿ) ಕಾಣಬಹುದು. ದಿನದ ನಕ್ಷತ್ರ (ಪಂಚಾಂಗದಲ್ಲಿ ಕೊಟ್ಟಿರುವಂತೆ ಚಂದ್ರನ ಸ್ಥಾನ) ಕ್ಕೆ ಅನುಗುಣವಾದ ನಕ್ಷತ್ರಮಂಡಲವನ್ನು ಅರ್ಧ ರಾತ್ರಿಯಲ್ಲಿ ಸರಿಯಾಗಿ ಮೇಲೆ (ಗಡಿಯಾರದಲ್ಲಿನ 12 ರ ಸ್ಥಳದಲ್ಲಿ) ಕಾಣಬಹುದು ಎಂದು ಹೇಳುತ್ತಾರೆ.

ನಕ್ಷತ್ರದ ಹೆಸರುಗಳು, ನಕ್ಷತ್ರಮಂಡಲಗಳ ಚಿತ್ರ ಮತ್ತು ನಕ್ಷತ್ರಗಳ ಅಭಿಮಾನಿ ದೇವತೆಗಳ ಪಟ್ಟಿ ಕೆಳಗೆ ನಮೂದಿಸಲ್ಪಟ್ಟಿದೆ.

| ಕ್ರ. | ನಕ್ಷತ್ರ | ನಕ್ಷತ್ರ ಮಂಡಲದ ಚಿತ್ರ | ಅಭಿಮಾನಿ ದೇವತೆ | ತ್ಯಾಜ್ಯ[1] |
|---|---|---|---|---|
| 1 | ಅಶ್ವಿನೀ | ಕುದುರೆಯ ಮುಖದಂತೆ 3 ನಕ್ಷತ್ರಗಳು | ಅಶಿನೀ ದೇವತೆಗಳು | 50 |
| 2 | ಭರಣೀ | ಕುಂಭದಂತೆ 3 ನಕ್ಷತ್ರಗಳು | ಯಮ | 24 |
| 3 | ಕೃತ್ತಿಕಾ | ಕತ್ತಿಯಂತೆ 6 ನಕ್ಷತ್ರಗಳು | ಅಗ್ನಿ | 30 |
| 4 | ರೋಹಿಣೀ | ರಥದಂತೆ 5 ನಕ್ಷತ್ರಗಳು | ಪ್ರಜಾಪತಿ | 40 |
| 5 | ಮೃಗಶಿರಾ | ಜಿಂಕೆಯ ತಲೆಯಂತೆ 3 ನಕ್ಷತ್ರಗಳು | ಸೋಮ | 14 |
| 6 | ಆರ್ದ್ರಾ | ಮಣಿಯಂತೆ 1 ನಕ್ಷತ್ರ | ರುದ್ರ | 21 |
| 7 | ಪುನರ್ವಸು | ಬಿಲ್ಲಿನಂತೆ 5 ನಕ್ಷತ್ರಗಳು | ಅದಿತಿ | 30 |
| 8 | ಪುಷ್ಯಾ | ಹೂವಿನಂತೆ 3 ನಕ್ಷತ್ರಗಳು | ಬೃಹಸ್ಪತಿ | 21 |
| 9 | ಆಶ್ಲೇಷಾ | ಸರ್ಪದಂತೆ 6 ನಕ್ಷತ್ರಗಳು | ಸರ್ಪ | 32 |

| ಕ್ರ. | ನಕ್ಷತ್ರ | ನಕ್ಷತ್ರ ಮಂಡಲದ ಚಿತ್ರ | ಅಭಿಮಾನಿದೇವತೆ | ತ್ಯಾಜ್ಯ[1] |
|---|---|---|---|---|
| 10 | ಮಘಾ (ಮಖ) | ಪಲ್ಲಕ್ಕಿಯಂತೆ 5 ನಕ್ಷತ್ರಗಳು | ಪಿತೃದೇವತೆಗಳು | 30 |
| 11 | ಪುಬ್ಬ (ಪೂರ್ವಾ ಫಲ್ಗುನೀ) | ಮಂಚದ ಒಂದು ಕಾಲಿನಂತೆ 4 ನಕ್ಷತ್ರಗಳು | ಆರ್ಯಮ | 20 |
| 12 | ಉತ್ತರ (ಉತ್ತರಾ ಫಲ್ಗುನೀ) | | ಭಗ | 18 |
| 13 | ಹಸ್ತಾ | ಅಂಗೈಯಂತೆ 5 ನಕ್ಷತ್ರಗಳು | ಸವಿತಾ | 21 |
| 14 | ಚಿತ್ರಾ(ಚಿತ್ತಾ) | ಮುತ್ತಿನಂತೆ 1 ನಕ್ಷತ್ರ | ತ್ವಷ್ಟ್ರ | 20 |
| 15 | ಸ್ವಾತೀ | ನೀಲಮಣಿ (ಸಫೈರ್) ಯಂತೆ 1 ನಕ್ಷತ್ರ | ವಾಯು | 14 |
| 16 | ವಿಶಾಖಾ | ಕುಂಬಾರನ ಚಕ್ರದಂತೆ 3 ನಕ್ಷತ್ರಗಳು | ಇಂದ್ರಾಗ್ನಿಗಳು | 14 |
| 17 | ಅನುರಾಧಾ | ಛತ್ರಿಯಂತೆ 3 ನಕ್ಷತ್ರಗಳು | ಮಿತ್ರ | 10 |
| 18 | ಜ್ಯೇಷ್ಠಾ | | ಇಂದ್ರ | 14 |
| 19 | ಮೂಲಾ | ಮುದುರಿಕೊಂಡ ಸಿಂಹದಂತೆ 6 ನಕ್ಷತ್ರಗಳು | ನಿಋತಿ | 20, 56 |
| 20 | ಪೂರ್ವಾಷಾಢಾ | ಚೌಕದಂತೆ 4 ನಕ್ಷತ್ರಗಳು | ಅಪ್‌ದೇವತೆಗಳು | 24 |
| 21 | ಉತ್ತರಾಷಾಢಾ | | ವಿಶ್ವೇದೇವತೆಗಳು | 20 |
| 22 | ಶ್ರವಣಾ | ಬಾಣದಂತೆ 3 ನಕ್ಷತ್ರಗಳು | ವಿಷ್ಣು | 10 |
| 23 | ಧನಿಷ್ಠಾ | ಪೀಪಾಯಿಯಂತೆ 4 ನಕ್ಷತ್ರಗಳು | ವಸು | 10 |
| 24 | ಶತಭಿಷಾ (ಶತತಾರಾ) | ಹೂವಿನಂತೆ 100 ನಕ್ಷತ್ರಗಳು | ವರುಣ | 18 |
| 25 | ಪೂರ್ವಾಭಾದ್ರಾ | ಮಂಚದ ಕಾಲುಗಳಂತೆ 4 ನಕ್ಷತ್ರಗಳು | ಅಜೈಕಪಾತ್ | 16 |
| 26 | ಉತ್ತರಾಭಾದ್ರಾ | | ಅಹಿರ್ಬುಧ್ನ್ಯ | 24 |
| 27 | ರೇವತೀ | ಮೀನಿನಂತೆ 3 ನಕ್ಷತ್ರಗಳು | ಪೂಷಾ | 30 |

1. ನಕ್ಷತ್ರ ತ್ಯಾಜ್ಯ ಮುಂದೆ ವಿವರಿಸಿದೆ.

## ನಕ್ಷತ್ರ – ಚಂದ್ರನ ಸ್ಥಾನ

ಪಂಚಾಂಗದಲ್ಲಿ ನಕ್ಷತ್ರ ಎಂದು ಸೂಚಿಸುವುದು ಆ ಸಮಯದಲ್ಲಿನ ಚಂದ್ರನ ಸ್ಥಾನವನ್ನು ವರ್ತುಲದಲ್ಲಿನ ಜಾಗದ ರೂಪದಲ್ಲಿ. ಚಂದ್ರ ಒಂದು ನಕ್ಷತ್ರದಷ್ಟು ಚಲಿಸಲು ಸಲ್ಲುವ ಕನಿಷ್ಠ, ಗರಿಷ್ಠ ಮತ್ತು ಅತಿ ಸಾಮಾನ್ಯ (ಮೀನ್) ಕಾಲಾವಧಿಯನ್ನು ಕೆಳಗೆ ಕೊಟ್ಟಿದೆ. ಇದನ್ನು ಸಾಮಾನ್ಯ ಬಳಕೆಯಲ್ಲಿ ನಕ್ಷತ್ರದ ಕಾಲಾವಧಿ ಎಂದೇ ಕರೆಯುತ್ತಾರೆ.

| ನಕ್ಷತ್ರದ ಕಾಲಾವಧಿ | ಘಟಿ | ಪಲ | ವಿಪಲ | ಘಂಟೆ | ನಿಮಿಷ | ಸೆಕಂಡ್ |
|---|---|---|---|---|---|---|
| ಗರಿಷ್ಠ | 66 | 21 | 0 | 26 | 32 | 24 |
| ಅತಿ ಸಾಮಾನ್ಯ | 60 | 42 | 53.4 | 24 | 17 | 9.36 |
| ಕನಿಷ್ಠ | 55 | 56 | 0 | 22 | 22 | 24 |

## ಪಾದ (ಚರಣ)

ನಕ್ಷತ್ರವನ್ನು ನಾಲ್ಕು ಭಾಗಮಾಡಿ ಪ್ರತಿ ಭಾಗವನ್ನು ಪಾದ ಅಥವಾ ಚರಣ ಎಂದು ಕರೆಯಲಾಗಿದೆ. ಪಾದಗಳಿಗೆ ಮೊದಲನೆಯ ಪಾದ, ಎರಡನೆಯ ಪಾದ,.. ಎಂದೇ ಕರೆಯುವುದು – ಬೇರೆ ಪ್ರತ್ಯೇಕ ಹೆಸರುಗಳಿಲ್ಲ.

ನಕ್ಷತ್ರವು ವರ್ತುಲದಲ್ಲಿ1/27 ಭಾಗ. ರಾಶಿಯು ವರ್ತುಲದಲ್ಲಿ 1/12 ಭಾಗ. ಆದ್ದರಿಂದ ಒಂದು ರಾಶಿಯು 2 1/4 ನಕ್ಷತ್ರಗಳಿಗೆ ಸಮ. ಒಂದು ನಕ್ಷತ್ರದಲ್ಲಿ 4 ಪಾದಗಳಿರುವುದರಿಂದ ಒಂದು ರಾಶಿಗೆ 9 ಪಾದಗಳು ಸಮ. ಬಹುಶಃ ರಾಶಿ ನಕ್ಷತ್ರಗಳ ಸಮತೋಲನಕ್ಕಾಗಿಯೇ ಪಾದಗಳನ್ನು ರಚಿಸಿರಬೇಕು.

ಉತ್ತರಾಷಾಢಾ ನಕ್ಷತ್ರದ ಮೂರನೆಯ ಮತ್ತು ನಾಲಕ್ಕನೆಯ ಪಾದಗಳನ್ನೂ, ಶ್ರವಣಾ




ನಕ್ಷತ್ರದ ಮೊದಲನೆಯ ಮತ್ತು ಎರಡನೆಯ ಪಾದಗಳನ್ನೂ ಸೇರಿಸಿ ಅಭಿಜಿತ್ ಎಂಬ ನಕ್ಷತ್ರವೆಂದು ಪರಿಗಣಿಸುವುದೂ ಉಂಟು.

ಮೇಲೆ ಕೊಟ್ಟಿರುವ **ರಾಶಿ–ನಕ್ಷತ್ರಗಳ ಚಿತ್ರೀಕರಣ** ನೋಡಿ. ಅದರಲ್ಲಿ, ರಾಶಿ – ನಕ್ಷತ್ರಗಳ ಸಮತೋಲನವನ್ನು ಸ್ಪಷ್ಟೀಕರಿಸಿದೆ. ಒಂದು ವರ್ತುಲದಲ್ಲಿ 12 ರಾಶಿಗಳು ಅಥವಾ 27 ನಕ್ಷತ್ರಗಳು ಅಥವಾ 27 X 4 = 108 ಪಾದಗಳು ಇರುವುದರಿಂದ ಎಲ್ಲಾ ಗ್ರಹಗಳ ಸ್ಥಾನವನ್ನೂ ರಾಶಿ / ನಕ್ಷತ್ರ / ಪಾದ ಗಳ ಮೂಲಕ ಸೂಚಿಸಬಹುದು.

## ನಕ್ಷತ್ರ ತ್ಯಾಜ್ಯ

ಎಲ್ಲಾ ನಕ್ಷತ್ರಗಳ ಕಾಲಾವಧಿಯಲ್ಲೂ, ನಕ್ಷತ್ರ ತ್ಯಾಜ್ಯ ಎಂಬ 3 ಘಟಿ 45 ವಿಘಟಿಯಿಂದ 4 ಘಟಿ 30 ವಿಘಟಿಯವರೆಗಿನ (ಗರಿಷ್ಟ ತ್ಯಾಜ್ಯ ಕಾಲ 1 ಘಂಟೆ 48 ನಿಮಿಷಗಳು) ಕಾಲವು ಶುಭ ಕಾರ್ಯಗಳಿಗೆ ವರ್ಜ್ಯ ಕಾಲವಿರುತ್ತದೆ. ಈ ತ್ಯಾಜ್ಯ ಕಾಲದ ಮಧ್ಯದ

ಘಟಿಯನ್ನು ನಕ್ಷತ್ರಗಳ ಹೆಸರಿನ ಕೋಷ್ಟಕದಲ್ಲಿ ಕೊಟ್ಟಿದೆ.ಈ ಕಾಲದ ಪ್ರಾರಂಭ ಸಮಯುವನ್ನು ಅಥವಾ ಇಡೀ ಸಮಯವನ್ನೇ ಪಂಚಾಂಗಗಳಲ್ಲಿ ನಮೂದಿಸಿರುತ್ತಾರೆ. ಈ ತ್ಯಾಜ್ಯ ಸಮಯುವು ಹಗಲಿನಲ್ಲಿ ಸಂಭವಿಸಿದರೆ ದಿನ ಘಟಿ–ವಿಘಟಿಗಳು ಎಂದೂ, ರಾತ್ರಿಯಲ್ಲಿ ಸಂಭವಿಸಿದರೆ ರಾತ್ರಿ ಘಟಿ–ವಿಘಟಿಗಳು ಎಂದೂ, ಮರುದಿನ ಸಂಭವಿಸಿದರೆ ಶೇಷ ಅಥವಾ ಪರದಿನ ಘಟಿ–ವಿಘಟಿಗಳು ಎಂದೂ ನಮೂದಿಸುವುದು ರೂಢಿಯಲ್ಲಿದೆ. ಮುಹೂರ್ತಗಳ ನಿಶ್ಕರ್ಷೆಯಲ್ಲಿ ಇದು ಉಪಯೋಗಕ್ಕೆ ಬರುವುದು.

**ಪಂಚಾಂಗದಲ್ಲಿ ಗ್ರಹಗಳ ಸ್ಥಾನಗಳ ವಿವರಣೆ**

ಪಂಚಾಂಗದಲ್ಲಿ, ಒಂದು ಪಕ್ಷದ ಎಲ್ಲಾ ವಿಚಾರಗಳನ್ನೂ ಒಂದು ಪುಟದಲ್ಲಿ ಕೊಡುವುದು ಪದ್ಧತಿ. ಪಕ್ಷದ ಅಂತ್ಯದಲ್ಲಿನ ಅಥವಾ ಆದಿಯಲ್ಲಿನ ಗ್ರಹಗಳ ಸ್ಥಾನಗಳನ್ನೊಳಗಂಡ ಕುಂಡಲಿಯನ್ನು ಕೊಟ್ಟಿರುತ್ತಾರೆ. ಕೆಲವು ಪಂಚಾಂಗಗಳಲ್ಲಿ, ಅದರೊಡನೆ ಗ್ರಹಗಳ ಸ್ಥಾನಮಾಪನವನ್ನೂ ರಾಶಿ–ಭಾಗ–ಪಲ–ವಿಪಲ ಎಂದು ಕೊಟ್ಟಿರುತ್ತಾರೆ.

ಇದಲ್ಲದೆ, ಪಕ್ಷದಲ್ಲಿನ ದಿನಗಳಲ್ಲಿ ಗ್ರಹಗಳ ಚಲನೆ ಗಮನೀಯವಾಗಿದ್ದಲ್ಲಿ, ಅವನ್ನು ಆ ದಿನದ ವಿಷಯಗಳ ಸಾಲಿನಲ್ಲಿ ಕೊಟ್ಟಿರುತ್ತಾರೆ. ಗಮನೀಯ ಎಂದರೆ, ಗ್ರಹಗಳು ಮೈಲಿಗಲ್ಲುಗಳನ್ನು ಪ್ರವೇಶಿಸುವುದು. ರಾಶಿ, ನಕ್ಷತ್ರ, ಪಾದಗಳೇ ಈ ಮೈಲಿಗಲ್ಲುಗಳು. ಉದಾಹರಣೆಗೆ: ಮೇಷೇ ರವಿ ಅಥವಾ ಅಶ್ವಿನೀ ಪ್ರಥಮೇ ರವಿ 24-17 ಎಂದರೆ ಸೂರ್ಯನು ಮೇಷ ರಾಶಿಯನ್ನು ಅಥವಾ ಅಶ್ವಿನೀ ನಕ್ಷತ್ರದ ಮೊದಲನೇ ಪಾದವನ್ನು ಅಂದಿನ ಸೂರ್ಯೋದಯದಿಂದ 24 ಘಟಿ 17 ವಿಘಟಿ ಸಮಯಕ್ಕೆ ಪ್ರವೇಶಿಸುತ್ತಾನೆ. ರಾಶಿ ಪ್ರವೇಶಗಳನ್ನು ಕುಂಡಲಿಯ ಮಧ್ಯದಲ್ಲಿಯೂ ಕೊಟ್ಟಿರುತ್ತಾರೆ.

**ಮಳೆ ನಕ್ಷತ್ರಗಳು**

ಸೂರ್ಯ ತನ್ನ ಚಲನೆಯಲ್ಲಿ, ಪ್ರತಿ ನಕ್ಷತ್ರದಲ್ಲಿ ಸರಾಸರಿ 13.5 ದಿನಗಳ ಕಾಲ ವಾಸಿಸುತ್ತಾನೆ. ಆ ಕಾಲವನ್ನು ಸೂರ್ಯ ವಾಸಮಾಡುತ್ತಿರುವ ನಕ್ಷತ್ರದ ಹೆಸರಿನ ಮಳೆ ನಕ್ಷತ್ರ ಕಾಲ ಎಂದು ಪರಿಗಣಿಸುತ್ತಾರೆ.

**ಅಧಿಕ ಮಾಸ**

ಸಾಮಾನ್ಯವಾಗಿ ಪ್ರತಿಯೊಂದು ಚಾಂದ್ರಮಾನ ಮಾಸದ ಕಾಲಾವಧಿಯಲ್ಲಿಯೂ ಒಂದು ಸಂಕ್ರಮಣವು ಇರುತ್ತದೆ. ಆದಾಗ್ಯೂ, **ಸರಾಸರಿಯಲ್ಲಿ ಎರಡೂವರೆ ವರ್ಷಕ್ಕೊಮ್ಮೆ**, ಒಂದು ಚಾಂದ್ರಮಾನ ಮಾಸದ ಕಾಲಾವಧಿಯಲ್ಲಿ ಸಂಕ್ರಮಣವೇ ಇರುವುದಿಲ್ಲ. ಆ ಚಾಂದ್ರಮಾನ ಮಾಸವನ್ನು **ಅಧಿಕ ಮಾಸ** ಎಂದು ಪರಿಗಣಿಸಲಾಗುವುದು. ಆ ಮಾಸದ ಮುಂದಿನ ಮಾಸಕ್ಕೆ **ನಿಜ ಮಾಸ** ಎನ್ನಲಾಗುವುದು. ಎರಡೂ ಮಾಸಗಳಿಗೆ ಒಂದೇ ಹೆಸರು – ಅದನ್ನು ಅಧಿಕ/ನಿಜ ಪದಗಳ ಜೋಡಣೆಯೊಂದಿಗೆ ಉಪಯೋಗ. ಈ ತರಹದ ಅಧಿಕ ಮಾಸದಿಂದ ಕೂಡಿದ ಚಾಂದ್ರಮಾನ ವರ್ಷದಲ್ಲಿ 13 ಮಾಸಗಳಿರುತ್ತವೆ.

ಅತಿ ಸರಳವಾದ ಭಾಷೆಯಲ್ಲಿ ಹೇಳುವುದಾದರೆ, ಚಾಂದ್ರಮಾನ ವರ್ಷವು ಸೌರಮಾನ ವರ್ಷಕ್ಕಿಂತಾ 11 ದಿನ ಕಡಿಮೆ ಕಾಲಾವಧಿಯದ್ದು. ಇದನ್ನು ಸರಿತೂಗಲೋ ಎಂಬಂತೆ ಎರಡೂವರೆ ವರ್ಷಕ್ಕೊಮ್ಮೆ ಅಧಿಕ ಮಾಸವನ್ನು ಸೇರಿಸುತ್ತಾರೆ. ಹಾಗೆ ಸೇರಿಸಲಿಕ್ಕೂ ಮೇಲೆ ಹೇಳಿದ **ಸಂಕ್ರಮಣವಿಲ್ಲದ ಮಾಸ** ಎಂಬ ನಿಯಮವಿದೆ.




## ಕ್ಷಯ ಮಾಸ

ಕೆಲವೊಮ್ಮೆ, ಒಂದು ಚಾಂದ್ರಮಾನ **ಮಾಸದಲ್ಲಿ ಎರಡು ಸಂಕ್ರಮಣಗಳು** ಸಂಭವಿಸುತ್ತವೆ. ಈ ಚಾಂದ್ರಮಾನ ಮಾಸವನ್ನು ಕ್ಷಯ ಮಾಸ ಎನ್ನುತ್ತಾರೆ. ಕ್ಷಯ ಮಾಸವು ಕಾರ್ತೀಕ, ಪುಷ್ಯಾ ಮತ್ತು ಮಾಘ ಮಾಸಗಳಲ್ಲಿ ಮಾತ್ರ ಸಾಧ್ಯ. ಕ್ಷಯ ಮಾಸ ಸಂಭವಿಸಿದಾಗ ಕ್ಷಯ ಮಾಸವೂ ಅದರ ಮುಂದಿನ ಮಾಸವೂ ಒಟ್ಟಿಗೆ ಇವೆ ಎಂದು ಪರಿಗಣಿಸಿ ಆಚರಿಸುವುದು ಪದ್ಧತಿ. ಇದಕ್ಕಾಗಿ, ತಿಥಿಯಲ್ಲಿನ ಎರಡು ಕರಣಗಳಲ್ಲಿ, ಮೊದಲನೆಯದನ್ನು ಕ್ಷಯ ಮಾಸಕ್ಕೂ, ಎರಡನೆಯದನ್ನು ಮುಂದಿನ ಮಾಸಕ್ಕೂ ಸೇರಿದ್ದೆಂದು ಭಾವಿಸಿ ಆಚರಣೆಗಳನ್ನು ಮಾಡುತ್ತಾರೆ.

ಕ್ಷಯ ಮಾಸವಿರುವ ವರ್ಷದಲ್ಲಿ 11 ಮಾಸಗಳೇ ಇರಬೇಕು. ಆದರೆ, ಆ ವರ್ಷಗಳಲ್ಲೆಲ್ಲಾ ಅಧಿಕ ಮಾಸವೂ ಸಂಭವಿಸುವುದರಿಂದ 12 ಮಾಸಗಳೇ ಇರುತ್ತವೆ.

ಕ್ಷಯ ಮಾಸವು 141 ವರ್ಷಗಳಿಗೊಮ್ಮೆ ಸಂಭವಿಸುತ್ತದೆ. ಕೆಲವೊಮ್ಮೆ 19 ವರ್ಷಗಳಿಗೂ ಸಂಭವಿಸಬಹುದು.

## ಚಂದ್ರ ದರ್ಶನ

ಚಾಂದ್ರಮಾನ ಮಾಸದಲ್ಲಿನ ಪ್ರಥಮಾ ಚಂದ್ರ ದರ್ಶನವು ಶುಕ್ಲ ದ್ವಿತೀಯಾ ತಿಥಿಯಲ್ಲಿ ಆಗುತ್ತದೆ. ಹಲವು ಬಾರಿ, ಪ್ರಥಮಾ ತಿಥಿಯ ದಿನಾಂಕದಂದು, ಸೂರ್ಯಾಸ್ತದ ಮೊದಲು ಪ್ರಥಮಾ ತಿಥಿಯು ಅಂತ್ಯವಾದರೆ ಚಂದ್ರ ದರ್ಶನವು ಆಗುತ್ತದೆ. ಈ ಪ್ರಥಮಾ ಚಂದ್ರ ದರ್ಶನವು ಬಹಳ ಕಡಿಮೆ ಸಮಯ ಮತ್ತು ಒಂದು ರೇಖಾಕೃತಿಯಲ್ಲಿ ಸೂಕ್ಷ್ಮವಾಗಿಯೂ ಆಗುವುದರಿಂದ **ಚಂದ್ರ ದರ್ಶನ** ಎಂದು ಕೊಂಡಾಡಲ್ಪಡುತ್ತದೆ.

## ಮುಸ್ಲಿಂ ಮಾಸ / ವರ್ಷ ಮತ್ತು ಚಾಂದ್ರಮಾನ

ಮುಸ್ಲಿಂ ವರ್ಷ (ಹಿಜ್ರಾ / ಫಸಲೀ ವರ್ಷ) ಚಾಂದ್ರಮಾನವನ್ನೇ ಅವಲಂಬಿಸಿದೆ. ಮಾಸಗಳು ಚಂದ್ರ ದರ್ಶನದ ಮರುದಿನದಿಂದ ಮುಂದಿನ ಮಾಸದ ಚಂದ್ರ ದರ್ಶನದ ವರೆಗೆ. ಮಾಸಗಳು ಚಾಂದ್ರಮಾನ ಮಾಸಕ್ಕಿಂತಾ ಸಾಮಾನ್ಯವಾಗಿ 2 ದಿನ ವ್ಯತ್ಯಾಸದಲ್ಲಿರುತ್ತವೆ. ಹಬ್ಬಗಳೂ (ಮಾಸದ ದಿನಾಂಕಕ್ಕೆ ಸಂಬಂಧಿಸಿದ್ದರಿಂದ) ಚಂದ್ರ ದರ್ಶನವನ್ನವಲಂಬಿಸಿದೆ.

ಅಮಾವಾಸ್ಯೆಯ ಅಂತ್ಯ　　　　　　　　　　ಅಮಾವಾಸ್ಯೆಯ ಅಂತ್ಯ

| ತಿಥಿಗಳು: | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 30 | 1 | 2 | 3 |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|

**ಚಂದ್ರದರ್ಶನದಿಂದ ಚಂದ್ರದರ್ಶನದವರೆಗೆ**

ವರ್ಷದಲ್ಲಿ 12 ಮಾಸಗಳು. ಹೀಗಾಗಿ, ವರ್ಷದಲ್ಲಿ 354/355 ದಿನಗಳಿದ್ದು, ಸೌರಮಾನ / ಇಂಗ್ಲಿಷ್ ವರ್ಷಕ್ಕಿಂತ ಪ್ರತಿವರ್ಷವೂ 11 ದಿನಗಳು ಹಿಂದೆ ಹೋಗುತ್ತವೆ. ಅಧಿಕ/ಕ್ಷಯ ಮಾಸಗಳ ಗಣನೆ ಇಲ್ಲದಿರುವುದರಿಂದ ಚಾಂದ್ರಮಾನ ವರ್ಷದಲ್ಲಿ ಅಧಿಕ ಮಾಸ ಬಂದಾಗಲೆಲ್ಲಾ ಒಂದು ಮಾಸವೇ ಹಿಂದಕ್ಕೆ ಹೋಗುತ್ತದೆ.

ದಿನಾಂಕಗಳನ್ನು, ಸೌರಮಾಸಗಳಂತೆಯೇ 1, 2, 3, . . . ರಂತೆ ಉಪಯೋಗಿಸುತ್ತಾರೆ. ಮಾಸಗಳು: 1. ಮುಹರಂ, 2. ಸಫರ್, 3. ರಬ್ಬಿ–ಉಲ್–ಅವ್ವಲ್ (ಜಮಾದಿ–ಉಸ್–ಸನಿ), 4. ರಬ್ಬಿ–ಉಲ್–ಅಖರ್ (ರಬ್ಬಿ–ಉಸ್–ಸನಿ), 5. ಜಮಾದಿ–ಉಲ್–ಅವ್ವಲ್, 6. ಜಮಾದಿ–ಉಲ್–ಅಖರ್, 7. ರಜಾಬ್, 8. ಶಬಾನ್, 9. ರಂಝಾನ್, 10. ಶವ್ವಲ್, 11. ಜಿಲ್‌ಖಿಯಾದ್ ಮತ್ತು 12. ಜೆಲ್ದುಜ್

## ಕ್ರಿಶ್ಚಿಯನ್‌ರ ಹಬ್ಬಗಳು ಮತ್ತು ಚಾಂದ್ರಮಾನ

ಗುಡ್ ಫ್ರೈಡೇ ಎಂಬುದು ಈಸ್ಟರ್ ಸಂಡೇಯ ಹಿಂದಿನ ಶುಕ್ರವಾರ. ಈಸ್ಟರ್ ಎಂಬುದು, ವರ್ನಲ್ ಈಕ್ವಿನಾಕ್ಸ್ (ಮಾರ್ಚ್ 21) ನಂತರದ **ಪೌರ್ಣಮೀಯ** ನಂತರದ ಭಾನುವಾರ.

## ಋತುಗಳು

ಒಂದು ವರ್ಷದಲ್ಲಿ ಆರು ಋತುಗಳಿವೆ. ಎರಡು ಮಾಸಗಳು ಸೇರಿ ಒಂದು ಋತು ಆಗುತ್ತದೆ. ಚಾಂದ್ರಮಾನ ಮಾಸ ಮತ್ತು ಸೌರಮಾನ ಮಾಸಗಳು ಬೇರೆಬೇರೆ ಕಾಲಾವಧಿಯನ್ನು ಸೂಚಿಸಿದಾಗ್ಯೂ, ಒಂದೇ ಋತುಗಳ ಹೆಸರುಗಳನ್ನು ಉಪಯೋಗಿಸಿದ್ದಾರೆ.

| **ಋತುಗಳು** | **ಚಾಂದ್ರಮಾನ ಮಾಸಗಳು** | **ಸೌರಮಾನ ಮಾಸಗಳು** | |
|---|---|---|---|
| | | **ಸಂಸ್ಕೃತ / ಕನ್ನಡ** | **ತಮಿಳು** |
| ವಸಂತ | ಚೈತ್ರ – ವೈಶಾಖ | ಮೀನ – ಮೇಷ | ಚಿತ್ತಿರೈ – ವೈಕಾಸಿ |
| ಗ್ರೀಷ್ಮ | ಜ್ಯೇಷ್ಠ – ಆಷಾಢ | ವೃಷಭ – ಮಿಥುನ | ಆಣಿ – ಆಡಿ |
| ವರ್ಷ | ಶ್ರಾವಣ – ಭಾದ್ರಪದ | ಕಟಕ – ಸಿಂಹ | ಆವಣಿ – ಪುರಟ್ಟಾಶಿ |
| ಶರತ್ | ಆಶ್ವಯುಜ – ಕಾರ್ತೀಕ | ಕನ್ಯಾ – ತುಲಾ | ಐಪಸಿ – ಕಾರ್ತಿಗೈ |
| ಹೇಮಂತ | ಮಾರ್ಗಶಿರ – ಪುಷ್ಯಾ | ವೃಶ್ಚಿಕ – ಧನುಸ್ | ಮಾರ್ಗಳಿ – ತೈ |
| ಶಿಶಿರ | ಮಾಘ – ಫಾಲ್ಗುಣ | ಮಕರ – ಕುಂಭ | ಮಾಸಿ – ಪಂಗುಣಿ |

## ಚಾಂದ್ರಮಾನ ಸೌರಮಾನ ಮತ್ತು ಇಂಗ್ಲಿಷ್ ಮಾಸಗಳ ಸಾಮೀಪ್ಯ ಪದಕ:

| **ಚಾಂದ್ರಮಾನ** | **ಇಂಗ್ಲಿಷ್** | **ಸೌರಮಾನ** | **ಇಂಗ್ಲಿಷ್** |
|---|---|---|---|
| ಚೈತ್ರ | ಮಾರ್ಚ್–ಏಪ್ರಿಲ್ | ಮೇಷ | ಏಪ್ರಿಲ್–ಮೇ |
| ವೈಶಾಖ | ಏಪ್ರಿಲ್–ಮೇ | ವೃಷಭ | ಮೇ–ಜೂನ್ |
| ಜ್ಯೇಷ್ಠ | ಮೇ–ಜೂನ್ | ಮಿಥುನ | ಜೂನ್–ಜುಲೈ |
| ಆಷಾಢ | ಜೂನ್–ಜುಲೈ | ಕಟಕ | ಜುಲೈ–ಆಗಸ್ಟ್ |
| ಶ್ರಾವಣ | ಜುಲೈ–ಆಗಸ್ಟ್ | ಸಿಂಹ | ಆಗಸ್ಟ್–ಸೆಪ್ಟೆಂಬರ್ |
| ಭಾದ್ರಪದ | ಆಗಸ್ಟ್–ಸೆಪ್ಟೆಂಬರ್ | ಕನ್ಯಾ | ಸೆಪ್ಟೆಂಬರ್–ಅಕ್ಟೋಬರ್ |

| ಚಾಂದ್ರಮಾನ | ಇಂಗ್ಲಿಷ್ | ಸೌರಮಾನ | ಇಂಗ್ಲಿಷ್ |
|---|---|---|---|
| ಆಶ್ವಯುಜ | ಸೆಪ್ಟೆಂಬರ್–ಅಕ್ಟೋಬರ್ | ತುಲಾ | ಅಕ್ಟೋಬರ್–ನವೆಂಬರ್ |
| ಕಾರ್ತೀಕ | ಅಕ್ಟೋಬರ್–ನವೆಂಬರ್ | ವೃಶ್ಚಿಕ | ನವೆಂಬರ್–ಡಿಸೆಂಬರ್ |
| ಮಾರ್ಗಶಿರ | ನವೆಂಬರ್–ಡಿಸೆಂಬರ್ | ಧನುಸ್ | ಡಿಸೆಂಬರ್–ಜನವರಿ |
| ಪುಷ್ಯ | ಡಿಸೆಂಬರ್–ಜನವರಿ | ಮಕರ | ಜನವರಿ–ಫೆಬ್ರುವರಿ |
| ಮಾಘ | ಜನವರಿ–ಫೆಬ್ರುವರಿ | ಕುಂಭ | ಫೆಬ್ರುವರಿ–ಮಾರ್ಚ್ |
| ಫಾಲ್ಗುನ | ಫೆಬ್ರುವರಿ–ಮಾರ್ಚ್ | ಮೀನ | ಮಾರ್ಚ್–ಏಪ್ರಿಲ್ |

**ಹೋರ ಮತ್ತು ವಾರ**

ಒಂದು ದಿನ (ಸೂರ್ಯೋದಯದಿಂದ ಸೂರ್ಯೋದಯದವರೆಗೆ) ವನ್ನು 24 ಹೋರಗಳೆಂದು ಪರಿಗಣಿಸಿರುತ್ತದೆ. ಪ್ರತಿ ಹೋರಕ್ಕೂ ಅಭಿಮಾನಿ ಗ್ರಹವಿರುತ್ತದೆ. ಏಳು ಅಭಿಮಾನಿ ಗ್ರಹಗಳಿವೆ. ಅವುಗಳು 1. ರವಿ (ಭಾನು), 2. ಶುಕ್ರ, 3. ಬುಧ, 4. ಚಂದ್ರ (ಸೋಮ), 5. ಶನಿ, 6. ಗುರು ಮತ್ತು 7. ಕುಜ (ಮಂಗಳ). ಈ ಅಭಿಮಾನಿ ಗ್ರಹಗಳು ಇದೇ ಕ್ರಮದಲ್ಲಿ ಹೋರಗಳಲ್ಲಿರುತ್ತವೆ. ಸೂರ್ಯೋದಯದ ಸಮಯದಲ್ಲಿರುವ ಹೋರದ ಅಭಿಮಾನಿ ಗ್ರಹದ ಹೆಸರೇ ಅಂದಿನದ್ದು. ಆ ಹೆಸರಿಗೆ ವಾರ ಎಂದು ಕರೆಯುತ್ತಾರೆ. ಇವುಗಳು ಬದಲಾವಣೆಯಾಗುವುದಿಲ್ಲ.

**ಭಾನುವಾರದ ಹೋರಗಳು**

| | | | | | |
|---|---|---|---|---|---|
| 1 ರವಿ | 2 ಶುಕ್ರ | 3 ಬುಧ | 4 ಚಂದ್ರ | 5 ಶನಿ | 6 ಗುರು |
| 7 ಕುಜ | 8 ರವಿ | 9 ಶುಕ್ರ | 10 ಬುಧ | 11 ಚಂದ್ರ | 12 ಶನಿ |
| 13 ಗುರು | 14 ಕುಜ | 15 ರವಿ | 16 ಶುಕ್ರ | 17 ಬುಧ | 18 ಚಂದ್ರ |
| 19 ಶನಿ | 20 ಗುರು | 21 ಕುಜ | 22 ರವಿ | 23 ಶುಕ್ರ | 24 ಬುಧ |
| 25 ಚಂದ್ರ | | | | | |

ಮೇಲೆ ಕೊಟ್ಟಿರುವ ಭಾನುವಾರದ ಹೋರಗಳನ್ನು ಗಮನಿಸಿದಾಗ, 25ನೇ ಹೋರ ಚಂದ್ರನದ್ದಾಗಿದೆ. ಹಾಗಾಗಿ ಭಾನುವಾರದ ಮರುದಿನ ಸೋಮವಾರವಾಗಿದೆ. ಹೀಗೆಯೇ, ಪ್ರತಿ ದಿನದ ಮೊದಲ ಹೋರ ಕ್ರಮವಾಗಿ ರವಿ, ಚಂದ್ರ, ಮಂಗಳ, ಬುಧ, ಗುರು, ಶುಕ್ರ ಮತ್ತು ಶನಿ ಆಗಿರುತ್ತದೆ. ಏಳು ದಿನಗಳ ಸಮೂಹಕ್ಕೆ **ಸಪ್ತಕ, ಸಪ್ತಾಹ** ಎನ್ನುವರು. ರೂಢಿಯಲ್ಲಿ ವಾರ ಎನ್ನುವುದು ಬಳಕೆಯಲ್ಲಿದೆ.

ವಾರಗಳು ಮತ್ತು ಅವುಗಳ ಅಭಿಮಾನಿ ದೇವತೆಗಳನ್ನು ಕೆಳಗೆ ಕೊಟ್ಟಿದೆ.

| ವಾರಗಳು | | | ಮೊದಲ ಹೋರ | ಅಭಿಮಾನಿ ದೇವತೆ |
|---|---|---|---|---|
| ಕನ್ನಡ/ಸಂಸ್ಕೃತ | ತಮಿಳು | ಇಂಗ್ಲಿಷ್ | | |
| ರವಿ / ಆದಿತ್ಯ / ಭಾನು | ನ್ಯಾಯರು | ಸಂಡೆ | ರವಿ | ಹರ |
| ಇಂದು / ಸೋಮ | ತಿಂಗಳ್ | ಮಂಡೇ | ಚಂದ್ರ | ದುರ್ಗಾ |
| ಭೌಮ / ಮಂಗಳ | ಚೆವ್ವಾಯ್ | ಟ್ಯೂಸ್‌ಡೇ | ಮಂಗಳ | ಬೃಹಸ್ಪತಿ |
| ಸೌಮ್ಯ / ಬುಧ | ಬುಧನ್ | ವೆಡ್‌ನೆಸ್‌ಡೇ | ಬುಧ | ವಿಷ್ಣು |
| ಗುರು / ಬೃಹಸ್ಪತಿ / ಬೇಸ್ತು | ವ್ಯಾಳನ್ | ತರ್ಸ್‌ಡೇ | ಗುರು | ಬ್ರಹ್ಮಾ |
| ಶುಕ್ರ / ಭಾರ್ಗವ | ವೆಳ್ಳಿ | ಫ್ರೈಡೇ | ಶುಕ್ರ | ಲಕ್ಷ್ಮೀ |
| ಶನಿ / ಮಂದ / ಸ್ಥಿರ | ಶನಿ | ಸಾಟರ್‌ಡೇ | ಶನಿ | ಕುಬೇರ |

## ಅಯನಾಂಶ

ಅಯನಾಂಶ ಎನ್ನುವುದೇ ಒಂದು **ಬೃಹತ್ ವಿಷಯ.** ಅಯನಾಂಶ ಎನ್ನುವುದನ್ನು ಕೋಣಮಾಪನದಲ್ಲಿ ನಮೂದಿಸುತ್ತಾರೆ. ಇದರ ಮೌಲ್ಯವನ್ನು ಪಂಚಾಂಗ ಗುಣಿಸುವಾಗ ಕಂಡುಹಿಡಿಯಬಹುದು. ಇದು ಈಗ ಸುಮಾರು $22\ 1/2^0$ ಯಷ್ಟಿದೆ. ಇದು ವರ್ಷಕ್ಕೆ 54 ಸೆಕಂಡುಗಳಂತೆ ಹೆಚ್ಚಾಗುತ್ತಿದೆ.

ಭೂಮಿಯೊಳಗೆ ಉತ್ತರ ಧ್ರುವದಿಂದ ದಕ್ಷಿಣ ಧ್ರುವಕ್ಕೆ ಒಂದು ಊಹಾ ರೇಖೆ ಎಳೆದರೆ, ಅದು ಗ್ರಹಗಳ ಪಥಕ್ಕೆ (ಎಕ್ಲಿಪ್ಟಿಕ್ – ಝೋಡಿಯಾಕ್ ಪಟ್ಟಿಯ ಮಧ್ಯಕ್ಕೆ) ವಾಲಿರುತ್ತದೆ. ಭೂಮಿಯು ಈ ರೇಖೆಯ ಸುತ್ತಲೂ ತಿರುಗುತ್ತಿದೆ. ಹೀಗೆ ತಿರುಗುವಾಗ ಬುಗುರಿಯಂತೆ ಒಂದು ಪಕ್ಕದಿಂದ ಇನ್ನೊಂದಕ್ಕೆ ವಾಲುತ್ತಾ ಇರುತ್ತದೆ. ಈ ವಾಲಿಕೆಯ ಮೌಲ್ಯವನ್ನು (ಪ್ರೆಸಿಷನ್) ಅಯನಾಂಶ ಎನ್ನುತ್ತಾರೆ.

ಕೆಲವರು ಹೇಳುವ ಇನ್ನೊಂದು ವಿವರಣೆ: ಭೂಮಿಯಲ್ಲಿನ ಮೇಲೆ ಹೇಳಿದ ಊಹಾರೇಖೆಯ ಎಕ್ಲಿಪ್ಟಿಕ್ನೊಡನೆ ವಾಲುವಿಕೆಯೇ ಅಯನಾಂಶ.

## ನಿರಯಣ / ಸಾಯನ

ಗ್ರಹಗಳ ಸ್ಥಾನಗಳನ್ನು ಸೂಚಿಸಲು ನಿರಯಣ ಮತ್ತು ಸಾಯನ ಎಂಬ ಎರಡು ಪದ್ಧತಿಯನ್ನು ಉಪಯೋಗಿಸಲಾಗುತ್ತಿದೆ. ನಿರಯಣ ಎಂದರೆ ಅಯನಾಂಶವನ್ನು ಬಿಟ್ಟು ಎಂದು. ಸಾಯನ ಎಂದರೆ ಅಯನಾಂಶವನ್ನು ಸೇರಿಸಿ ಎಂದು. ಪಂಚಾಂಗಗಳಲ್ಲಿ ನಿರಯಣ ಪದ್ಧತಿಯಲ್ಲಿ ಕೊಟ್ಟಿರುತ್ತದೆ.

ದಿನಮಾನವನ್ನು ಕಂಡುಹಿಡಿಯಲು ಸೂರ್ಯನ ಸ್ಥಾನವನ್ನು ಸಾಯನ ಪದ್ಧತಿಯಲ್ಲಿ ಗುಣಿಸಿಕೊಳ್ಳಬೇಕು.

## ಮೇಷಾಯನ

ಮೇಷ ಸಂಕ್ರಮಣದ ಕಾಲವನ್ನು ಸಾಯನ ರೀತ್ಯಾ ಹೇಳಿದರೆ ಅದೇ ಮೇಷಾಯನ. ಹೀಗೆಯೇ ವೃಷಭಾಯನ, ಮಿಥುನಾಯನ, . . ಇತ್ಯಾದಿ. ಮೇಷಾಯನ, ವೃಷಭಾಯನ ಇತ್ಯಾದಿಗಳನ್ನೂ ಮಾಸಗಳ ಆದಿ ಎಂದೇ ಪರಿಗಣಿಸಲಾಗಿದೆ.

## ಸಂವತ್ಸರ

ಮೇಷ ಮಾಸದಿಂದ ಮೀನ ಮಾಸದವರೆಗಿನ 12 ಮಾಸಗಳ ಕಾಲಾವಧಿಗೆ ಸಂವತ್ಸರ ಎನ್ನುತ್ತಾರೆ. ಶುಕ್ಲ ಪ್ರಥಮದಿಂದ ಪ್ರಾರಂಭಿಸಿ ಕೃಷ್ಣ ಅಮಾವಾಸ್ಯೆಯವರೆಗಿನ 12 ಮಾಸಗಳ ಕಾಲಾವಧಿಗೆ ಅನುವತ್ಸರ ಎನ್ನುತ್ತಾರೆ. ಅಂದರೆ ಸೌರ ವರ್ಷಕ್ಕೆ ಸಂವತ್ಸರ ಎಂದೂ, ಚಾಂದ್ರಮಾನ ವರ್ಷಕ್ಕೆ ಅನುವತ್ಸರ ಎಂದೂ ಹೆಸರು. ಆದಾಗ್ಯೂ, ಸಂವತ್ಸರಗಳಿಗೆ ಮಾತ್ರ ಹೆಸರುಗಳಿರುವುದರಿಂದ, ಸಂವತ್ಸರ ಎನ್ನುವ ಪದವನ್ನು ವರ್ಷ ಎನ್ನುವುದಕ್ಕೋ ಎಂಬಂತೆ ಸೌರಮಾನ ಮತ್ತು ಚಾಂದ್ರಮಾನ ವರ್ಷಗಳಿಗೆ ಉಪಯೋಗಿಸುತ್ತಿದ್ದಾರೆ.

## ಅರವತ್ತು ಸಂವತ್ಸರಗಳ ಕಾಲಚಕ್ರ

ಅರವತ್ತು ಸಂವತ್ಸರಗಳನ್ನು ಒಂದು ಕಾಲಚಕ್ರ ಎಂದು ಪರಿಗಣಿಸಿ, ಸಂವತ್ಸರಗಳಿಗೆ 60 ಹೆಸರುಗಳಿವೆ. ಸಂವತ್ಸರಗಳು ಅದೇ ಕ್ರಮದಲ್ಲಿ ಬರುತ್ತವೆ.

ಸಂವತ್ಸರಗಳ ಚಕ್ರದಲ್ಲಿ ಮೊದಲನೆಯದು ಪ್ರಭವ. ಪ್ರಭವ ಒಂದು ಹೊಸ ಕ್ರಿಯಾಶೀಲ ಶಕ್ತಿಯನ್ನು ಸೂಚಿಸುತ್ತದೆ ಎನ್ನುತ್ತಾರೆ. ಎರಡನೆಯದು ವಿಭವ. ವಿಭವ ಆ ಕ್ರಿಯಾಶೀಲ ಶಕ್ತಿಯ ವೃದ್ಧಿಯನ್ನು ಸೂಚಿಸುತ್ತದೆ ಎನ್ನುತ್ತಾರೆ. ಅರವತ್ತನೆಯದು ಕ್ಷಯ. ಆ ಶಕ್ತಿಯ ಅಂತ್ಯವನ್ನು ಸೂಚಿಸುತ್ತದೆ ಎನ್ನುತ್ತಾರೆ. ಸಂವತ್ಸರಗಳ ಹೆಸರುಗಳನ್ನು ಕೆಳಗೆ ಕೊಟ್ಟಿದೆ.

| | | |
|---|---|---|
| 1. ಪ್ರಭವ | 21.ಸರ್ವಜಿತ್ | 41. ಪ್ಲವಂಗ |
| 2. ವಿಭವ | 22.ಸರ್ವಧಾರಿ | 42. ಕೀಲಕ |
| 3. ಶುಕ್ಲ | 23.ವಿರೋಧಿ | 43.ಸೌಮ್ಯ |
| 4. ಪ್ರಮೋದ | 24.ವಿಕೃತಿ | 44.ಸಾಧಾರಣ |
| 5. ಪ್ರಜೋತ್ಪತ್ತಿ (ಪ್ರಜಾಪತಿ) | 25. ಖರ | 45.ವಿರೋಧಿಕೃತ್ |
| | 26. ನಂದನ | 46.ಪರಿಧಾವಿ |
| 6. ಆಂಗೀರಸ | 27.ವಿಜಯ | 47.ಪ್ರಮಾದಿ (ಪ್ರಮಾದೀಚ) |
| 7. ಶ್ರೀಮುಖ | 28. ಜಯ | |
| 8. ಭಾವ | 29. ಮನ್ಮಥ | 48.ಆನಂದ |
| 9. ಯುವ | 30. ದುರ್ಮುಖಿ | 49.ರಾಕ್ಷಸ |
| 10.ಧಾತು | 31.ಹೇವಿಳಂಬಿ (ಹೇಮಲಂಬಿ) | 50. ನಳ |
| 11.ಈಶ್ವರ | | 51.ಪಿಂಗಳ (ಪೈಂಗಳ) |
| 12.ಬಹುಧಾನ್ಯ | 32.ವಿಳಂಬಿ | 52.ಕಾಳಯುಕ್ತಿ (ಕಾಳಯುಕ್ತ) |
| 13.ಪ್ರಮಾಥಿ | 33. ವಿಕಾರ | |
| 14.ವಿಕ್ರಮ | 34.ಶಾರ್ವರಿ | 53.ಸಿದ್ಧಾರ್ಥಿ |
| 15.ವಿಷು (ವೃಷ) | 35.ಪ್ಲವ | 54.ರೌದ್ರ (ರೌದ್ರಿ) |
| 16.ಚಿತ್ರಭಾನು | 36. ಶುಭಕೃತ್ | 55.ದುರ್ಮತಿ |
| 17.ಸುಭಾನು (ಸ್ವಭಾನು) | 37.ಶೋಭಕೃತ್ (ಶೋಭನ) | 56. ದುಂದುಭಿ |
| | | 57.ರುಧಿರೋದ್ಗಾರಿ |
| 18.ತಾರಣ | 38.ಕ್ರೋಧಿ | 58.ರಕ್ತಾಕ್ಷಿ |
| 19.ಪಾರ್ಥಿವ | 39.ವಿಶ್ವಾವಸು | 59. ಕ್ರೋಧನ |
| 20.ವ್ಯಯ | 40.ಪರಾಭವ | 60. ಕ್ಷಯ |

**ವರ್ಷಗಳಲ್ಲಿ ಐದು ವಿಧ**

**ಸೌರ ವರ್ಷ:** ಮೇಷ ರಾಶಿಯ ಆದಿಯಿಂದ, ಪುನಹ ಅಲ್ಲಿಗೇ ಬರಲು ಸೂರ್ಯನಿಗೆ 365 ದಿನಗಳು 15 ಘಟಿ ಮತ್ತು 31 ವಿಘಟಿಗಳಾಗುತ್ತವೆ. ಈ ಸಮಯಕ್ಕೆ ಸೌರ ವರ್ಷ ಎನ್ನುತ್ತಾರೆ.

**ಚಾಂದ್ರ ವರ್ಷ:** 12 ಚಾಂದ್ರಮಾನ ಮಾಸಗಳಿಗೆ ಒಂದು ಚಾಂದ್ರ ವರ್ಷವೆಂದು ಹೆಸರು. ಇದು ಸಾಮಾನ್ಯವಾಗಿ 354/355 ದಿನಗಳದ್ದಾಗಿರುತ್ತದೆ. ಹೀಗಾಗಿ, ಸೌರ ವರ್ಷಕ್ಕಿಂತ (ಇಂಗ್ಲಿಷ್ ವರ್ಷಕ್ಕಿಂತ) ವರ್ಷದ ಪ್ರಾರಂಭದ ದಿನವು 11 ದಿನಗಳು ಹಿಂದಕ್ಕೆ ಹೋಗುತ್ತದೆ.

ಅಧಿಕ ಮಾಸಗಳಿರುವ ವರ್ಷಗಳಲ್ಲಿ ಈ ಕಾಲಾವಧಿ 384/385 ದಿನಗಳದ್ದಾಗಿರುತ್ತದೆ. ಈ ವರ್ಷಗಳಲ್ಲಿ ಸೌರ ವರ್ಷಕ್ಕಿಂತ ವರ್ಷದ ಪ್ರಾರಂಭದ ದಿನವು 20 ದಿನಗಳು ಮುಂದಕ್ಕೆ ಹೋಗುತ್ತದೆ.

**ಸಾವನ ವರ್ಷ:** ಸೂರ್ಯೋದಯದಿಂದ ಮರುದಿನದ ಸೂರ್ಯೋದಯದವರೆಗಿನ ಕಾಲಾವಧಿಗೆ ಸಾವನ ದಿನ ಎನ್ನುತ್ತಾರೆ. 360 ಸಾವನ ದಿನಗಳಿಗೆ ಒಂದು ಸಾವನ ವರ್ಷ.

**ನಕ್ಷತ್ರ ವರ್ಷ:** ಚಂದ್ರನು ಅಶ್ವಿನೀ ನಕ್ಷತ್ರದಿಂದ ಅಶ್ವಿನೀ ನಕ್ಷತ್ರದವರೆಗೆ ಬರುವ ಒಂದು ಕಾಲಚಕ್ರಕ್ಕೆ ನಕ್ಷತ್ರ ಮಾಸ ಎನ್ನುತ್ತಾರೆ. 12 ನಕ್ಷತ್ರ ಮಾಸಗಳಿಗೆ ಒಂದು ನಕ್ಷತ್ರ ವರ್ಷ. ಇದು ಸಾಮಾನ್ಯವಾಗಿ 354/355 ದಿನಗಳದ್ದಾಗಿರುತ್ತದೆ.

**ಬಾರ್ಹಸ್ಪತ್ಯ ವರ್ಷ:** ಗುರು ಗ್ರಹದ ಒಂದು ರಾಶಿಯಲ್ಲಿನ ವಾಸದ ಸರಾಸರಿ ಕಾಲವಧಿಗೆ ಬಾರ್ಹಸ್ಪತ್ಯ ವರ್ಷ ಎನ್ನುತ್ತಾರೆ. ಇದು 361.04875 ದಿನಗಳದ್ದಾಗಿರುತ್ತದೆ. ಒಂದು ರಾಶಿಯಲ್ಲಿನ ಗುರುವಿನ ವಾಸ್ತವ್ಯವನ್ನೇ ವರ್ಷ ಎಂದು ಗ್ರಹಿಸಿದರೆ, ವರ್ಷ ವರ್ಷಕ್ಕೂ ಬಹಳ ವ್ಯತಾಸ ಕಂಡುಬರುತ್ತದೆ. (ಇದರಿಂದಲೇ ಕೆಲವರು ಈ ವರ್ಷಾವಧಿಯನ್ನು 13 ತಿಂಗಳು ಎನ್ನುತ್ತಾರೆ.)

**ಶಕ:** ಯಾವುದಾದರು ಒಂದು ಮಹತ್ತರ ಘಟನೆಯಿಂದಲೋ, ಒಬ್ಬ ಮನೀಯರ ಹೆಸರಿನಲ್ಲಿಯೋ ಲೆಖ್ಖಮಾಡುತ್ತಿರುವ ವರ್ಷಗಳ ಸಾಲಿಗೆ ಶಕ ಎನ್ನುತ್ತಾರೆ. ನಾವು ಹೆಚ್ಚಾಗಿ ಬಳಸುತ್ತಿರುವುದು **ಶಾಲೀವಾಹನ ಶಕ**. ಇದು ಇಂಗ್ಲಿಷ್ ಶಕೆ (ಎ.ಡಿ) ಇಂದ 78 ಕಳೆದರೆ ಸಿಗುವ ಸಂಖ್ಯೆಯದ್ದಾಗಿದೆ.

**ಗ್ರಹಣಗಳು**

ಪ್ರತಿ ವರ್ಷ ಕನಿಷ್ಟಪಕ್ಷ ಎರಡು ಗ್ರಹಣಗಳು, ಅಧಿಕ ಪಕ್ಷದಲ್ಲಿ ಏಳು ಗ್ರಹಣಗಳು ಸಂಭವಿಸುತ್ತವೆ. ಎಲ್ಲಾ ಗ್ರಹಣಗಳು ಎಲ್ಲಾ ದೇಶಗಳಲ್ಲಿಯೂ ಕಾಣಿಸುವುದಿಲ್ಲ.

ಚಂದ್ರನು ಭೂಮಿಗೂ ಸೂರ್ಯನಿಗೂ ನಡುವೆ ಬರುವ ಸಂದರ್ಭದಲ್ಲಿ ಸೂರ್ಯ ಗ್ರಹಣದ ಸಂಭವವಿದೆ. ಅಂದು ಅಮಾವಾಸ್ಯೆಯಾಗಿರುತ್ತದೆ ಮತ್ತು ಸೂರ್ಯ/ಚಂದ್ರರ ಕೋಣಮಾಪನದಲ್ಲಿ ರಾಹು/ಕೇತುವೂ ಇರುತ್ತಾರೆ. ಭೂಮಿಯು ಸೂರ್ಯ ಚಂದ್ರರ ನಡುವೆ ಬರುವ ಸಂದರ್ಭದಲ್ಲಿ ಚಂದ್ರ ಗ್ರಹಣವೂ ಆಗುವ ಸಂಭವವಿದೆ. ಅಂದು ಪೌರ್ಣಮೀಯಾಗಿರುತ್ತದೆ ಮತ್ತು ಚಂದ್ರನ ಕೋಣಮಾಪನದಲ್ಲಿ ರಾಹು/ಕೇತು ಇರುತ್ತಾರೆ.

ಗ್ರಹಣ ಸಮಯದಲ್ಲಿ ಸೂರ್ಯ, ಚಂದ್ರ ಮತ್ತು ರಾಹು/ಕೇತುಗಳ ಪಾತಗಳು ಒಂದೇ ಆಗಿರುತ್ತದೆ.

ಗ್ರಹಣಗಳಲ್ಲಿ ಮೂರು ವಿಧ.

**ಪೂರ್ಣ ಗ್ರಹಣ:** ಗ್ರಹಣದ ಸ್ಪರ್ಶವೂ, ಮೋಕ್ಷವೂ ಕಾಣಿಸುತ್ತದೆ.

**ಗ್ರಸ್ತೋದಯ ಗ್ರಹಣ:** ಗ್ರಹಣದ ಸ್ಪರ್ಶವು ಕಾಣಿಸುವುದಿಲ್ಲ, ಮೋಕ್ಷವು ಮಾತ್ರ ಕಾಣಿಸುತ್ತದೆ.

**ಗ್ರಸ್ತಾಸ್ತ ಗ್ರಹಣ:** ಗ್ರಹಣದ ಸ್ಪರ್ಶವು ಕಾಣಿಸುತ್ತದೆ, ಮೋಕ್ಷವು ಕಾಣಿಸುವುದಿಲ್ಲ.

**ಚೂಡಾಮಣಿ ಗ್ರಹಣ:** ಭಾನುವಾರದಲ್ಲಿನ ಸೂರ್ಯ ಗ್ರಹಣವನ್ನೂ, ಸೋಮವಾರದಲ್ಲಿನ ಚಂದ್ರಗ್ರಹಣವನ್ನೂ ಚೂಡಾಮಣಿ ಗ್ರಹಣ ಎನ್ನುತ್ತಾರೆ.

**ಮಹಾಪಾತಗಳು**

ಮಹಾಪಾತಗಳು ಪರ್ವ ಕಾಲಗಳೇ ಆಗಿವೆ. ಇವುಗಳನ್ನು ಕ್ಲಿಷ್ಟವಾದ ಲೆಖ್ಖಾಚಾರದ ಮೂಲಕ ನಿರ್ಣಯಿಸುತ್ತಾರೆ. ಸೂರ್ಯ, ಚಂದ್ರ ಮತ್ತು ರಾಹುವಿನ ಚಲನೆಗಳು ಈ ಲೆಖ್ಖಾಚಾರಗಳಿಗೆ ಬೇಕಾದವು.

ಮಹಾಪಾತಗಳು ಎರಡು ವಿಧ. 1. ವ್ಯತೀಪಾತ ಪರ್ವಕಾಲ ಮತ್ತು 2. ವೈಧೃತಿ ಪರ್ವಕಾಲ.

**ವ್ಯತೀಪಾತ ಪರ್ವಕಾಲ**ವು ಗಂಡ ಮತ್ತು ವೃದ್ಧಿ ಯೋಗಗಳ ಎರಡನೇ ಅರ್ಧಭಾಗದಲ್ಲಿಯೂ, ಮತ್ತು ಧ್ರುವ ಯೋಗದ ಮೊದಲನೇ ಅರ್ಧ ಭಾಗದಲ್ಲಿಯೂ ಸಂಭವಿಸಬಹುದು.

**ವೈಧೃತಿ ಪರ್ವಕಾಲ**ವು ಶುಕ್ಲ ಮತ್ತು ಬ್ರಹ್ಮ ಯೋಗಗಳಲ್ಲಿ ಸಂಭವಿಸಬಹುದು.

ಈ ಪರ್ವಕಾಲಗಳು ಮಿಥುನಾಯನ, ಕರ್ಕಾಯನ, ಧನುರಾಯನ ಮತ್ತು ಮಕರಾಯನ ಮಾಸಗಳಲ್ಲಿ ಸಂಭವಿಸುವುದಿಲ್ಲ.

ಮಹಾಪಾತ ಪರ್ವಕಾಲವನ್ನು ಅನುಷ್ಠಾನ ಮಾಡಿದರೆ ಒಂದು ಕೋಟಿ ಸೂರ್ಯಗ್ರಹಣಗಳನ್ನು ಅನುಷ್ಠಾನ ಮಾಡಿದಷ್ಟು ಫಲ ಎನ್ನುತ್ತಾರೆ. ಮಹಾಪಾತ ಕಾಲಗಳೂ, ಶುಭಕಾರ್ಯಗಳಿಗೆ ವರ್ಜ್ಯ.

## ಗ್ರಹಗಳ ವಕ್ರ ಚಲನೆ

ಗ್ರಹಗಳ ಚಲನೆಯ ಕಾಲದಲ್ಲಿ ಕೆಲವೊಮ್ಮೆ **ಮಂದೋಚ್ಚ, ಶೀಘ್ರೋಚ್ಚ** ಮತ್ತು **ಪಾತ**ಗಳ ಪ್ರಭಾವದಿಂದ ಭೂಮಿಯಿಂದ ನೋಡಿದಾಗ ಹಿಂದಕ್ಕೆ ಚಲಿಸುತ್ತಿರುವಂತೆ (ವಕ್ರ ಚಲನೆ) ತೋರುತ್ತದೆ. ಈ ವಕ್ರಚಲನೆಯು ಅಪ್ರದಕ್ಷಿಣಾಕಾರದ್ದಾಗಿರುತ್ತದೆ. ಇಂತಹ ವಕ್ರ ಚಲನೆಯಲ್ಲಿರುವ ಗ್ರಹಗಳ ಸ್ಥಾನವನ್ನು ನಮೂದಿಸುವಾಗ **ವ** ಅಥವಾ **ವಕ್ರ** ಎಂದು ಸೂಚಿಸಿರುತ್ತಾರೆ.

ಪಂಚಾಂಗಗಳಲ್ಲಿ, ವಕ್ರಚಲನೆಯ ಪ್ರಾರಂಭವನ್ನು **ವಕ್ರಾರಂಭ** ಎನ್ನುತ್ತಲೂ, ವಕ್ರ ಚಲನೆ ನಿಂತು ಸಾಧಾರಣ ಚಲನೆ ಪ್ರಾರಂಭಿಸಿದ ಸಮಯವನ್ನು **ವಕ್ರತ್ಯಾಗ** ಎನ್ನುತ್ತಲೂ, ವಕ್ರ ಪ್ರಾರಂಭವಾದ ಸ್ಥಳಕ್ಕೆ ಸಾಧಾರಣ ಚಲನೆಯಲ್ಲಿ ಬರುವ ಸಮಯಕ್ಕೆ **ವಕ್ರರಿಜ್ವಿ** ಎನ್ನುತ್ತಲೂ ನಮೂದಿಸಿರುತ್ತಾರೆ. ಸೂರ್ಯ ಚಂದ್ರರಿಗೆ ವಕ್ರಚಲನೆ ಇಲ್ಲ.

## ಗ್ರಹಗಳ ಅಸ್ತ ಮತ್ತು ಉದಯಗಳು

ಗ್ರಹಗಳ ಚಲನೆಯ ಸಮಯದಲ್ಲಿ, ಕೆಲವೊಮ್ಮೆ ಅವುಗಳು ಸೂರ್ಯನ ಹಿಂದೆ ಅಥವಾ ಅತಿ ಸಮೀಪಕ್ಕೆ (ಕೋನಮಾಪನದಲ್ಲಿ) ಹೋಗುತ್ತವೆ. ಆ ಗ್ರಹವು ಅಸ್ತವಾಗಿದೆ ಎನ್ನುತ್ತಾರೆ. ಗ್ರಹವು ಸೂರ್ಯನ ಸಾಮೀಪ್ಯದಿಂದ (ಹಿಂದಿನಿಂದಲೂ) ದೂರಬಂದಾಗ (ಅಸ್ತದಿಂದ ಹೊರಬಂದಗ) ಉದಯವಾಗಿದೆ ಎನ್ನುತ್ತರೆ. ಜ್ಯೋತಿಷ್ಯ ಶಾಸ್ತ್ರದ ಪ್ರಕಾರ ಅಸ್ತವಾದ ಗ್ರಹವು ಶಕ್ತಿಹೀನವಾಗಿರುತ್ತದೆ ಮತ್ತು ಅದರ ಶಕ್ತಿಯೆಲ್ಲಾ ಸೂರ್ಯನಲ್ಲಿ ಕೇಂದ್ರೀಕೃತವಾಗಿರುತ್ತದೆ. ಅಸ್ತ ಉದಯಗಳು ಗುರು, ಶುಕ್ರ, ಬುಧ, ಕುಜ ಮತ್ತು ಶನಿ ಗ್ರಹಗಳಿಗೆ ಅನ್ವಯಿಸುತ್ತವೆ. ಈ ಗ್ರಹಗಳ ಅಸ್ತದ ಕೋನಮಾಪನವು ಸೂರ್ಯನಿಂದ: ಗುರು 9°, ಶುಕ್ರ 6°36', ಬುಧ 11°, ಕುಜ 15° ಮತ್ತು ಶನಿ 13° ಆಗಿರುತ್ತದೆ.

ಅಸ್ತ ಉದಯಗಳು ವಕ್ರ ಚಲನೆಯ ಸಂದರ್ಭದಲ್ಲೂ ಸಂಭವಿಸಬಹುದು. ಇದನ್ನೂ ಸೇರಿಸಿ ಸೂಚಿಸಲು, ಉದಯದ ಜೊತೆಯಲ್ಲಿ ಪೂರ್ವ ಎಂದರೆ ಸಾಧಾರಣ ಚಲನೆಯಲ್ಲಿ ಎಂದೂ, ಪಶ್ಚಿಮ ಎಂದರೆ ವಕ್ರ ಚಲನೆಯಲ್ಲಿ ಎಂದೂ ಸೂಚಿಸುತ್ತಾರೆ.

## ಲಗ್ನ

ಒಂದು ನಿಗದಿತ ಸಮಯದ ಪೂರ್ವ ದಿಗಂತದಲ್ಲಿನ ರಾಶಿಯ ಚಿಹ್ನೆಯೇ ಲಗ್ನ. ಭೂಮಿಯು ಒಂದು ದಿನದಲ್ಲಿ ಒಂದು ಸುತ್ತು ಸುತ್ತುತ್ತದೆ – ಅದರಿಂದಲೇ ಹಗಲು ರಾತ್ರಿಗಳಾಗುವುದು. ಅದು, ಸೂರ್ಯನು ಒಂದು ಸುತ್ತು ಬಂದನೋ ಎನ್ನುವಂತೆ ತೋರುತ್ತದೆ. ಹೀಗೆ ಸುತ್ತುವ ಭೂಮಿಯು 12 ರಾಶಿಗಳನ್ನೂ ಒಂದು ದಿನದಲ್ಲಿ ಚಲಿಸಿತು ಎಂದು ಹೇಳಬಹುದು. ಹೀಗೆ ಸುತ್ತುವಾಗ, ಒಂದೊಂದು ರಾಶಿಯಲ್ಲೂ ಕಳೆಯುವ ಸಮಯವನ್ನು ಲಗ್ನದ ಕಾಲಾವಧಿ ಎನ್ನುತ್ತಾರೆ. ಈ ಕಾಲಾವಧಿಯು ಭೂಮಧ್ಯರೇಖೆಯಲ್ಲಿನ (ಈಕ್ವೇಟರ್) ಸ್ಥಳಗಳಲ್ಲಿ ಒಂದು ದಿನಕ್ಕೆ ಹನ್ನೆರಡು ಲಗ್ನಗಳಿರುವುದರಿಂದ ಪ್ರತಿ ಲಗ್ನವೂ ಎರಡು ಘಂಟೆಯದ್ದು (5 ಘಟಿ) ಆಗಿರುತ್ತದೆ. ದಕ್ಷಿಣ / ಉತ್ತರ ಧೃವದ ಸ್ಥಳಗಳಲ್ಲಿ ಒಂದು ದಿನಕ್ಕೆ ಎರಡೇ ಲಗ್ನಗಳಿರುವುದರಿಂದ ಪ್ರತಿ ಲಗ್ನವೂ ಹನ್ನೆರಡು ಘಂಟೆಯದ್ದು (30 ಘಟಿ) ಆಗಿರುತ್ತದೆ. ಬೇರೆ ಸ್ಥಳಗಳಿಗೆ, ಸ್ಥಳದ ಅಕ್ಷಾಂಶದ ಪ್ರಕಾರ ಗುಣಿಸಿಕೊಳ್ಳಬೇಕು.

ದಿನದ ಮೊದಲನೆಯ ಲಗ್ನ ಮತ್ತು ಲಗ್ನದ ಕಾಲಾವಧಿಯನ್ನು ಆ ದಿನದ ಸೂರ್ಯೋದಯದಿಂದ ಲೆಖ್ಖ ಹಾಕಲಾಗುವುದು.

ಪ್ರತಿ ಸೌರ ಮಾಸದಲ್ಲಿಯೂ, ದಿನದ ಮೊದಲ ಲಗ್ನವು ಆ ಮಾಸದ ಹೆಸರಿನ ರಾಶಿಯದ್ದೇ ಆಗಿರುತ್ತದೆ. ಹಾಗಾಗಿ, ಮೇಷ ಮಾಸದಲ್ಲಿ ದಿನದ ಮೊದಲ ಲಗ್ನವು ಮೇಷ, ವೃಷಭ ಮಾಸದಲ್ಲಿ ವೃಷಭ, . ಇತ್ಯಾದಿ. ದಿನದ ಎರಡನೆಯ ಮತ್ತು ನಂತರದ ಲಗ್ನಗಳು ರಾಶಿಗಳ ಕ್ರಮವನ್ನೇ ಅವಲಂಬಿಸುತ್ತವೆ.

ಸೂರ್ಯನು ಒಂದು ರಾಶಿಯಿಂದ ಮುಂದಿನ ರಾಶಿಗೆ ಚಲಿಸುತ್ತಿರುವುದರಿಂದ, ದಿನದ ಮೊದಲ ಲಗ್ನದ ಕಾಲಾವಧಿಯು ಸೌರ ಮಾಸದ ಮೊದಲ ದಿನದಂದು ಪೂರ್ಣವಾಗಿದ್ದು, ಸೌರ ಮಾಸದ ಎರಡನೆಯ ದಿನ 1/30 ರಷ್ಟು ಕಡಮೆಯಾಗುತ್ತದೆ, 16ನೆಯ ದಿನ 15/30 ರಷ್ಟು ಕಡಮೆಯಾಗುತ್ತದೆ, ಸೌರ ಮಾಸದ ಕೊನೆಯ ದಿನದಂದಿಗೆ 1/30 ಕ್ಕೆ ಕಡಮೆಯಾಗುತ್ತದೆ. ದಿನದ ಎರಡನೆಯ ಮತ್ತು ನಂತರದ ಲಗ್ನಗಳ ಕಾಲಾವಧಿಯು ಪೂರ್ಣವಾಗಿಯೇ ಇರುತ್ತವೆ.

**ಲಗ್ನದ ಕಾಲಾವಧಿಯನ್ನು ವಿವರಿಸುವ ಉದಾಹರಣೆ:**

ಭೂಮಧ್ಯ ರೇಖೆಯ ಸ್ಥಳಗಳಲ್ಲಿ ಲಗ್ನದ ಪ್ರಮಾಣವು 2 ಘಂಟೆಯದ್ದು ಅಂದರೆ 120 ನಿಮಿಷಗಳದ್ದು. ಒಂದು ಸೌರ ಮಾಸವು ಸರಾಸರಿಯಲ್ಲಿ 30 ದಿನಗಳದ್ದು.

ಆದ್ದರಿಂದ, ಒಂದು ದಿನಕ್ಕೆ ಲಗ್ನ ಪ್ರಮಾಣವು 4 ನಿಮಿಷ ಕಡಿಮೆಯಾಗುತ್ತದೆ. ಮೊದಲ ದಿನ 120 ನಿಮಿಷಗಳು, 2 ನೆಯ ದಿನ 116 ನಿಮಿಷಗಳು, 3 ನೆಯ ದಿನ 112 ನಿಮಿಷಗಳು, ... ಕೊನೆಯ ದಿನ 4 ನಿಮಿಷಗಳು.

ಅದೇ ಸ್ಥಳದಲ್ಲಿ ಸೌರ ಮಾಸದ ಎಲ್ಲಾ ದಿನಗಳಲ್ಲಿಯೂ, 2ನೆಯ, 3ನೆಯ, . . 12ನೆಯ ಲಗ್ನಗಳು 120 ನಿಮಿಷಗಳದ್ದಾಗಿರುತ್ತವೆ.

ಸೌರ ಮಾಸದ ಎರಡನೆಯ ದಿನದಿಂದ, ದಿನದ ಕೊನೆಯ ಲಗ್ನವು (ಮುಂದಿನ ಸೂರ್ಯೋದಯದ ಮುಂಚಿನ ಸಮಯ) ಮೊಡಲ ಲಗ್ನದ್ದೇ ಆಗಿರುತ್ತದೆ. ಅದರ

ಕಾಲಾವಧಿಯು ಮೊದಲ ಲಗ್ನದ ಕಾಲಾವಧಿಯ ಶೇಷವಾಗಿರುತ್ತದೆ. ಹಾಗಾಗಿ, 2 ನೆಯ ದಿನ 4 ನಿಮಿಷಗಳು, 3 ನೆಯ ದಿನ 8 ನಿಮಿಷಗಳು, ... ಕೊನೆಯ ದಿನ 116 ನಿಮಿಷಗಳು.

**ಮುಹೂರ್ತಗಳು – ಲಗ್ನ**

ಮುಹೂರ್ತಗಳು ಶುಭಕಾರ್ಯಗಳಿಗೆ ನಿಷ್ಕರ್ಶಿಸಿದ ವೇಳೆಗಳು. ಅವುಗಳನ್ನು ಲಗ್ನಗಳೆಂದು ಹೇಳುವುದು ಪದ್ಧತಿ. ಲಗ್ನಗಳ ಹೆಸರನ್ನೂ ಸೂಚಿಸುತ್ತಾರೆ. ಅಲ್ಲದೆ, ಲಗ್ನದ ಸಮಯವನ್ನೂ ಸೂಚಿಸುತ್ತಾರೆ. ಈ ಲಗ್ನದ ಸಮಯವು ಹಿಂದೆ ಕೊಟ್ಟಿರುವ ಲಗ್ನ ಪ್ರಮಾಣಕ್ಕಿಂತ ಕಡಿಮೆ ಇರುವ ಸಾಧ್ಯತೆ ಉಂಟು. ಇದಕ್ಕೆ ನಕ್ಷತ್ರ ತ್ಯಾಜ್ಯ ಮತ್ತು ಲಗ್ನ ತ್ಯಾಜ್ಯಗಳೂ ಅಲ್ಲದೆ ಇತರೆ ಕಾರಣಗಳೂ ಇರಬಹುದು.

**ಲಗ್ನ ತ್ಯಾಜ್ಯ:** ಲಗ್ನ ಪ್ರಮಾಣದಲ್ಲಿ ಮೂರನೇ ಒಂದು ಭಾಗ ತ್ಯಾಜ್ಯ ಕಾಲವು. ಅದು ಮೇಷ, ವೃಷಭ, ಕನ್ಯಾ ಮತ್ತು ಧನುಸ್ ಲಗ್ನಗಳಲ್ಲಿ ಮೊದಲನೇ ಭಾಗವೂ, ಮಿಥುನ, ಸಿಂಹ, ತುಲಾ ಮತ್ತು ಕುಂಭ ಲಗ್ನಗಳಲ್ಲಿ ಎರಡನೇ ಭಾಗವೂ, ಕರ್ಕಾಟಕ, ವೃಶ್ಚಿಕ, ಮಕರ ಮತ್ತು ಮೀನ ಲಗ್ನಗಳಲ್ಲಿ ಮೂರನೇ ಭಾಗವೂ ಆಗಿರುತ್ತದೆ.

**ಪುಷ್ಕರಾಂಶ:** ಕೆಲವೊಮ್ಮೆ, ಒಂದು ನಿಮಿಷದ ಲಗ್ನವಿಡುವುದೂ ಉಂಟು. ಅದು ಉತ್ತರ ಭಾರತದಲ್ಲಿ ಹೆಚ್ಚು ಪ್ರಚಲಿತವಾಗಿದೆ. ಲಗ್ನದಲ್ಲಿನ ಅತಿ ಶ್ರೇಷ್ಠ ನಿಮಿಷಕ್ಕೆ ಪುಷ್ಕರಾಂಶ ಎನ್ನುತ್ತಾರೆ.

**ಮಾಸ ತ್ಯಾಜ್ಯ:** ಪ್ರತಿ ಸೌರ ಮಾಸದಲ್ಲೂ ಕೆಲವು ನಿರ್ದಿಷ್ಟ ದಿನಾಂಕಗಳು ಶುಭಕಾರ್ಯಗಳಿಗೆ ವರ್ಜ್ಯ.

| ರಾಶಿ | ಮಾಸ ತ್ಯಾಜ್ಯ ದಿನಾಂಕಗಳು | ಪುಷ್ಕರಾಂಶ ಘಟಿ–ವಿಘಟಿ | ರಾಶಿ | ಮಾಸ ತ್ಯಾಜ್ಯ ದಿನಾಂಕಗಳು | ಪುಷ್ಕರಾಂಶ ಘಟಿ–ವಿಘಟಿ |
|---|---|---|---|---|---|
| ಮೇಷ | 6,15 | 3-01 | ತುಲಾ | 6,20 | 3-59 |
| ವೃಷಭ | 7,16,17 | 2-13 | ವೃಶ್ಚಿಕ | 1,10,17 | 1-06 |
| ಮಿಥುನ | 1,6 | 4-12 | ಧನುಸ್ | 6,9,11 | 3-35 |
| ಕರ್ಕಾಟಕ | 2,10,20 | 1-05 | ಮಕರ | 1,2,3,11,17 | 2-06 |
| ಸಿಂಹ | 2,16,18 | 3-23 | ಕುಂಭ | 15,16,17 | 3-01 |
| ಕನ್ಯಾ | 16,29 | 2-10 | ಮೀನ | 6,15,19 | 0-19 |

**ಬೇರೆಬೇರೆ ಸ್ಥಳಗಳಿಂದಾಗಿ ವ್ಯತಾಸ**

ಸಂಕ್ರಮಣಗಳು ಸಂಭವಿಸುವ ಸಮಯ, ತಿಥಿ / ನಕ್ಷತ್ರ / ಯೋಗ / ಕರಣಗಳ ಆದಿ ಮತ್ತು ಅಂತ್ಯಗಳು ಸಂಭವಿಸುವ ಸಮಯ ಭೂಮಿಯ ಎಲ್ಲಾ ಸ್ಥಳಗಳಿಗೂ ಒಂದೇ. ಆದರೆ ಬೇರೆಬೇರೆ ಸ್ಥಳಗಳ ಅಕ್ಷಾಂಶ/ರೇಖಾಂಶಗಳು ಬೇರೆಬೇರೆಯವಾದ್ದರಿಂದ ಸೂರ್ಯೋದಯವು ಬೇರೆಬೇರೆಯವಾಗಿರುತ್ತವೆ. ಹಾಗಾಗಿ, ವಾರವೂ, ದಿನಮಾನವೂ, ದಿನಾಂಕವೂ ಬೇರೆಬೇರೆಯವಾಗಿರಬಹುದು. ಪಂಚಾಂಗದಲ್ಲಿ ಎಲ್ಲಾ ಸಮಯಗಳನ್ನೂ ಸೂರ್ಯೋದಯದಿಂದ ಘಟಿ–ವಿಘಟಿಗಳಲ್ಲಿ ಕೊಟ್ಟಿರುತ್ತಾರೆ. ಹಾಗಾಗಿ ಅವು ಪಂಚಾಂಗ ಗುಣಿಸಿರುವ ಸ್ಥಳಕ್ಕೆ ಕರಾರುವಾಕ್ಕಾಗಿದ್ದು, ಬೇರೆಬೇರೆ ಸ್ಥಳಗಳಿಗೆ ಸರಿಹೊಂದದೇ ಇರಬಹುದು.

ಪಂಚಾಂಗದಲ್ಲಿ ಸಮಯವನ್ನು ಭಾರತೀಯ ಸ್ಟಾಂಡರ್ಡ್ ಟೈಂ ನಲ್ಲಿ ಕೊಟ್ಟಿದ್ದರೆ, ಆ ಸಮಯವು ಎಲ್ಲಾ ಸ್ಥಳಗಳಿಗೂ ಅನ್ವಯಿಸುತ್ತದೆ. ಆದಾಗ್ಯೂ, ಸೂರ್ಯೋದಯದ ವ್ಯತ್ಯಾಸವನ್ನು ಪರಿಗಣಿಸಬೇಕು. ಹಾಗಾಗಿ ವ್ರತಾಚರಣೆಗಳಲ್ಲಿ ವ್ಯತಾಸ ಬರಬಹುದು.

**ಸೌರ ವರ್ಷ ಜೂಲಿಯನ್ ವರ್ಷಕ್ಕೆ ಸಮ**

ಸೌರ ವರ್ಷವೂ, ಜೂಲಿಯನ್ ವರ್ಷವೂ 365 1/4 ದಿನಗಳ ಪ್ರಮಾಣದ್ದು.

ಯಾವುದೇ ಸಂಕ್ರಮಣವು ಒಂದು ವರ್ಷದ ನಂತರ ಸಂಭವಿಸಿದಾಗ ಹಿಂದೆ ಸಂಭವಿಸಿದ ಸಮಯಕ್ಕಿಂತಲು 15-35 ಘಟಿ–ವಿಘಟಿ (6-14 ಘಂಟೆ–ನಿಮಿಷ) ನಂತರ ಮತ್ತು ವಾರದ ಗಣನೆಯಲ್ಲಿ ಒಂದು ದಿನ ನಂತರ ಸಂಭವಿಸುತ್ತದೆ. ಉದಾಹರಣೆ: ಮೇಷ ಸಂಕ್ರಮಣ ವರ್ಷ 1 ರಲ್ಲಿ ಭಾನುವಾರ 10-25 ಘಟಿ (10-10 ಘಂಟೆ). ವರ್ಷ 2 ರಲ್ಲಿ ಸೋಮವಾರ 26-00 ಘಟಿ (16-24 ಘಂಟೆ)ಗೆ ಸಂಭವಿಸುತ್ತದೆ.

**ಬೇರೆಬೇರೆ ವಿಧದ ಮಾಸ ಗಣನೆ**

ಒಂದೇ ಪಂಚಾಗದಲ್ಲಿ ಹಲವು ವಿಧದ ಮಾಸಗಣನೆಯನ್ನು ಕಾಣಬಹುದು. 1. ಅಮಾಂತ ಮಾಸಗಳು – ಅತಿ ಸಾಮಾನ್ಯ ಬಳಕೆಯವು, 2. ಪೌರ್ಣಿಮಾಂತ ಮಾಸಗಳು – ವೈಶಾಖ / ಕಾರ್ತೀಕ / ಮಾಘ ಸ್ನಾನಗಳಿಗೆ, 3. ಸೌರ ಮಾಸಗಳು –ತುಲಾ ಸ್ನಾನ ಮತ್ತು ಧನುರ್ಮಾಸ ಪೂಜೆಗಳಿಗಾಗಿ, 4. ಶುಕ್ಲ ಏಕಾದಶೀಯಿಂದ ಶುಕ್ಲ ಏಕಾದಶೀಯವರೆಗಿನ ಮಾಸಗಳು – ಚಾತುರ್ಮಾಸ ವ್ರತಕ್ಕಾಗಿ.

**ಹಬ್ಬಗಳು / ವ್ರತಗಳು**

ಪಂಚಾಂಗಗಳಲ್ಲಿ, ಹಬ್ಬಗಳು, ವ್ರತಗಳು, ಆರಾಧನೆಗಳು (ಪುಣ್ಯ ದಿನಗಳು), ಪ್ರಾಂತೀಯ ಹಬ್ಬಗಳು/ಉತ್ಸವಗಳು ಇತ್ಯಾದಿಯನ್ನು ಕೊಟ್ಟಿರುತ್ತಾರೆ. ಇವೆಲ್ಲವಕ್ಕೂ, ಅವುಗಳದ್ದೇ ಆದ ತಿಥಿ, ನಕ್ಷತ್ರ, ಯೋಗ, ವಾರಗಳ ನಿಯಮಗಳು ಇರುತ್ತವೆ. ಈ ಕೆಳಗೆ ಏಕಾದಶೀಯ ಬಗ್ಗೆ ಇನ್ನಷ್ಟು ಮಾಹಿತಿ ಕೊಟ್ಟಿದೆ.

**ಏಕಾದಶೀ:** ಸ್ಮಾರ್ತರು ಏಕಾದಶೀ ತಿಥಿಯಂದು ವ್ರತಾಚರಣೆ ಮಾಡುತ್ತಾರೆ, ವೈಷ್ಣವರು ವಿದ್ಧ ದಶಮೀಯಾಗಿರಬಾರದು ಎಂಬುದನ್ನು ಗಮನಿಸುತ್ತಾರೆ.

**ಹರಿವಾಸರ:** ದಶಮೀಯ ಕೊನೆಯ ಕಾಲು ಭಾಗ ಮತ್ತು ದ್ವಾದಶೀಯ ಮೊದಲನೆಯ ಕಾಲು ಭಾಗವನ್ನೂ ಉಪವಾಸ ಮಾಡಿ ಏಕಾದಶೀ ವ್ರತಾಚರಣೆ ಮಾಡಬೇಕು ಎಂಬುದು ನಿಯಮ. ಅದಕ್ಕಾಗಿ, ದಶಮೀಯ ಕೊನೆಯ ಕಾಲು ಭಾಗ ಪ್ರಾರಂಭ ಸಮಯವನ್ನು ದಶಮೀ ಹರಿವಾಸರವೆಂತಲೂ, ದ್ವಾದಶೀಯ ಮೊದಲನೆಯ ಕಾಲು ಭಾಗದ ಅಂತ್ಯ ಸಮಯವನ್ನು ಹರಿವಾಸರವೆಂತಲೂ ಕೊಟ್ಟಿರುತ್ತಾರೆ. ದಶಮೀ ಹರಿವಾಸರವು ರಾತ್ರಿಯಲ್ಲಿ ಬಂದಿದ್ದರೆ, ಕೊಟ್ಟಿರುವುದಿಲ್ಲ. ದ್ವಾದಶೀ ಹರಿವಾಸರ ಬೆಳಿಗ್ಗೆ ಇದ್ದರೆ ಮಾತ್ರ ಕೊಟ್ಟಿರುತ್ತಾರೆ.

**ಸಾಧನೆ:** ದ್ವಾದಶೀ ತಿಥಿಯ ಕಾಲಾವಧಿಯಲ್ಲೇ, ಏಕಾದಶೀ ಉಪವಾಸದ ನಂತರದ ಪಾರಣೆ ಮಾಡಬೇಕು ಎಂಬುದು ನಿಯಮ. ಅದಕ್ಕಾಗಿ, ದ್ವಾದಶೀ ತಿಥಿಯ ಅಂತ್ಯವು ಬೆಳಗ್ಗೆ ಸುಮಾರು 8 ಘಂಟೆಯ ಹೊತ್ತಿಗೆ ಇದ್ದರೆ, ಸಾಧನೆ ದ್ವಾದಶೀ ಸಮಯ ಅಥವಾ **ಅಲ್ಪ ದ್ವಾದಶೀ** ಎಂದು ಕೊಡುವುದು ಪದ್ಧತಿ.

**ಅತಿರಿಕ್ತ ಏಕಾದಶೀ:** ದ್ವಾದಶೀಯ ಕಾಲಾವಧಿಯು 60 ಘಟಿಗಿಂತಲೂ ಅಧಿಕವಾಗಿದ್ದರೆ, ಆ ದಿನವನ್ನು ಅತಿರಿಕ್ತ ಏಕಾದಶೀ ಎಂದು ಎರಡನೇ ಉಪವಾಸದ ದಿನವಾಗಿ ವ್ರತಾಚರಣೆ ಮಾಡುತ್ತಾರೆ. ವಿದ್ಧ ದಶಮೀಯೂ ಇದ್ದರೆ, ಅತಿರಿಕ್ತ ಏಕಾದಶೀ ಆಚರಣೆ ಇಲ್ಲ.

**ಶ್ರವಣ ದ್ವಾದಶೀ:** ಶ್ರವಣಾ ನಕ್ಷತ್ರವು ಮತ್ತು ದ್ವಾದಶೀ ತಿಥಿಯು ಮಧ್ಯಾಹ್ನ (ದಿನಮಾನದ ನಡುವೆ) ದಲ್ಲೂ ಇದ್ದರೆ, ಆ ದಿನವನ್ನು ಶ್ರವಣ ದ್ವಾದಶೀ ಎಂದು ಉಪವಾಸದ ದಿನವಾಗಿ ಆಚರಿಸುತ್ತಾರೆ. ಶ್ರವಣ ದ್ವಾದಶೀಯು ಭಾದ್ರಪದ ಮತ್ತು ಫಾಲ್ಗುನ ಮಾಸದ ಕೃಷ್ಣ ಪಕ್ಷದಲ್ಲಿಯಷ್ಟೇ ಸಾಧ್ಯ.

**ಪಂಚಾಂಗವನ್ನು ಉಪಯೋಗಿಸುವ ಬಗೆ**

ಪಂಚಾಂಗದಲ್ಲಿ ಒಂದು ವರ್ಷದ ಎಲ್ಲಾ ದಿನಗಳ ಮಾಹಿತಿಯನ್ನೂ ಕೊಟ್ಟಿರುತ್ತಾರೆ. ಆ ಮಾಹಿತಿಗಳನ್ನು ಸುಲಭವಾಗಿ ಉಪಯೋಗಿಸುವಂತೆ ಕೊಟ್ಟಿರುತ್ತಾರೆ. [ಕ್ಯಾಲೆಂಡರ್ ತರಹದ ಪಂಚಾಂಗಗಳು ಈಚೆಗೆ ಬಹಳ ಬೇಡಿಕೆಯಲ್ಲಿದೆ.]

ಸಾಮಾನ್ಯವಾಗಿ, ಒಂದು ಪುಟದಲ್ಲಿ ಒಂದು ಪಕ್ಷದಲ್ಲಿನ ದಿನಗಳ ಮಾಹಿತಿಗಳನ್ನು ಕೊಟ್ಟಿರುತ್ತಾರೆ. ಎಲ್ಲಾ ವಿಷಯಗಳನ್ನೂ ಕಾಲಂಗಳಲ್ಲಿ ಕೊಡುವುದು, ಎಲ್ಲವನ್ನೂ ಒಂದು ಸಾಲಿನಲ್ಲಿ, ಕೆಲವನ್ನು ಕಾಲಂಗಳಲ್ಲಿ ಮತ್ತು ಮಿಕ್ಕ ವಿಷಯಗಳನ್ನು ಒಂದು ಸಾಲಿನಲ್ಲಿ, ಹೀಗೆ ವಿವಿಧರೀತಿಯಲ್ಲಿ ಮಾಡುತ್ತಾರೆ. ಎಲ್ಲದರಲ್ಲೂ, ಪುಟದ ಮೊದಲ ಸಾಲಿನಲ್ಲಿ **ಶಕೆ, ಸಂವತ್ಸರ, ಅಯನ, ಋತು, ಮಾಸ** ಮತ್ತು **ಪಕ್ಷದ** ವಿವರಗಳನ್ನು ಕೊಟ್ಟಿರುತ್ತಾರೆ. ಕಾಲಂಗಳ ವಿಷಯಸೂಚಿ (ಹೆಡ್ಡಿಂಗ್) ಯನ್ನೂ ಮೇಲೆ ಕೊಟ್ಟಿರುತ್ತಾರೆ.

ಕೆಳಗೆ ಕೊಟ್ಟಿರುವ ಪಂಚಾಂಗದ ಉದಾಹರಣೆಯಲ್ಲಿ ಮೊದಲ ಕಾಲಂನಲ್ಲಿ **ಇಂಗ್ಲಿಷ್ ದಿನಾಂಕ** ಕೊಟ್ಟಿದೆ. ಇದರ ಸಾಲಿನಲ್ಲಿ, ಆ ದಿನಾಂಕಕ್ಕೆ ಸಂಬಂಧಿಸಿದ ವಿವರಗಳನ್ನು: ಎರಡನೆ ಕಾಲಂನಲ್ಲಿ **ಸೌರಮಾನ ದಿನಾಂಕ (ತಮಿಳು ತೇದಿ)**, ಮೂರನೆಯದರಲ್ಲಿ **ದಿನಮಾನ**–ಘಟಿಯಲ್ಲಿ. ನಂತರದ ಸಾಲು ವಿವರಗಳಲ್ಲಿ ಮೊದಲಿನದು **ವಾರ**. ಇದರಿಂದಾಗಿ, ಇಂಗ್ಲಿಷ್ ದಿನಾಂಕಕ್ಕೋ, ವಾರಕ್ಕೋ, ಸಂಬಂಧಿಸಿದ ಎಲ್ಲಾ ವಿವರಗಳನ್ನು ನೋಡಲು ಸುಲಭ.

ವಾರ ಇರುವ ಸಾಲಿನಲ್ಲಿ, **ತಿಥಿ** – ಘಟಿಗಳು, **ನಕ್ಷತ್ರ** – ಘಟಿಗಳು, **ಯೋಗ** – ಘಟಿಗಳು, **ಕರಣ** – ಘಟಿಗಳು, **ನಕ್ಷತ್ರ ತ್ಯಾಜ್ಯ** – ಘಟಿಗಳು, **ದಿನದ ವಿಶೇಷಗಳು** (ವ್ರತಗಳು / ಹಬ್ಬಗಳು / ಆರಾಧನೆಗಳು / ಉತ್ಸವಗಳು), **ಗ್ರಹಗಳ ರಾಶಿ/ನಕ್ಷತ್ರ ಪ್ರವೇಶಗಳು** – ಘಟಿಗಳು ಮತ್ತು **ಶ್ರಾದ್ಧ ತಿಥಿ** ಕೊಟ್ಟಿರುತ್ತದೆ. ಘಟಿಗಳು **ಸೂರ್ಯೋದಯದಿಂದ** ತಿಥಿ/ನಕ್ಷತ್ರ/ಯೋಗ/ಕರಣದ ಅಂತ್ಯಕ್ಕೆ ಸಲ್ಲುವ ಸಮಯ ಹಾಗೂ ಗ್ರಹಗಳ ರಾಶಿ/ನಕ್ಷತ್ರ ಪ್ರವೇಶ ಸಮಯ.

ಉದಾಹರಣೆಯಲ್ಲಿ ಭಾರತೀಯ ಸ್ಟಾಂಡರ್ಡ್ ಟೈಂ ಕೂಡ ಕೊಟ್ಟಿದೆ.

ತಿಥಿಯ ಕೊನೆಯಲ್ಲಿ ಪ್ರಾರಂಭವಾಗುವ ಮುಂದಿನ ತಿಥಿಯನ್ನು ತಿಳಿಯಲು, ಮರುದಿನದ ಸಾಲನ್ನು ನೋಡಬೇಕು. ಹಾಗೆಯೇ ನಕ್ಷತ್ರ ಮತ್ತು ಯೋಗಗಳಿಗೆ.

ಮುಂದಿನ ಕರಣವನ್ನು ತಿಳಿಯಲು ಕರಣದ ಕೋಷ್ಟಕ ತಿಳಿದಿರಬೇಕು – ಒಂದೇ

ತಿಥಿಯಲ್ಲಿ ಎರಡು ಕರಣಗಳು ಇರುತ್ತವೆ.**#4**

ಪಕ್ಷದ ಮೊದಲನೆಯ ಅಥವಾ ಕೊನೆಯ ದಿನದ ಗ್ರಹಗಳ ಸ್ಥಾನಮಾನಗಳನ್ನು ಒಂದು ಕುಂಡಲಿಯ ರೂಪದಲ್ಲಿ ಕೊಟ್ಟಿರುತ್ತಾರೆ. ಈ ಸ್ಥಾನಮಾನಗಳು ದೃಗ್ಗಣಿತದ್ದೇ ಆಗಿರುತ್ತದೆ. ಮಿಕ್ಕ ಎಲ್ಲಾ ಪಂಚಾಂಗದ ವಿಷಯಗಳು ಸಾಮಾನ್ಯವಾಗಿ ಸೂರ್ಯ ಸಿದ್ಧಾಂತದ್ದು ಆಗಿರುತ್ತದೆ.

ಉದಾಹರಣೆಗಾಗಿ 3 ದಿನಗಳ ಪಂಚಾಂಗವನ್ನು ಕೆಳಗೆ ಕೊಟ್ಟಿದೆ:

**ಶ್ರೀ ಶಾಲೀವಾಹನ ಶಕ: 1921 ಪ್ರಮಾಥಿ ನಾಮ ಸಂವತ್ಸರ,**
**ಕಲಿ ವರ್ಷ: 5100 ಡಿಸೆಂಬರ್ 1999 & ಜನವರಿ 2000**
**ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಕೃಷ್ಣ ಪಕ್ಷ,**
**ಸೌರ ಮಾಸ: ಧನುಸ್–ಮಾರ್ಗಳಿ, ಮಾಸ ನಿಯಾಮಕ: ಕೇಶವ**

| **ಜೂಲಿಯನ್ ದಿನಾಂಕ** | **ಸೌರ ದಿನ** | **ದಿನ ಮಾನ** | **ವಾರ, ತಿಥಿ, ನಕ್ಷತ್ರ, ಯೋಗ, ಕರಣ, ನಕ್ಷತ್ರ ತ್ಯಾಜ್ಯ, ದಿನ ವಿಶೇಷ, ರಾಶಿ/ನಕ್ಷತ್ರ ಪ್ರವೇಶ [ಶ್ರಾದ್ಧ ತಿಥಿ]** |
|---|---|---|---|
| 31-ಡಿಸೆಂಬರ್ | 16 | 28-28 | ಭಾರ್ಗವ ನವಮೀ 14-49 {12-27 pm}, ಚಿತ್ರಾ 31-59 {7-19pm}, ಅತಿಗಂಡ 23-17 {3-50 pm}, ಗರಜ 14-49 {12-27am}, ರಾತ್ರಿ 18-13 {1-12 am}, ತುಲೇ ಚಂದ್ರ {6-47 am}, ಧನಿಷ್ಠಾ ಚತುರ್ಥೇ ಭೌಮ 26-56 {5-17 pm}, ಮೂಲ ತೃತೀಯೇ ಬುಧ 23-15 {3-49 pm}, [ದಶಮೀ] |
| 1-ಜನವರಿ | 17 | 28-28 | ಮಂದ, ದಶಮೀ 16-59 {1-19 pm}, ಸ್ವಾತಿ 35-44 {8-49 pm}, ಸುಕರ್ಮನ್ 22-05 {3-21 pm}, ಭದ್ರಾ 16-59 {1-19 pm}, ರಾತ್ರಿ 22-12 {2-47 am}, ಪೂರ್ವಾಷಾಢಾ ದ್ವಿತೀಯೆ ರವಿ 35-49 {8-51pm} [ಏಕಾದಶೀ] |
| 2-ಜನವರಿ | 18 | 28-28 | ಭಾನು, ಏಕಾದಶೀ 20-22 {2-40 pm}, ವಿಶಾಖ 40-41 {10-08 pm}, ಧೃತಿ 21-49 {3-15 pm}, ಬಾಲವ 20-22 {2-40 pm}, ರಾತ್ರಿ 23-04 {3-08 am}, ಸರ್ವತ್ರ ಏಕಾದಶೀ, ವೃಶ್ಚಿಕೇ ಚಂದ್ರ 24-27 {4-18 pm}, [ಶೂನ್ಯ] |

ನಮಗೆ ವಿಷಯ ತಿಳಿಯ ಬೇಕಾದ ದಿನಾಂಕ 1ನೇ ಜನವರಿ. ಆ ದಿನಾಂಕದ ವಿಷಯಗಳು:

**ಜೂಲಿಯನ್ ದಿನಾಂಕ** : 1ನೇ ಜನವರಿ
**ಸೌರ(ತಮಿಳು) ದಿನಾಂಕ:** ಮಾರ್ಗಳಿ 17
**ದಿನಮಾನ #1** : 28 ಘಟಿ – 28 ವಿಘಟಿ (11 ಘಂಟೆ - 23 ನಿಮಿಷ)
**ವಾರ** : ಮಂದ ವಾರ (ಶನಿವಾರ)
**ತಿಥಿ** : ದಶಮೀ 1-19 pm ವರೆಗೆ **#2**
**ನಕ್ಷತ್ರ** : ಸ್ವಾತೀ 8-49 pm ವರೆಗೆ **#3**

| | | |
|---|---|---|
| **ಯೋಗ** | : | ಸುಕರ್ಮನ್ 3-21 pm ವರೆಗೆ |
| **ಕರಣ** | : | ಭದ್ರಾ 1-19 pm ವರೆಗೆ **#4** |
| **ನಕ್ಷತ್ರ ತ್ಯಾಜ್ಯ** | : | ರಾತ್ರಿ 2-47 am **#5,** **ದಿನ ವಿಶೇಷ**: -- |
| **ರಾಶಿ/ನಕ್ಷತ್ರ ಪ್ರವೇಶ** | : | ಪೂರ್ವಾಷಾಢಾ ದ್ವಿತೀಯೆ ರವಿ 8-51 pm ಅಂದರೆ ರವಿಯು ಪೂರ್ವಾಷಾಢಾ 2ನೇ ಪಾದವನ್ನು 8-51 pm ಕ್ಕೆ ಪ್ರವೇಶಿಸುತ್ತಾನೆ |
| **ಶ್ರಾದ್ಧ ತಿಥಿ** | : | ಏಕಾದಶೀ |

***ಸೂಚನೆ:***

**#1**. 1 ದಿನ = 60 ಘಟಿ, 1 ಘಟಿ = 60 ವಿಘಟಿ ( 1 ಘಟಿ = 24 ನಿಮಿಷ, 1 ವಿಘಟಿ = 0.4 ನಿಮಿಷ, 1 ಘಂಟೆ = 2.5 ಘಟಿ)

**#2**. ದಶಮೀಯು ಹಿಂದಿನ ದಿನದ 12-27 pm ಕ್ಕೆ ಪ್ರಾರಂಭವಾಗಿದೆ. ದಶಮೀಯ ಕಾಲಾವಧಿಯು ಹಿಂದಿನ ದಿನದ 12-27 pm ರಿಂದ ಇಂದಿನ 1-19 pm ವರೆಗೂ ಅಂದರೆ 24 ಘಂಟೆ 52 ನಿಮಿಷ. ಏಕಾದಶೀಯು ಇಂದಿನ 1-19 pm ರಿಂದ ಮರುದಿನ 2-40 pm ವರೆಗೆ ಇರುತ್ತದೆ. ಇದೇ ರೀತಿ ನಕ್ಷತ್ರ ಮತ್ತು ಯೋಗಗಳಿಗೆ ನೋಡಬೇಕು.

**#3**. ಸ್ವಾತೀ ನಕ್ಷತ್ರವು ಹಿಂದಿನ ದಿನದ 7-19 pm ರಿಂದ ಇಂದಿನ 8-49 pm ವರೆಗೆ ಅಂದರೆ ಮೊತ್ತ 25 ಘಂಟೆ 30 ನಿಮಿಷ. ಪ್ರತಿ ಪಾದದ ಕಾಲಾವಧಿ 6 ಘಂಟೆ - 22 1/2 ನಿಮಿಷ. ಮೊದಲನೆಯ ಪಾದವು 1-42 am ಕ್ಕೂ, ಎರಡನೆಯದು 8-04 am ಕ್ಕೂ, ಮೂರನೆಯದು 2-27 pm ಕ್ಕೂ ಅಂತ್ಯವಾಗುತ್ತದೆ.

**#4**. 1-19 pm ರ ನಂತರದ ಕರಣ ಬವ. ಇದು ಕರಣಗಳ ಕೋಷ್ಟಕದಿಂದ ತಿಳಿಯುವ ವಿಷಯ. ಕೋಷ್ಟಕವು: ಬವ, ಬಾಲವ, ಕೌಲವ, ತೈತಿಲ, ಗರಜ, ವಣಿಕ್, ಭದ್ರ ಮತ್ತೆ ಪುನಃ ಬವ, . . . ನಾಲ್ಕು ಕರಣಗಳು: ಕಿಂಸ್ತುಘ್ನ – ಶುಕ್ಲ ಪ್ರಥಮಾ ತಿಥಿಯ ಮೊದಲ ಭಾಗ, ಶಕುನಿ – ಕೃಷ್ಣ ಚತುರ್ದಶೀ ತಿಥಿಯ ಎರಡನೇ ಭಾಗ, ಚತುಶ್ಪಾತ್ – ಅಮಾವಾಸ್ಯೆ ತಿಥಿಯ ಮೊದಲ ಭಾಗ ಮತ್ತು ನಾಗವಾನ್ – ಅಮಾವಾಸ್ಯೆ ತಿಥಿಯ ಎರಡನೇ ಭಾಗದಲ್ಲಿ ಇರುತ್ತವೆ.

ಬವ ಕರಣವು 1-51 am ಕ್ಕೆ ಮುಗಿಯುತ್ತದೆ (ಲೆಖ್ಖ ಹಾಕಿ ಕಂಡುಕೊಳ್ಳಬೇಕು)

**#5**. ನಕ್ಷತ್ರ ತ್ಯಾಜ್ಯವು ಕೊಟ್ಟಿರುವ ಸಮಯದಿಂದ 1 ಘಂಟೆ 54 ನಿಮಿಷ (ನಿಶ್ಚಿತ ಕಾಲಾವಧಿ)

**ಪಂಚಾಂಗದ ಉಪಯೋಗದಲ್ಲಿ ಸೂರ್ಯೋದಯದ ಸಮಯ**

ಪಂಚಾಂಗದಲ್ಲಿ ಎಲ್ಲಾ ಸಮಯಗಳನ್ನೂ ಸೂರ್ಯೋದಯದಿಂದ ಘಟಿ–ವಿಘಟಿಗಳಲ್ಲಿ ಕೊಟ್ಟಿರುತ್ತಾರೆ. ಹಾಗಾಗಿ ಅವು ಪಂಚಾಂಗ ಗುಣಿಸಿರುವ ಸ್ಥಳಕ್ಕೆ ಕರಾರುವಾಕ್ಕಾಗಿದ್ದು, ಬೇರೆಬೇರೆ ಸ್ಥಳಗಳಿಗೆ ಸರಿಹೊಂದದೇ ಇರಬಹುದು. ಪಂಚಾಂಗದಲ್ಲಿ ಸಮಯವನ್ನು ಭಾರತೀಯ ಸ್ಟಾಂಡರ್ಡ್ ಟೈಂ ನಲ್ಲಿ ಕೊಟ್ಟಿದ್ದರೆ, ಆ ಸಮಯವು ಎಲ್ಲಾ ಸ್ಥಳಗಳಿಗೂ ಅನ್ವಯಿಸುತ್ತದೆ. ಆದಾಗ್ಯೂ, ಸೂರ್ಯೋದಯದ ವ್ಯತ್ಯಾಸವನ್ನು ಪರಿಗಣಿಸಬೇಕು.

ಪಂಚಾಂಗದಲ್ಲಿ ಕೊಟ್ಟಿರುವ ಸೂರ್ಯೋದಯ ಸಮಯವು ಪಂಚಾಂಗ ಗುಣಿಸಿರುವ ಸ್ಥಳದ ಅಕ್ಷಾಂಶ /ರೇಖಾಂಶಗಳಿಗೆ ಸರಿಯಾದದ್ದು. ಬೇರೆ ಸ್ಥಳಗಳಿಗೆ ಸೂರ್ಯೋದಯವನ್ನು

ತಿಳಿದುಕೊಂಡು ತಿದ್ದುಪಡಿ ಮಾಡಿಕೊಳ್ಳಬೇಕು. ಒಂದೇ ರೇಖಾಂಶದಲ್ಲಿರುವ ಸ್ಥಳಗಳಿಗೆ ಬೇರೆಬೇರೆ ರೇಖಾಂಶಗಳಿಗೆ ಒಂದು ಡಿಗ್ರೀಗೆ 4 ನಿಮಿಷದಂತೆ ತಿದ್ದುಕೊಳ್ಳಬಹುದು.

**ರಾಹು ಕಾಲ/ಗುಳಿಕ ಕಾಲ/ಯಮಗಂಡ ಕಾಲ**

| ದಿನ: | ಭಾನು | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|---|
| ರಾಹು ಕಾಲ | 16.30-18 | 7.30-9 | 15-16.30 | 12-13.30 | 13.30-15 | 10.30-12 | 9-10.30 |
| ಗುಳಿಕ ಕಾಲ | 15-16.30 | 13.30-15 | 12-13.30 | 10.30-12 | 9-10.30 | 7.30-9 | 6-7.30 |
| ಯಮಗಂಡ | 12-13.30 | 10.30-12 | 9-10.30 | 7.30-9 | 6-7.30 | 15-16.30 | 13.30-15 |

ಇಲ್ಲಿ ಕೊಟ್ಟಿರುವ ಸಾಮಾನ್ಯ ಸಮಯಗಳು, ಸೂರ್ಯೋದಯ 6.00 am ಗೆ ಮತ್ತು ಸೂರ್ಯಾಸ್ತ 6.00 pm ಗೆ ಎನ್ನುವ ಊಹೆಯ ಮೇಲೆ. ದಿನಮಾನವನ್ನು 8 ವಿಭಾಗ ಮಾಡಿ, 7 ಭಾಗಗಳನ್ನು ಒಂದೊಂದು ದಿನಕ್ಕೆ ಒಂದೊಂದು ಭಾಗವನ್ನು ಅಳವಡಿಸಿದ್ದಾರೆ. ಸೂರ್ಯೋದಯ ಸಮಯ ಮತ್ತು ದಿನಮಾನ ಬದಲಾಯಿಸಿದಂತೆಲ್ಲಾ ಈ ಸಮಯಗಳನ್ನೂ ಬದಲಾಯಿಸಿಕೊಳ್ಳಬೇಕು.

**ಅಮೃತ, ಸಿದ್ಧ ಮತ್ತು ಮರಣ**

ಕೆಲವು ಪಂಚಾಂಗಗಳಲ್ಲಿ ಯೋಗಗಳೆಂದು ಅಮೃತ, ಸಿದ್ಧ ಮತ್ತು ಮರಣ ಎಂದು ದಿನನಿತ್ಯಕ್ಕೆ ಕೊಟ್ಟಿರುತ್ತಾರೆ. ಅವುಗಳು ವಾರದ ದಿನ ಮತ್ತು ನಕ್ಷತ್ರದ ಸಂಯೋಗದಿಂದಾಗುವ ಫಲಗಳ ಸಾರಾಂಶ. ಯೋಗಗಳು ಎಂದರೆ ಫಲಗಳು ಎಂಬ ದೃಷ್ಟಿಯಿಂದ ಕೊಟ್ಟಿರಬಹುದು.

**ಪ್ರಯಾಣಕ್ಕೆ ಅನುಕೂಲವಾದ ಆನಂದಾದಿ ಯೋಗಗಳು / ಮುಹೂರ್ತರಾಜ**

ವಾರದ ದಿನ ಮತ್ತು ನಕ್ಷತ್ರದ ಸಂಯೋಗದಿಂದಾಗುವ ಫಲಗಳು 28. ಅವುಗಳು ಆನಂದ, ಕಾಲದಂಡ, . . ಇತ್ಯಾದಿ. ಇವೆಲ್ಲವನ್ನೂ ಯೋಗಗಳೆಂದು ಕರೆಯುತ್ತಾರೆ. ಈ ಫಲಗಳನ್ನು ಸೂಚಿಸುವ ವಾರದ ದಿನ ಮತ್ತು ನಕ್ಷತ್ರಗಳ ಪದಕವನ್ನು ಕೆಳಗೆ ಕೊಟ್ಟಿದೆ. ಫಲಗಳನ್ನು ಸಾಂಕೇತಿಕವಾಗಿ ಫ1, ಫ2, . . ಫ28 ಎಂದು ಸೂಚಿಸಿದೆ. ಈ ಸಂಕೇತಗಳಿಗೆ ಹೆಸರು ಮತ್ತು ಅರ್ಥವನ್ನು ಇನ್ನೊಂದು ಪದಕದಲ್ಲಿ ಕೊಟ್ಟಿದೆ. ಅದೇ ಪದಕದಲ್ಲಿ, ಫಲಗಳ ಅರ್ಥವನ್ನು ಅಮೃತ, ಸಿದ್ಧ ಮತ್ತು ಮರಣ ಎಂದು (ಕೆಲವು ಪಂಚಾಂಗಗಳಲ್ಲಿ ಕೊಡುವಂತೆ) ವಿಂಗಡಿಸಿದೆ. ಅರ್ಥವು ಶುಭ ಸೂಚನೆಯೋ ಅಲ್ಲವೋ ಎಂಬುದನ್ನು ತಿಳಿಸುತ್ತದೆ. ಅದನ್ನು ಸಂಕೇತದಲ್ಲಿಯೇ ಶುಭಸೂಚನೆಗೆ+ ಮತ್ತು ಶುಭಸೂಚನೆಯಲ್ಲ ಎನ್ನುವುದಕ್ಕೆ – ಎಂದು ಅಳವಡಿಸಿದೆ.

ಪ್ರಯಾಣಕ್ಕೆ ಮುಖ್ಯವಾಗಿ ಉಪಯೋಗಿಸುವುದರಿಂದ, ಈ ಪದಕಕ್ಕೆ **ಪ್ರಯಾಣಕ್ಕೆ ಅನುಕೂಲವಾದ ಆನಂದಾದಿ ಯೋಗಗಳು** ಎಂಬ ಹೆಸರು. ಸುಲಭವಾಗಿ ಸಣ್ಣ ಕಾರ್ಯಗಳಿಗೆ ಮುಹೂರ್ತ ನೋಡಲು ಅನುಕೂಲವಾದದ್ದರಿಂದ **ಮುಹೂರ್ತರಾಜ** ಎಂಬ ಹೆಸರು.

ಈ ಪದಕವನ್ನು ಉಪಯೋಗಿಸಲು, ಪಂಚಾಂಗದಿಂದ ವಾರದ ದಿನ ಮತ್ತು ನಕ್ಷತ್ರವನ್ನು ತಿಳಿಯಬೇಕು. ಅವುಗಳಿಗೆ ಸರಿಯಾದ ಫಲವನ್ನು ನೋಡಬೇಕು. ಕರಾರುವಾಕ್ಕಾಗಿ ಮುಹೂರ್ತ ನೋಡಲಿಕ್ಕೆ ಜ್ಯೋತಿಷ್ಯ ಶಾಸ್ತ್ರಜ್ಞರ ಬಳಿ ಹೋಗಬೇಕು.

## ಆನಂದಾದಿ ಯೋಗಗಳು

| ನಕ್ಷತ್ರ | ಭಾನು | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
|---|---|---|---|---|---|---|---|
| ಅಶ್ವಿನೀ | ಫ 1+ | ಫ 5+ | ಫ 9– | ಫ13+ | ಫ17– | ಫ21+ | ಫ25– |
| ಭರಣೀ | ಫ 2– | ಫ 6– | ಫ10– | ಫ14+ | ಫ18– | ಫ22– | ಫ26– |
| ಕೃತ್ತಿಕಾ | ಫ 3– | ಫ 7+ | ಫ11+ | ಫ15– | ಫ19+ | ಫ23– | ಫ27+ |
| ರೋಹಿಣೀ | ಫ 4+ | ಫ 8+ | ಫ12+ | ಫ16– | ಫ20+ | ಫ24+ | ಫ28+ |
| ಮೃಗಶಿರಾ | ಫ 5+ | ಫ 9– | ಫ13+ | ಫ17– | ಫ21+ | ಫ25– | ಫ 1+ |
| ಆರ್ದ್ರಾ | ಫ 6– | ಫ10– | ಫ14+ | ಫ18– | ಫ22– | ಫ26– | ಫ 2– |
| ಪುನರ್ವಸು | ಫ 7+ | ಫ11+ | ಫ15– | ಫ19+ | ಫ23– | ಫ27+ | ಫ 3– |
| ಪುಷ್ಯಾ | ಫ 8+ | ಫ12+ | ಫ16– | ಫ20+ | ಫ24+ | ಫ28+ | ಫ 4+ |
| ಆಶ್ಲೇಷಾ | ಫ 9– | ಫ13+ | ಫ17– | ಫ21+ | ಫ25– | ಫ 1+ | ಫ 5+ |
| ಮಘಾ | ಫ10– | ಫ14+ | ಫ18– | ಫ22– | ಫ26– | ಫ 2– | ಫ 6– |
| ಪುಬ್ಬ(ಪೂರ್ವಾ ಫಲ್ಗುನೀ) | ಫ11+ | ಫ15– | ಫ19+ | ಫ23– | ಫ27+ | ಫ 3– | ಫ 7+ |
| ಉತ್ತರ(ಉತ್ತರಾ ಫಲ್ಗುನೀ) | ಫ12+ | ಫ16– | ಫ20+ | ಫ24+ | ಫ28+ | ಫ 4+ | ಫ 8+ |
| ಹಸ್ತಾ | ಫ13+ | ಫ17– | ಫ21+ | ಫ25– | ಫ 1+ | ಫ 5+ | ಫ 9– |
| ಚಿತ್ರಾ | ಫ14+ | ಫ18– | ಫ22– | ಫ26– | ಫ 2– | ಫ 6– | ಫ10– |
| ಸ್ವಾತೀ | ಫ15– | ಫ19+ | ಫ23– | ಫ27+ | ಫ 3– | ಫ 7+ | ಫ11+ |
| ವಿಶಾಖಾ | ಫ16– | ಫ20+ | ಫ24+ | ಫ28+ | ಫ 4+ | ಫ 8+ | ಫ12+ |
| ಅನುರಾಧಾ | ಫ17– | ಫ21+ | ಫ25– | ಫ 1+ | ಫ 5+ | ಫ 9– | ಫ13+ |
| ಜ್ಯೇಷ್ಠಾ | ಫ18– | ಫ22– | ಫ26– | ಫ 2– | ಫ 6– | ಫ10– | ಫ14+ |
| ಮೂಲಾ | ಫ19+ | ಫ23– | ಫ27+ | ಫ 3– | ಫ 7+ | ಫ11+ | ಫ15– |
| ಪೂರ್ವಾಷಾಢಾ | ಫ20+ | ಫ24+ | ಫ28+ | ಫ 4+ | ಫ 8+ | ಫ12+ | ಫ16– |
| ಉತ್ತರಾಷಾಢಾ(a) | ಫ21+ | ಫ25– | ಫ 1+ | ಫ 5+ | ಫ 9– | ಫ13+ | ಫ17– |
| ಅಭಿಜಿತ್* | ಫ22– | ಫ26– | ಫ 2– | ಫ 6– | ಫ10– | ಫ14+ | ಫ18– |
| ಶ್ರವಣಾ(b) | ಫ23– | ಫ27+ | ಫ 3– | ಫ 7+ | ಫ11+ | ಫ15– | ಫ19+ |
| ಧನಿಷ್ಠಾ | ಫ24+ | ಫ28+ | ಫ 4+ | ಫ 8+ | ಫ12+ | ಫ16– | ಫ20+ |
| ಶತಭಿಷಾ | ಫ25– | ಫ 1+ | ಫ 5+ | ಫ 9– | ಫ13+ | ಫ17– | ಫ21+ |
| ಪೂರ್ವಾಭಾದ್ರಾ | ಫ26– | ಫ 2– | ಫ 6– | ಫ10– | ಫ14+ | ಫ18– | ಫ22 |
| ಉತ್ತರಾಭಾದ್ರಾ | ಫ27+ | ಫ 3– | ಫ 7+ | ಫ11+ | ಫ15– | ಫ19+ | ಫ23– |
| ರೇವತೀ | ಫ28+ | ಫ4+ | ಫ8+ | ಫ12+ | ಫ16– | ಫ20+ | ಫ24+ |

*(a) ಮೊದಲನೆಯ 2 ಪಾದಗಳು ಮಾತ್ರ, (b) ಕೊನೆಯ 2 ಪಾದಗಳು ಮಾತ್ರ,*

**ಉತ್ತರಾಷಾಢಾದ ಕೊನೆಯ 2 ಪಾದಗಳು ಮತ್ತು ಶ್ರವಣಾದ ಮೊದಲನೆಯ 2 ಪಾದಗಳು ಸೇರಿ ಅಭಿಜಿತ್ ನಕ್ಷತ್ರವಾಗುತ್ತದೆ.*

## ಆನಂದಾದಿ ಯೋಗಗಳ ಅರ್ಥ ಮತ್ತು ಅಮೃತ, ಸಿದ್ಧ, ಮರಣ ವಿಂಗಡಣೆ

| ಸಂಕೇತ | ಫಲ | ಅರ್ಥ | ವಿಂಗಡಣೆ |
|---|---|---|---|
| ಫ 1+ | ಆನಂದ | ದ್ರವ್ಯ ಲಾಭ | ಸಿದ್ಧ |
| ಫ2– | ಕಾಲದಂಡ | ವಿಘ್ನ | ಮರಣ |
| ಫ 3– | ಧೂಮ್ರಾಕ್ಷ | ಹಾನಿ | ಮರಣ |
| ಫ 4+ | ಪ್ರಜಾಪತಿ | ಕಾರ್ಯಸಿದ್ಧಿ | ಸಿದ್ಧ |
| ಫ 5+ | ಸೌಮ್ಯ | ದ್ರವ್ಯ ಲಾಭ | ಸಿದ್ಧ |
| ಫ 6– | ಧ್ವಾಂಕ್ಷ | ವಿಘ್ನ | ಮರಣ |
| ಫ 7+ | ಧ್ವಜ | ಶುಭ | ಸಿದ್ಧ |
| ಫ 8+ | ಶ್ರೀವತ್ಸ | ಧನ ಲಾಭ | ಸಿದ್ಧ |
| ಫ 9– | ವಜ್ರ | ಕಲಹ | ಮರಣ |
| ಫ 10– | ಮುದ್ಗರ | ಧನ ನಾಶ | ಮರಣ |
| ಫ 11+ | ಛತ್ರ | ರಾಜ ಸನ್ಮಾನ | ಸಿದ್ಧ |
| ಫ 12+ | ಮಿತ್ರ | ದೇಹ ಪುಷ್ಟಿ | ಅಮೃತ |
| ಫ 13+ | ಮಾನಸ | ಪುಷ್ಟಿ | ಅಮೃತ |
| ಫ 14+ | ಪದ್ಮ | ವಿಘ್ನ | ಮರಣ |
| ಫ 15– | ಲಂಬಕ | ಧನ ನಷ್ಟ | ಮರಣ |
| ಫ 16– | ಉತ್ಪಾತ | ಪ್ರಾಣ ನಾಶ | ಮರಣ |
| ಫ 17– | ಮೃತ್ಯು | ಮರಣ | ಮರಣ |
| ಫ 18– | ಕಾಣ | ಕಾರ್ಯ ನಾಶ | ಮರಣ |
| ಫ 19+ | ಸಿದ್ಧಿ | ಕಾರ್ಯ ಸಿದ್ಧಿ | ಅಮೃತ |
| ಫ 20+ | ಶುಭಂ | ಶುಭ | ಸಿದ್ಧ |
| ಫ 21+ | ಅಮೃತ | ಸ್ತ್ರೀಸಂತೋಷ | ಅಮೃತ |
| ಫ 22– | ಮುಸಲ | ಧನ ನಾಶ | ಮರಣ |
| ಫ 23– | ಗದಾ | ಭಯ | ಮರಣ |
| ಫ 24+ | ಮಾತಂಗ | ಕುಲ ವೃದ್ಧಿ | ಅಮೃತ |
| ಫ 25– | ರಾಕ್ಷಸ | ಯೋಚನೆ | ಮರಣ |
| ಫ 26– | ಚರ | ಕಾರ್ಯ ನಾಶ | ಮರಣ |
| ಫ 27+ | ಸ್ಥಿರ | ಕಾರ್ಯ ಲಾಭ | ಅಮೃತ |
| ಫ 28+ | ವರ್ಧಮಾನ | ಅತಿಶಯ ಲಾಭ | ಸಿದ್ಧ |

ಪ್ರಯಾಣಕ್ಕೆ ಆನಂದಾದಿ ಯೋಗಗಳಲ್ಲದೆ, **ದಿಕ್ ಶೂಲ** – ಯಾವ ದಿಕ್ಕುಗಳಿಗೆ ಪ್ರಯಾಣ ನಿಶಿದ್ಧ (ವಾರದ ದಿನ ಮತ್ತು ತಿಥಿಗೆ ಅನುಗುಣವಾಗಿ), **ಯೋಗಿನಿ** – ತಿಥಿಗೆ ಅನುಕೂಲವಾದ ದಿಕ್ಕುಗಳು, **ವಾರ ಶೂಲ** – ವಾರದ ದಿನದ ಪ್ರಕಾರ ಅನುಕೂಲವಾದ ದಿಕ್ಕುಗಳು ಮತ್ತು ನಿಶಿದ್ಧವಾದ ದಿಕ್ಕುಗಳಿಗೆ ಪ್ರಯಾಣಿಸಬೇಕಾದರೆ ಮಾಡಬೇಕಾದ **ಪರಿಹಾರ**ಗಳು ಎಂಬ ಸುಲಭ ವಿವರಗಳನ್ನೂ ಪಂಚಾಂಗದಲ್ಲಿ ಕೊಟ್ಟಿರುತ್ತಾರೆ.

**ವಾಸ್ತುಪುರುಷೋತ್ಥಾನ ದಿನಾಂಕ**

| ಸೌರ ಮಾಸ | ದಿನಾಂಕ | ಸಮಯ ಘಟಿ |
|---|---|---|
| ಮೇಷ | 10 | 21-00 |
| ವೃಷಭ | 21 | 8-00 |
| ಮಿಥುನ | - | - |
| ಕರ್ಕಾಟಕ | 11 | 2-00 |
| ಸಿಂಹ | 6 | 29-00 |
| ಕನ್ಯಾ | - | - |
| ತುಲಾ | 11 | 2-00 |
| ವೃಶ್ಚಿಕ | 8 | 10-00 |
| ಧನುಸ್ | - | - |
| ಮಕರ | 12 | 8-00 |
| ಕುಂಭ | 22 | 8-00 |
| ಮೀನ | - | - |

ವಾಸ್ತು ಪುರುಷನು ಎದ್ದೇಳುವ ಸಮಯವನ್ನು ಮೇಲೆ ಪದಕದಲ್ಲಿ ಕೊಟ್ಟಿದೆ. ಎದ್ದಿರುವ ಸಮಯ 1 1/2 ಮುಹೂರ್ತಗಳು = 3 ಘಟಿಗಳು. ಆ ಸಮಯದಲ್ಲಿ ಶಂಕು ಸ್ಥಾಪನೆ ಇತ್ಯಾದಿ ಕಾರ್ಯಗಳನ್ನು ಮಾಡಬೇಕು.

**ಅಲ್ಪ ದ್ವಾದಶೀ:** ದಿನದಲ್ಲಿ ದ್ವಾದಶೀಯ ವ್ಯಾಪ್ತಿ ಬಹಳ ಕಡಮೆ ಇರುವುದನ್ನು ಸೂಚಿಸುತ್ತದೆ. ಅಷ್ಟರಲ್ಲೇ ದ್ವಾದಶೀ ವ್ರತಾಚರಣೆ ಮುಗಿಸಬೇಕು. **ಸಾಧನೆ** ಎಂದೂ ಹೆಸರು.

**ಅನಧ್ಯಯನ:** ಅಧ್ಯಯನ ಇಲ್ಲ. ಕನಿಷ್ಟ ಪಕ್ಷ ವೇದದ ಹೊಸ ಅಧ್ಯಾಯವನ್ನು ಪ್ರಾರಂಭಿಸಬಾರದು. ಉಪನಯನಕ್ಕೆ ವರ್ಜ್ಯ.

**ಅನ್ವಷ್ಟಕ:** ಅನ್ವಷ್ಟಕ ಶ್ರಾದ್ಧದ ದಿನ. **ಅಷ್ಟಕ**ಕ್ಕೆ ಹಿಂದಿನ ಮತ್ತು ಮುಂದಿನ ದಿನ.

**ಅಷ್ಟಕ:** ಅಷ್ಟಕ ಶ್ರಾದ್ಧದ ದಿನ. ಭಾದ್ರಪದ, ಮಾರ್ಗಶಿರ, ಪುಷ್ಯಾ, ಮಾಘ ಮತ್ತು ಫಾಲ್ಗುಣ ಮಾಸಗಳಲ್ಲಿನ ಶ್ರಾದ್ಧ ತಿಥಿ ಬಹುಳ ಅಷ್ಟಮೀ ದಿನಗಳು.

**ಆಯುಷ್ಕರ್ಮ:** ಕೂದಲು ಕತ್ತರಿಸುವುದನ್ನು ಶುಭ ವೇಳೆಗಳಲ್ಲಿ ಮಾಡಿದರೆ, ವ್ಯಕ್ತಿಗೂ ಮತ್ತು ಆತನ ಕುಟುಂಬವರ್ಗದವರಿಗೂ ಆಯುಷ್ಯ ವೃದ್ಧಿಯಾಗುವುದು ಎನ್ನುತ್ತಾರೆ. ಆದ್ದರಿಂದಲೇ ಕೂದಲು ಕತ್ತರಿಸುವುದಕ್ಕೆ ಆಯುಷ್ಕರ್ಮ ಎಂದು ಹೆಸರು. ಶುಭ ವೇಳೆಗಳು ದ್ವಿತೀಯಾ, ತೃತೀಯಾ, ಪಂಚಮೀ, ದಶಮೀ ಮತ್ತು ತ್ರಯೋದಶೀ ತಿಥಿಗಳ ಮತ್ತು ಸೋಮ, ಬುಧ, ಗುರುವಾರಗಳ ಮತ್ತು ಅಶ್ವಿನೀ, ಮೃಗಶಿರಾ, ಪುನರ್ವಸು, ಪುಷ್ಯಾ, ಹಸ್ತ, ಚಿತ್ರ, ಸ್ವಾತಿ, ಜ್ಯೇಷ್ಠ, ಶ್ರವಣ, ಶತಭಿಶ, ಧನಿಷ್ಟ, ರೇವತಿ ನಕ್ಷತ್ರಗಳ ಮತ್ತು ಪೂರ್ವಾಹ್ನದ (ಮಧ್ಯಾಹ್ನಕ್ಕೆ ಮತ್ತು ಭೋಜನಕ್ಕೆ ಮೊದಲು) ಸಂಯೋಗ. ಜನ್ಮ ನಕ್ಷತ್ರವೂ ವರ್ಜ್ಯ. ಸಹೋದರರು, ತಂದೆ–ಮಗ ಒಂದೇ ದಿನ ಆಯುಷ್ಕರ್ಮ ಮಾಡಿಕೊಳ್ಳಬಾರದು. ಅನಿವಾರ್ಯ ಸಂದರ್ಭಗಳಲ್ಲಿ, ಅಶುಭ ವೇಳೆಯಲ್ಲಿ ಆಯುಷ್ಕರ್ಮ ಮಾಡಿಸಿಕೊಂಡಿದ್ದರೆ, ಮುಂದಿನ ಬಾರಿ ಶುಭ ವೇಳೆಯಲ್ಲಿ ಆಯುಷ್ಕರ್ಮ ಮಾಡಿಸಿಕೊಳ್ಳುವುದೇ ಪರಿಹಾರ.

**ಇಂದಿನ ದಿನ:** ರಾತ್ರಿಮಾನದಲ್ಲಿ 5/8 ಭಾಗ ಇಂದಿನ ದಿನಕ್ಕೇ ಸೇರಿದ್ದು, ಉಳಿದದ್ದು ಮಾರನೇ ದಿನಕ್ಕೆ ಸೇರಿದ್ದು ಎಂದು ನಿಯಮ. ಸೂರ್ಯೋದಯ 6 ಘಂಟೆಗೆ ಮತ್ತು ಸೂರ್ಯಾಸ್ತವೂ 6 ಘಂಟೆಗೆ ಎಂದಿಟ್ಟುಕೊಂಡರೆ ರಾತ್ರಿ 1-30 ಘಂಟೆಯ ವರೆಗೆ ಇಂದಿನ ದಿನವಾಗುತ್ತದೆ. ಆದಾಗ್ಯೂ, ರಜಸ್ವಲಾ ನಿರ್ಣಯಕ್ಕೆ ರಾತ್ರಿಮಾನದಲ್ಲಿ 2/3 ಭಾಗ ಇಂದಿನ ದಿನಕ್ಕೇ ಸೇರಿದ್ದು ಅಂದರೆ ರಾತ್ರಿ 2-00 ಘಂಟೆಯವರೆಗೆ ಎಂಬುದು ನಿಯಮ.

**ಕರಿದಿನ:** ಕರಿದಿನಗಳು ಐದು. ಕರ್ಕಾಟಕ ಮತ್ತು ಮಕರ ಸಂಕ್ರಮಣದ ಮರುದಿನಗಳು, ಜ್ಯೇಷ್ಠ ಮತ್ತು ಆಶ್ವಯುಜ ಮಾಸಗಳ ಶುಕ್ಲ ಪ್ರಥಮಾ ದಿನಾಂಕವು ಮತ್ತು ಫಾಲ್ಗುಣ ಕೃಷ್ಣ ಪ್ರಥಮಾ ದಿನಾಂಕವು. ಕರಿದಿನಗಳು ಶುಭಕಾರ್ಯಗಳಿಗೆ ವರ್ಜ್ಯ.

**ಗುರು ಪುಷ್ಯಾ ಯೋಗ:** ಗುರು ಗ್ರಹವು ಪುಷ್ಯಾ ನಕ್ಷತ್ರದಲ್ಲಿ ಇರುವ ಸಮಯವನ್ನು ಗುರು ಪುಷ್ಯಾ ಯೋಗ ಎನ್ನುತ್ತಾರೆ. [ನಿಶೀತ ಸಮಯದಲ್ಲಿ ಗುರುವಾರದಂದು ಪುಷ್ಯಾ ನಕ್ಷತ್ರ ಇದ್ದರೆ ಆ ದಿನವನ್ನೂ ಗುರು ಪುಷ್ಯಾ ಯೋಗ ಎನ್ನುತ್ತಾರೆ.] ಗುರು ಪುಷ್ಯಾ ಯೋಗದಲ್ಲಿ ಚಿನ್ನ, ಬೆಳ್ಳಿ ಇತ್ಯಾದಿ ಕೊಳ್ಳಲು ಸುಸಮಯ ಎನ್ನುತ್ತಾರೆ.

**ಗ್ರಹಣ ಕರ್ಮಾನುಷ್ಠಾನ:** ಸಚೇಲ ಸ್ನಾನ, ಸ್ಪರ್ಶ ಕಾಲದಲ್ಲಿ ದೇವ ಪೂಜೆ, ಪೂರ್ಣ

ಗ್ರಹಣ ಕಾಲದಲ್ಲಿ ಹೋಮ / ಜಪಗಳು, ಮೋಕ್ಷಕಾಲದಲ್ಲಿ ದಾನ, ಮೋಕ್ಷಾನಂತರ ಶುದ್ಧ ಸ್ನಾನ. ಗ್ರಹಣ ದಿನಗಳಲ್ಲಿ ಸನ್ಯಾಸಿಗಳಿಗೆ, ಶ್ರಾದ್ಧ ಕರ್ತೃಗಳಿಗೆ ಮತ್ತು ವಿಧವೆಯರಿಗೆ ಭೋಜನ ವರ್ಜ್ಯ.

ಗ್ರಸ್ತೋದಯ ಮತ್ತು ಗ್ರಸ್ತಾಸ್ತ ಗ್ರಹಣಗಳಲ್ಲಿ ಪಂಚಾಂಗದಲ್ಲಿ ಕೊಟ್ಟಿರುವ ಸಮಯವನ್ನು ಸ್ಪರ್ಶ ಮತ್ತು ಮೋಕ್ಷಕ್ಕೆ ಉಪಯೋಗಿಸಬೇಕು.

ಸೂರ್ಯ ಗ್ರಹಣದಲ್ಲಿ ಸ್ಪರ್ಶದ ಸಮಯದಿಂದಲೇ ಕರ್ಮಾನುಷ್ಠಾನವನ್ನು ಮಾಡಬೇಕು (ಸ್ಪರ್ಶದಿಂದ ಗ್ರಹಣದ ಮಧ್ಯದ ಸಮಯವು ಗ್ರಹಣದ ಮಧ್ಯದಿಂದ ಮೋಕ್ಷದ ಸಮಯಕ್ಕಿಂತಾ ಅತಿ ಹೆಚ್ಚಾಗಿರುತ್ತದೆ). ಚಂದ್ರ ಗ್ರಹಣದಲ್ಲಿ ಗ್ರಹಣದ ಮಧ್ಯದಿಂದ ಅನುಷ್ಠಾನವನ್ನು ಮಾಡಬೇಕು (ಗ್ರಹಣದ ಮಧ್ಯದ ಸಮಯ, ಗ್ರಹಣದ ಮಧ್ಯದಲ್ಲಿಯೇ ಇರುತ್ತದೆ)

ಜನನ ಮರಣ ಅಶೌಚ ಇರುವವರೂ, ರಜಸ್ವಲಾ ಅಶೌಚ ಇರುವವರೂ ಕೂಡ ಗ್ರಹಣ ಅನುಷ್ಠಾನಕ್ಕೆ ಶುಚಿಯಾಗಿರುವವರು ಎಂದೇ ನಿಯಮ.

**ಗ್ರಹಣ ವೇಧಕಾಲ:** ಸೂರ್ಯ ಗ್ರಹಣ ಸ್ಪರ್ಶಕ್ಕೆ 4 ಯಾಮಗಳು (30 ಘಟಿಗಳು = 12 ಘಂಟೆಗಳು) ಮೊದಲಿನಿಂದ ವೇಧಕಾಲವು. ಚಂದ್ರ ಗ್ರಹಣ ಸ್ಪರ್ಶಕ್ಕೆ 3 ಯಾಮಗಳು (22 1/2 ಘಟಿಗಳು = 9 ಘಂಟೆಗಳು) ಮೊದಲಿನಿಂದ ವೇಧಕಾಲವು. ಗ್ರಹಣ ಕಾಲ ಮತ್ತು ಗ್ರಹಣ ವೇಧಕಾಲವು ಶುಭ ಕಾರ್ಯಗಳಿಗೆ ವರ್ಜ್ಯ. ಗ್ರಹಣ ವೇಧಕಾಲದಲ್ಲಿ ಭೋಜನಾದಿಗಳು ವರ್ಜ್ಯ.

**ದರ್ಶ ಶ್ರಾದ್ಧ:** ಅಮಾವಾಸ್ಯೆಯಂದು ಶ್ರಾದ್ಧಕರ್ತೃಗಳೆಲ್ಲರೂ ಮಾಡುವ ಪಿತೃಕಾರ್ಯಕ್ಕೆ ಹೆಸರು (ವಾರ್ಷಿಕ ಶ್ರಾದ್ಧವಲ್ಲ).

**ದಿನಾಂಕ:** ಸಾಮಾನ್ಯ ದಿನಾಂಕ ಬಳಕೆಗೆ ಚಾಂದ್ರಮಾನ ದಿನಾಂಕಗಳನ್ನು – ಸಂವತ್ಸರ, ಮಾಸ, ಪಕ್ಷ, ತಿಥಿ – ಉಪಯೋಗಿಸುತ್ತಾರೆ. ತಮಿಳುನಾಡಿನಲ್ಲಿ ಮಾತ್ರ ಸೌರಮಾನ ದಿನಾಂಕವನ್ನು ಸಾಮಾನ್ಯ ದಿನಾಂಕ ಬಳಕೆಗೆ ಉಪಯೋಗಿಸುತ್ತಾರೆ.

ಹುಟ್ಟುಹಬ್ಬ ಆಚರಿಸಲು, ತಮಿಳು ನಾಡಿನಲ್ಲಿ ಸೌರ ಮಾಸ ಮತ್ತು ನಕ್ಷತ್ರವನ್ನು, ತುಳು ಮಾತಾಡುವವರು ಸೌರ ಮಾಸ ಮತ್ತು ತಿಥಿಯನ್ನು ದಿನಾಂಕವಾಗಿ ಉಪಯೋಗಿಸುತ್ತಾರೆ. ಒಂದೇ ಸೌರ ಮಾಸದಲ್ಲಿ ಒಂದು ನಕ್ಷತ್ರವು/ತಿಥಿಯು ಎರಡು ಬಾರಿ ಬರುವ ಸಾಧ್ಯತೆ ಇರುವುದು. ಆ ಸಂದರ್ಭಗಳಲ್ಲಿ, ಸೌರ ಮಾಸದಲ್ಲಿನ ಎರಡನೇಯ ನಕ್ಷತ್ರವನ್ನೂ, ಮೊದಲನೆಯ ತಿಥಿಯನ್ನೂ ಗಣನೆಗೆ ತೆಗೆದುಕೊಳ್ಳುತ್ತಾರೆ.

**ಮಹಾಪಾತ:** ವೈಧೃತಿ ಪರ್ವ ಕಾಲ ಮತ್ತು ವ್ಯತೀಪಾತ ಪರ್ವ ಕಾಲಗಳು ಮಹಾಪಾತಗಳು. ಈ ಪರ್ವ ಕಾಲಗಳಲ್ಲಿ, ಗ್ರಹಣ ಕಾಲದಂತೆಯೇ ಸ್ನಾನ, ಜಪ, ತರ್ಪಣ ಮತ್ತು ದಾನವನ್ನು ಮಾಡಬೇಕು. ಒಂದು ಮಹಾಪಾತವನ್ನು ಅನುಷ್ಠಾನ ಮಾಡಿದರೆ ಒಂದು ಕೋಟಿ ಸೂರ್ಯ ಗ್ರಹಣವನ್ನು ಅನುಷ್ಠಾನ ಮಾಡಿದ್ದಕ್ಕೆ ಸಮ ಎಂದು ಹೇಳುತ್ತಾರೆ.

**ಮಾಸ ನಿಯಾಮಕ:** ಮಾಸಗಳ ಅಭಿಮಾನಿ ದೇವತೆಯನ್ನು ಮಾಸ ನಿಯಾಮಕ,

ಮಾಸ ಮೂರ್ತಿ, ಮಾಸ ನಾಮ[1] ಎಂದೂ ಕರೆಯುತ್ತಾರೆ. ಮಾಸದ ಹೆಸರು ಹೇಳುವಾಗ ಚೈತ್ರ–ವಿಷ್ಣು ಮಾಸ, ವೈಶಾಖ–ಮಧುಸೂಧನ ಮಾಸ, ಇತ್ಯಾದಿ ಎಂದು ಹೇಳುವುದೂ ರೂಢಿಯಲ್ಲಿದೆ. 1 – ಮಕ್ಕಳ ಹೆಸರಾಗಿ ಇಡುವ ಮಾಸ ನಾಮ ಇದಲ್ಲ.

**ಪಕ್ಷ ಮಾಸ:** ಭಾದ್ರಪದ ಮಾಸದ ಕೃಷ್ಣ ಪಕ್ಷಕ್ಕೆ **ಮಹಾಲಯ ಪಕ್ಷ** ಎನ್ನುತ್ತಾರೆ. ಮುತ್ತೈದೆಯಾಗಿ ಕಾಲವಾದವರಿಗಾಗಿ ನವಮೀ (**ಅವಿಧವಾ ನವಮೀ**), ಅಪಘಾತದಲ್ಲಿ/ ಶಸ್ತ್ರದಿಂದ ಹತರಾದವರಿಗಾಗಿ ಚತುರ್ದಶೀ (**ಘಾತ ಚತುರ್ದಶೀ**), ಈ ಪಕ್ಷದಲ್ಲಿ ಮೀಸಲಾಗಿಟ್ಟಿದ್ದಾರೆ.

ಕಾಲವಾಗಿರುವವರಿಗೆ, ಈ ಪಕ್ಷದಲ್ಲಿ ಅವರ ವಂಶಸ್ತರು ಶ್ರಾದ್ಧ ಮಾಡುತ್ತಾರೆ (ಇದು ವಾರ್ಷಿಕ ಶ್ರಾದ್ಧ ಅಲ್ಲದೆ ಪ್ರತ್ಯೇಕ). ಇದಕ್ಕಾಗಿ ಈ ಪಕ್ಷದಲ್ಲಿ ಯಾವುದಾದರೂ ಒಂದು ತಿಥಿಯಲ್ಲಿ (ಪಿತೃ ಕಾಲವಾದ ಮಾಸ, ತಿಥಿ ಯಾವುದೇ ಇರಲಿ) ಶ್ರಾದ್ಧಕರ್ತೃಗಳು ಕಾಲವಾಗಿರುವ ತಮ್ಮ ವಂಶಸ್ಥರ ಜೊತೆಯಲ್ಲಿ ಕಾಲವಾದ ಬೇರೆ ನೆಂಟರು ಮತ್ತು ಇಷ್ಟರನ್ನೂ ಸೇರಿಸಿ ಶ್ರಾದ್ಧ ಮಾಡುವುದು ರೂಢಿಯಲಿದೆ. ಇದಕ್ಕೆ **ಪಕ್ಷ ಶ್ರಾದ್ಧ** ಎನ್ನುತ್ತಾರೆ.

**ಪರ್ವ ಕಾಲ:** ಸೂರ್ಯನ ಚಲನೆಯಲ್ಲಿ ಪರ್ವ ಕಾಲಗಳು ಮುಖ್ಯವಾದ ಮೈಲಿಗಲ್ಲುಗಳು. ಪರ್ವ ಕಾಲಗಳಲ್ಲಿ, ಗ್ರಹಣ ಕಾಲದಂತೆಯೇ ಸ್ನಾನ, ಜಪ, ತರ್ಪಣ ಮತ್ತು ದಾನವನ್ನು ಮಾಡಬೇಕು.

**ಪಾರಣೆ:** ಉಪವಾಸದ ನಂತರ ಭೋಜನಕ್ಕೆ ಹೆಸರು. ಸಾಮಾನ್ಯವಾಗಿ ದ್ವಾದಶೀಯ ಹಗಲಿನ ಭೋಜನಕ್ಕೆ ಅನ್ವಯಿಸುತ್ತದೆ.

**ಪುಣ್ಯದಿನ:** ಕಾಲವಾಗಿರುವ ವ್ಯಕ್ತಿಗೆ ಭಕ್ತಿಪೂರ್ವಕ ನಮನ ಮಾಡುವ ದಿನ. ಇಚ್ಛೆ ಇರುವವರು ಯಾರು ಬೇಕಾದರೂ ಆಚರಿಸಬಹುದು. ಕಾಲವಾದ ದಿನದ ತಿಥಿಯ ದಿನಾಂಕದ ದಿನವೇ ಪುಣ್ಯ ದಿನ. ಅಧಿಕ ತಿಥಿಯಿದ್ದಲ್ಲಿ, ಪುಚ್ಛದ ದಿನವನ್ನು ಆಚರಿಸಬೇಕು. ಪುಣ್ಯದಿನ ಒಂದು ಹಬ್ಬದರೀತಿಯಲ್ಲಿ ಆಚರಣೆ. ಪುಣ್ಯದಿನ ಮತ್ತು ಶ್ರಾದ್ಧ ಒಂದೇ ಅಲ್ಲ.

**ಪುಷ್ಯಾರ್ಕ ಯೋಗ:** ಸೂರ್ಯನು ಪುಷ್ಯಾ ನಕ್ಷತ್ರದಲ್ಲಿ ಇರುವ ಸಮಯವನ್ನು ಪುಷ್ಯಾರ್ಕ ಯೋಗ ಎನ್ನುತ್ತಾರೆ. [ನಿಶೀತ ಸಮಯದಲ್ಲಿ ಭಾನುವಾರದಂದು ಪುಷ್ಯಾ ನಕ್ಷತ್ರ ಇದ್ದರೆ ಆ ದಿನವನ್ನೂ ಪುಷ್ಯಾರ್ಕ ಯೋಗ ಎನ್ನುತ್ತಾರೆ.] ಪುಷ್ಯಾರ್ಕ ಯೋಗದಲ್ಲಿ ಗುರುಗಳ ಸ್ತೋತ್ರವನ್ನು 108 ಸಲ ಜಪಿಸಬೇಕು ಎನ್ನುತ್ತಾರೆ. ಸಾಮಾನ್ಯವಾಗಿ ಶ್ರೀ ರಾಘವೇಂದ್ರ ಸ್ವಾಮಿಗಳ ಸ್ತೋತ್ರ ಎಂಬುದು ರೂಢಿಯಲ್ಲಿದೆ.

**ಸಂಕಲ್ಪ:** ಸಂಕಲ್ಪ ಸ್ಥಳ, ಸಮಯ, ವ್ಯಕ್ತಿ ಮತ್ತು ಕಾರ್ಯವನ್ನು ವಿವರಿಸುತ್ತದೆ. ಸಮಯವನ್ನು ಹೇಳುವಾಗ ಶಕೆ, ಸಂವತ್ಸರ, ಅಯನ, ಋತು, ಮಾಸ, ಪಕ್ಷ, ತಿಥಿ, ವಾರ, ನಕ್ಷತ್ರ, ಯೋಗ ಮತ್ತು ಕರಣಗಳನ್ನು ಹೇಳಬೇಕು. ಶುಭ ತಿಥಿ, ಶುಭ ನಕ್ಷತ್ರ, ಶುಭ ಯೋಗ, ಶುಭ ಕರಣ ಇತ್ಯಾದಿ ಸುಲಭ ವಿಧಾನದ ಸಂಕಲ್ಪದಿಂದ ಪಂಚ ಅಂಗಗಳ ಪಠಣದಿಂದ ಸಿಗುವ ಫಲಗಳಿಂದ ವಂಚನೆಯಾಗುವುದು.

**ಶಣ್ಣವತಿ:** ಅಂದರೆ 96. ವರ್ಷದಲ್ಲಿ 96 ದಿನಗಳಲ್ಲಿ ಶ್ರಾದ್ಧ ಅಥವಾ ತರ್ಪಣವನ್ನು ಆಚರಿಸಬೇಕು. ಆ ದಿನಗಳು: 12 ಅಮಾವಾಸ್ಯೆಗಳು, 4 ಯುಗಾದಿಗಳು, 14 ಮನ್ವಾದಿಗಳು, 12 ಸಂಕ್ರಮಣಗಳು, 12 ವೈಧೃತಿ ಯೋಗಗಳು, 12 ವ್ಯತೀಪಾತ ಯೋಗಗಳು, 15

ಪಕ್ಷ ಮಾಸದ ದಿನಗಳು, 5 ಅಷ್ಟಕಗಳು, 10 ಅನ್ವಷ್ಟಕಗಳು.

**ಶ್ರಾದ್ಧ:** ಸಾಮಾನ್ಯವಾಗಿ ಪ್ರತಿವರ್ಷ ಮಾಡುವ ಪಿತೃಕಾರ್ಯಕ್ಕೆ ಹೆಸರು. ಶ್ರಾದ್ಧವನ್ನು ವಂಶಸ್ತರಿಗೆ ಮಾತ್ರ ಮಾಡಲು ಅಧಿಕಾರ. ಶ್ರಾದ್ಧದ ದಿನವನ್ನು ಕಾಲವಾದ ತಿಥಿಯು ಶ್ರಾದ್ಧ ತಿಥಿಯಾಗಿರುವ ದಿನದಂದೇ ಆಚರಿಸಬೇಕು. ಶ್ರಾದ್ಧ ಮಾಡಲು ಅಧಿಕಾರವಿರುವವರೆಲ್ಲಾ ಶಣ್ಣವತಿಯನ್ನೂ ಆಚರಿಸಬೇಕು.

**ಶುಭ ನಕ್ಷತ್ರಗಳು:** ಧ್ರುವ (ಅತ್ಯುತ್ತಮ) – ರೋಹಿಣೀ, ಉತ್ತರ, ಉತ್ತರಾಷಾಢಾ, ಉತ್ತರಾಭಾದ್ರಾ; **ಲಘು** – ಹಸ್ತಾ, ಅಶ್ವಿನೀ, ಪುಷ್ಯಾ, ಅಭಿಜಿತ್; **ಮೃದು** – ಮೃಗಶಿರಾ, ಚಿತ್ರಾ, ಅನುರಾಧಾ, ರೇವತೀ; **ಚರ** – ಸ್ವಾತೀ, ಪುನರ್ವಸು, ಧನಿಷ್ಠಾ, ಶತಭಿಷಾ; **ಮಧ್ಯಮ** – ಮಘಾ, ಮೂಲಾ, ವಿಶಾಖಾ

**ಶುಭ ತಿಥಿಗಳು:** 2, 3, 5, 7, 10, 13 ಮತ್ತು 15 ಅಂದರೆ ದ್ವಿತೀಯಾ, ತೃತೀಯಾ, ಪಂಚಮೀ, ಸಪ್ತಮೀ, ದಶಮೀ, ತ್ರಯೋದಶೀ ಮತ್ತು ಪೌರ್ಣಮೀ

**ಶುಭ ವಾರಗಳು:** ಸೋಮ, ಬುಧ, ಗುರು ಮತ್ತು ಶುಕ್ರ.

**ಶುಭ ಯೋಗಗಳು:** ಪ್ರೀತಿ, ಆಯುಶ್ಮಾನ್, ಸೌಭಾಗ್ಯ, ಶೋಭನ, ಸುಕರ್ಮನ್, ಧೃತಿ, ವೃದ್ಧಿ, ಧ್ರುವ, ಹರ್ಶಣ, ಸಿದ್ಧಿ, ವರೀಯಾನ್, ಶಿವ, ಸಿದ್ಧ, ಸಾಧ್ಯ, ಶುಭ, ಶುಕ್ಲ, ಬ್ರಹ್ಮ, ಐಂದ್ರ

**ಸೋಪಪದ:** ಸೋಪಪದಗಳು ನಾಲ್ಕು ದಿನಗಳು. ಅವುಗಳು ಉಪನಯನಕ್ಕೆ ವರ್ಜ್ಯ.

**ಸೂರ್ಯೋದಯದಲ್ಲಿನ ತಿಥಿ, ನಕ್ಷತ್ರ, ಯೋಗ, ಕರಣ:** ಸ್ನಾನ, ಸಂಧ್ಯಾವಂದನ, ದಾನ, ಹೋಮ ಇತ್ಯಾದಿ ಕಾರ್ಯಗಳ ಸಂಕಲ್ಪಕ್ಕೆ, ಸೂರ್ಯೋದಯದಲ್ಲಿನ ತಿಥಿ, ನಕ್ಷತ್ರ, ಯೋಗ, ಕರಣಗಳನ್ನೇ ಉಪಯೋಗಿಸಬೇಕು.

**ದೆಶೆಗಳು ಮತ್ತು ಭುಕ್ತಿಗಳು**

ಜ್ಯೋತಿಷ್ಕರು ದೆಶೆಗಳನ್ನು ಮುಂದೆ ಆಗುವುದನ್ನು ಹೇಳಲಿಕ್ಕೆ ಉಪಯೋಗಿಸುತ್ತಾರೆ. ದೆಶೆಗಳ ಪದ್ಧತಿಯಲ್ಲಿ ಕೆಲವು ನಕ್ಷತ್ರಗಳಿಗೆ ಒಂದು ಗ್ರಹವನ್ನು ಒಡೆಯ ಎಂದು ಕರೆದಿದ್ದಾರೆ. ಆ ಒಡೆಯನಿಗೆ ಒಡೆತನದ ಅವಧಿಯನ್ನೂ ನಿಗದಿ ಮಾಡಿದ್ದಾರೆ. ಈ ಒಡೆತನದ ಅವಧಿಗೆ ದೆಶೆ ಎಂದು ಹೆಸರು.

**ದೆಶೆಗಳ ಕೋಷ್ಟಕ**

| ಕ್ರ. ನಕ್ಷತ್ರ | ದೆಶೆ | ಕಾಲಾವಧಿ ವರ್ಷಗಳು |
|---|---|---|
| 1 ಕೃತ್ತಿಕಾ, ಉತ್ತರಾಫಲ್ಗುನೀ(ಉತ್ತರ), ಉತ್ತರಾಷಾಢಾ | ಸೂರ್ಯ | 6 |
| 2 ರೋಹಿಣೀ, ಹಸ್ತಾ, ಶ್ರವಣಾ | ಚಂದ್ರ | 10 |
| 3 ಮೃಗಶಿರಾ, ಚಿತ್ರಾ, ಧನಿಷ್ಠಾ | ಕುಜ | 7 |
| 4 ಆರ್ದ್ರಾ, ಸ್ವಾತೀ, ಶತಭಿಷಾ | ರಾಹು | 18 |
| 5 ಪುನರ್ವಸು, ವಿಶಾಖಾ, ಪೂರ್ವಾಭಾದ್ರಾ | ಗುರು | 16 |
| 6 ಪುಷ್ಯಾ, ಅನುರಾಧಾ, ಉತ್ತರಾಭಾದ್ರಾ | ಶನಿ | 19 |
| 7 ಆಶ್ಲೇಷಾ, ಜ್ಯೇಷ್ಠಾ, ರೇವತೀ | ಬುಧ | 17 |
| 8 ಮಘಾ, ಮೂಲಾ, ಅಶ್ವಿನೀ | ಕೇತು | 7 |
| 9 ಪೂರ್ವಾಫಲ್ಗುನೀ(ಪುಬ್ಬ), ಪೂರ್ವಾಷಾಢಾ, ಭರಣೀ | ಶುಕ್ರ | 20 |

ದೆಶೆಗಳ ಕಾಲಾವಧಿಯ ಮೊತ್ತ 120 ವರ್ಷಗಳು ಆಗುತ್ತದೆ. ಇದು ಮನುಷ್ಯರ ಪೂರ್ಣ ಆಯುಷ್ಯ ಎನ್ನುತ್ತಾರೆ. ಜನನ ಕಾಲದಲ್ಲಿ ಚಂದ್ರಗ್ರಹದ ಸ್ಥಾನವು (ನಕ್ಷತ್ರ) ಜನನ ಕಾಲದಲ್ಲಿ ನಡೆಯುತ್ತಿರುವ ದೆಶೆ ಮತ್ತು ಆ ದೆಶೆಯ ಜನನಸಮಯದಲ್ಲಿ ಉಳಿದಿರುವ ಕಾಲಾವಧಿಯನ್ನು ಸೂಚಿಸುತ್ತದೆ. ಉದಾಹರಣೆಗೆ ನಕ್ಷತ್ರವು ಪ್ರಾರಂಭದಲ್ಲಿಯೇ ಇದ್ದರೆ ದೆಶೆಯ ಪೂರ್ಣಾವಧಿಯು ಉಳಿದಿರುವ ಕಾಲಾವಧಿ, ನಕ್ಷತ್ರವು ಅರ್ಧ ಕಾಲಾವಧಿ ಸಂದಿದ್ದರೆ, ದೆಶೆಯ ಅರ್ಧ ಅವಧಿಯಷ್ಟೇ ಉಳಿದಿರುವ ಕಾಲಾವಧಿ, ಇತ್ಯಾದಿ.

ಒಂದು ದೆಶೆಯ ಕಾಲಾವಧಿಯ ನಂತರ ಮುಂದಿನ ದೆಶೆಯು ಮೇಲೆ ಕೊಟ್ಟಿರುವ ಕ್ರಮದಲ್ಲೇ ಬರುತ್ತದೆ. ಉದಾಹರಣೆಗೆ ಕೇತು ದೆಶೆಯ ನಂತರ ಶುಕ್ರ ದೆಶೆ, ಸೂರ್ಯ ದೆಶೆ, . . ಇತ್ಯಾದಿ. ಪ್ರತಿಯೊಂದು ದೆಶೆಯ ಕಾಲಾವಧಿಯಲ್ಲೂ 9 ಉಪ ಕಾಲಾವಧಿಗಳು ಇರುತ್ತವೆ. ಈ ಉಪ ಕಾಲಾವಧಿಗೆ **ಭುಕ್ತಿ** ಎಂದು ಹೆಸರು. ಭುಕ್ತಿಗಳಿಗೆ 9 ಗ್ರಹಗಳೇ ಒಡೆಯರು. ಭುಕ್ತಿಗಳಿಗೆ ದೆಶೆಗಳಂತೆಯೇ ಒಡೆಯ ಗ್ರಹಗಳ ಹೆಸರೇ ಉಪಯೋಗಿಸುತ್ತಾರೆ. ದೆಶೆಗಳ ಲೆಖ್ಖಾಚಾರಕ್ಕೆ ಹಲವು ವಿಧಗಳಿವೆ. ವಿಂಶೋತ್ತರಿ ವಿಧ ಬಹಳವಾಗಿ ಉಪಯೋಗದಲ್ಲಿದೆ.

**ಭುಕ್ತಿಯ ಕಾಲಾವಧಿ**

ಭುಕ್ತಿಗಳ ಕಾಲಾವಧಿಯು ಆ ಆ ಗ್ರಹಗಳ ದೆಶೆಗಳ ಕಾಲಾವಧಿಯ ಪ್ರಮಾಣದಲ್ಲಿಯೇ ಇರುತ್ತದೆ. ಉದಾಹರಣೆಗೆ: ಸೂರ್ಯ ಭುಕ್ತಿಯು 6/120 ಪ್ರಮಾಣದಲ್ಲಿ, ಚಂದ್ರ ಭುಕ್ತಿಯು 10/120 ಪ್ರಮಾಣದಲ್ಲಿ, . ಇತ್ಯಾದಿ. ಸೂರ್ಯನ ದೆಶೆಯಲ್ಲಿ ಸೂರ್ಯ ಭುಕ್ತಿಯಿಂದ ಪ್ರಾರಂಭವಾಗುತ್ತದೆ, ಅಂತೆಯೇ ಚಂದ್ರನ ದೆಶೆಯಲ್ಲಿ ಚಂದ್ರ ಭುಕ್ತಿಯಿಂದ.

ಉದಾಹರಣೆಗೆ ಸೂರ್ಯ ದೆಶೆಯ ಭುಕ್ತಿಗಳ ಕಾಲಾವಧಿ ಕಂಡುಹಿಡಿಯಲು:

ಸೂರ್ಯನ ದೆಶೆ ಕಾಲಾವಧಿ = 6 ವರ್ಷಗಳು

| | | | | | | [1] ಮಿಕ್ಕ ಅಂಕೆಗಳಿಂದ ಮಾಸಗಳು ಮತ್ತು ವರ್ಷಗಳು | | |
|---|---|---|---|---|---|---|---|---|
| **ಭುಕ್ತಿ**[1] | ಭುಕ್ತಿಯ ಕಾಲಾವಧಿಯ ಪ್ರಮಾಣ | ಸೂರ್ಯದೆಶೆಯ ಕಾಲಾವಧಿಯಿಂದ ಆ ಆ ದೆಶೆಯ ಕಾಲಾವಧಿಯನ್ನು ಗುಣಿಸುವುದು | | ಫಲಿತಾಂಶದ ಕೊನೆಯ ಅಂಕಿಯನ್ನು 3 ರಿಂದ ಗುಣಿಸಿದಾಗ ದಿನಗಳು ಬರುತ್ತವೆ[1] | | ವರ್ಷಗಳು | ಮಾಸಗಳು | ದಿನಗಳು[1] |
| ಸೂರ್ಯ | 6/120 | 6x6 | = | 36 | 6x3 | 0 | 3 | 18 |
| ಚಂದ್ರ | 10/120 | 10x6 | = | 60 | 0x3 | 0 | 6 | 0 |
| ಕುಜ | 7/120 | 7x6 | = | 42 | 2x3 | 0 | 4 | 6 |
| ರಾಹು | 18/120 | 18x6 | = | 108 | 8x3 | 0 | 10 | 24 |
| ಗುರು | 16/120 | 16x6 | = | 96 | 6x3 | 0 | 9 | 18 |
| ಶನಿ | 19/120 | 19x6 | = | 114 | 4x3 | 0 | 11 | 12 |
| ಬುಧ | 17/120 | 17x6 | = | 102 | 2x3 | 0 | 10 | 6 |
| ಕೇತು | 7/120 | 7x6 | = | 42 | 2x3 | 0 | 4 | 6 |
| ಶುಕ್ರ | 20/120 | 20x6 | = | 120 | 0x3 | 1 | 0 | 0 |

**ಮೇಲಿನ ಉದಾಹರಣೆಯಲ್ಲಿ ಸೂರ್ಯ ದೆಶೆಯ ಭುಕ್ತಿಗಳಿಗಾಗಿ ಸೂರ್ಯ ದೆಶೆಯ ಕಾಲಾವಧಿಯಿಂದ ಗುಣಿಸಿದೆ. ಚಂದ್ರ ದೆಶೆಗೆ ಅದರ ಕಾಲಾವಧಿಯಿಂದ, ಇತ್ಯಾದಿ ಮಾಡಬೇಕು. ಚಂದ್ರ ದೆಶೆಯಲ್ಲಿ ಚಂದ್ರ ಭುಕ್ತಿಯಿಂದ ಆರಂಭ.**

ದೆಶೆಗಳು ಮತ್ತು ದೆಶೆಗಳ ಕಾಲಾವಧಿಯು ನಕ್ಷತ್ರಕ್ಕೆ ಸಂಬಂಧಪಟ್ಟವಾದ್ದರಿಂದ ಕಾಲಾವಧಿಯ ವರ್ಷಗಳು ನಕ್ಷತ್ರ ವರ್ಷದಲ್ಲಿರುತ್ತವೆ.

**ಲೇಖಕನ ಪರಿಮಿತಿ**

ಶಾಸ್ತ್ರ ಮತ್ತು ಜ್ಯೋತಿಷ್ಯ ವಿಷಯಗಳನ್ನು ಕೇವಲ ಪರಿಚಯಕ್ಕಾಗಿ ಕೊಟ್ಟಿದೆ. ಇದರ ಉಪಯೋಗದ ಪರಿಣಾಮಗಳಿಗೆ ಲೇಖಕನು ಜವಾಬ್ದಾರನಲ್ಲ.


ಲೇಖಕರು:

**ಎಸ್. ನರಸಿಂಹ ರಾವ್,**

ಚಾರ್ಟರ್ಡ್ ಇಂಜಿನಿಯರ್,

23, ಪೆರುಮಾಳ್ ಕೋಯಿಲ್ ಸ್ಟ್ರೀಟ್,

ವೆಸ್ಟ್ ಮಾಂಬಳಂ, ಚೆನ್ನೈ 600 033

ಫೋನ್: 91 44 2485 1192,

ಇಮೈಲ್: snrao@globoteg.com



***ವಿಷಯಗಳನ್ನು ತಿಳಿಸಿ ಕೃಪೆ ಮಾಡಿರುವವರು:***

ಪಂಚಾಂಗ ಗುರುಗಳು:

**ಶ್ರೀ ಆರ್. ಪದ್ಮನಾಭಾಚಾರ್,**

24, ಫೈರ್ ವುಡ್ ಶೆಲ್ ಸ್ಟ್ರೀಟ್,

ತಿರುವಲ್ಲಿಕೇಣಿ, ಚೆನ್ನೈ 600 005

ಫೋನ್: 91 44 2844 7110